|| ಶ್ರೀ ಜಗದ್ಗುರು ಚಿದ್ಘನಲಿಂಗ ಶಿವಾಚಾರ್ಯಃ ಪ್ರಸೀದತು ||

ಶ್ರೀ ದೈವ ದರ್ಪಣ

ಗ್ರಂಥಕರ್ತರು :
ಜ್ಯೋತಿರ್ವಿದ್ಯಾ ವಿಭೂಷಣ, ಸಾಹಿತ್ಯ ರತ್ನ,
ವೇ. ಬಸವಯ್ಯ ಶಾಸ್ತ್ರಿಗಳು ಹಿರೇಮಠ, ಗದಗ.

ಪ್ರಕಾಶಕರು :
[illegible] ಶಾಬಾದಿಮಠ ಬುಕ್-ಡಿಪೊ,
ಗದಗ.

Venkoba Rao
99/2, Gavipuram

|| ಶ್ರೀ ಜಗದ್ಗುರು ಚಿದ್ಘನಲಿಂಗ ಶಿವಾಚಾರ್ಯಃ ಪ್ರಸೀದತು ||

ಸ್ತ್ರೀ ದೈವ ದರ್ಪಣ

ಗ್ರಂಥಕರ್ತರು :

ಜ್ಯೋತಿರ್ವಿದ್ಯಾ ವಿಭೂಷಣ ಸಾಹಿತ್ಯ ರತ್ನ
ವೇ. ಬಸವಯ್ಯ ಶಾಸ್ತ್ರಿಗಳು ಹಿರೇಮಠ, ಗದಗ

ಪ್ರಕಾಶಕರು :

ಮೆ|| ಪಿ. ಸಿ. ಶಾಬಾದಿಮಠ ಬುಕ್ ಡಿಪೊ, ಗದಗ

ಪ್ರಸ್ತಾವನೆ

ಜ್ಯೋತಿಷ್ಯ ಶಾಸ್ತ್ರದಲ್ಲಿ ಪಂಡಿತರು ಓದಿ ತಿಳಿದುಕೊಳ್ಳಬಹುದಾದ ಗ್ರಂಥಗಳು ಈ ವರೆಗೆ ಹೇರಳವಾಗಿ ಹೊರಟಿವೆ. ಆದರೆ ಈ ಶಾಸ್ತ್ರವನ್ನು ಸುಲಭವಾಗಿ ತಿಳಿದುಕೊಳ್ಳಲು ಅನುಕೂಲವಾಗುವಂತಹ ಗ್ರಂಥಗಳು ದೊರೆಯುವದು ಬಹು ಅಪರೂಪ. ಅದಕ್ಕಾಗಿ ಸಾಮಾನ್ಯಜನರು ಸಹ ತಮ್ಮ ಮುಂದಿನ ಜೀವನದ ಸುಖ, ದುಃಖ, ಪತ್ನಿ, ಪುತ್ರ, ಆಯುಷ್ಯ, ಆರೋಗ್ಯಾದಿ ವಿಷಯಗಳನ್ನು ಅರಿತುಕೊಂಡು ಸ್ವಾರಸ್ಯವಾದ ಸಂಸಾರವನ್ನು ಸಾಗಿಸಲಿ, ಮತ್ತು ಜ್ಯೋತಿಷ್ಯದ ಪ್ರಾರಂಭದ ಸಂಗತಿಗಳನ್ನು ತಿಳಿದುಕೊಳ್ಳಲಿ ಎಂಬ ಉದ್ದೇಶದಿಂದ ಈ ಗ್ರಂಥವನ್ನು ಪ್ರಕಟಿಸಲಾಗಿದೆ. ಇದರಲ್ಲಿಯ ಯಾವದೇ ದೃಷ್ಟಿದೋಷಾದಿಗಳನ್ನು ಸುಜ್ಞರು ಸೂಚಿಸಿದಲ್ಲಿ ನಮ್ರತೆಯಿಂದ ಸ್ವೀಕರಿಸುವೆವು.

ವಿದ್ವಜ್ಜನವಿಧೇಯ,

೧೯೦೨ ಯುಗಾದಿ — ಬಸವಯ್ಯಶಾಸ್ತ್ರಿ ಹಿರೇಮಠ

— ವಿಷಯಾನುಕ್ರಮಣಿಕೆ —

ವಿಷಯ		ಪುಟ
೧	ಮಾಸ ಜನನ ಫಲ	೧
೨	ಪಕ್ಷ ಜನನ ಫಲ	೩
೩	ತಿಥಿ ಜನನ ಫಲ	೫
೪	ಅಶ್ವಿನ್ಯಾದಿ ೨೭ ನಕ್ಷತ್ರಗಳಲ್ಲಿ ಜನನವಾದ ಫಲ	೯
೫	ಮೇಷಾದಿ ೧೨ ರಾಶಿಗಳಲ್ಲಿ ಜನನವಾದ ಫಲ	೧೩
೬	ಮೇಷಾದಿ ೧೨ ಲಗ್ನಗಳಲ್ಲಿ ಜನನವಾದ ಫಲ	೧೪
	ಜನನ ಲಗ್ನ ಕುಂಡಲಿಯೊಳು ೧೨ ಸ್ಥಾನಗಳಲ್ಲಿ ಇರತಕ್ಕ ಗ್ರಹಗಳ ಫಲ	
೭	ಲಗ್ನದಿಂದ ೧೨ ಸ್ಥಾನಗಳಲ್ಲಿ ಇರುವ ರವಿಯ ಫಲ	೧೬
೮	ಲಗ್ನದಿಂದ ೧೨ ಸ್ಥಾನಗಳಲ್ಲಿ ಇರುವ ಚಂದ್ರನ ಫಲ	೧೮
೯	ಲಗ್ನದಿಂದ ೧೨ ಸ್ಥಾನಗಳಲ್ಲಿ ಇರುವ ಕುಜನ ಫಲ	೨೦

೧೦ ಲಗ್ನದಿಂದ ೧೨ ಸ್ಥಾನಗಳಲ್ಲಿ ಇರುವ ಬುಧನ ಫಲ ೨೧
೧೧ ಲಗ್ನದಿಂದ ೧೨ ಸ್ಥಾನಗಳಲ್ಲಿ ಇರುವ ಗುರುವಿನ ಫಲ ೨೩
೧೨ ಲಗ್ನದಿಂದ ೧೨ ಸ್ಥಾನಗಳಲ್ಲಿ ಇರುವ ಶುಕ್ರನ ಫಲ ೨೫
೧೩ ಲಗ್ನದಿಂದ ೧೨ ಸ್ಥಾನಗಳಲ್ಲಿ ಇರುವ ಶನಿಯ ಫಲ ೨೬
೧೪ ಲಗ್ನದಿಂದ ೧೨ ಸ್ಥಾನಗಳಲ್ಲಿ ಇರುವ ರಾಹುವಿನ ಫಲ ೨೮
೧೫ ಲಗ್ನದಿಂದ ೧೨ ಸ್ಥಾನಗಳಲ್ಲಿ ಇರುವ ಕೇತುವಿನ ಫಲ ೩೦
೧೬ ಸ್ತ್ರೀಡಿಂಭಚಕ್ರವು ೩೨

ದ್ವಾದಶ ಸ್ಥಾನಗಳಲ್ಲಿರುವ ಭಾವಾಧಿಪತಿಗಳ ಫಲ ವಿಚಾರವು

೧೭ ಲಗ್ನಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ ೩೩
೧೮ ದ್ವಿತೀಯಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ ೩೪
೧೯ ತೃತೀಯಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ ೩೬
೨೦ ಚತುರ್ಥಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ ೩೭
೨೧ ಪಂಚಮಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ ೩೯
೨೨ ಷಷ್ಠಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ ೪೧
೨೩ ಸಪ್ತಮಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ ೪೨
೨೪ ಅಷ್ಟಮಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ ೪೪
೨೫ ನವಮಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ ೪೬
೨೬ ದಶಮಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ ೪೭
೨೭ ಏಕಾದಶಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ ೪೯
೨೮ ದ್ವಾದಶಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ ೫೧
೨೯ ತ್ರಿಂಶಾಂಶ ಫಲ ವಿಚಾರವು ೫೩

ವಿವಾಹಯೋಗ

೩೦ ವಿವಾಹದ ಕಾಲಕ್ಕೆ ವಧೂವರರ ಕುಂಡಲಿಯಲ್ಲಿ ಗೋಚಾರ ಗ್ರಹಗಳ ಸ್ಥಿತಿ, ವಿವಾಹವು ತಡವಾಗಿ ಆಗುವಯೋಗ, ಶೀಘ್ರ ವಿವಾಹವಾಗುವ ಯೋಗ. ೫೮
೩೧ ಲಗ್ನವಾಗುವ ವರ್ಷ ತಿಳಿಯುವದು. ೫೯
೩೨ ವಿಷ ಕನ್ಯಾಯೋಗ ಹಾಗೂ ಫಲ ವಿಷಕನ್ಯಾಯೋಗಕ್ಕೆ ದೋಷ ಪರಿಹಾರ. ೬೦

೩೩ ವಧೂವರರ ಜಾತಕ ಸಮ್ಮೇಲನ ೬೧
೩೪ ಮಂಗಳ ದೋಷವಿಚಾರ, ಕುಜದೋಷಕ್ಕೆ ಅಪವಾದ ೬೩
೩೫ ಕೂಟ ಸಾಲಾವಳಿ, ದಾಂಪತ್ಯ ಜೀವನದ ಸುಖದುಃಖಗಳು
೩೬ ಸಂತಾನ ವಿಷಯ, ಮೃತಸಂತಾನ, ಶಸ್ತ್ರಕ್ರಿಯೆಯಿಂದ ಸಂತಾನ ೭೨
೩೭ ಸಂತತಿ ನಷ್ಟಯೋಗ, ಸಂತಾನ ಪ್ರತಿಬಂಧಕ ಯೋಗಕ್ಕೆ ಶಾಪಗಳು ೭೩
೩೮ ಪಾಪ ಪರಿಹಾರ ಉಪಾಯ, ಸಂತಾನಕ್ಕೆ ವಿಘ್ನಕಾರಿಯಾದ ಗ್ರಹ ಶಾಂತಿಯು.
೩೯ ದತ್ತಕ ಪುತ್ರಯೋಗ ನಿಪುತ್ರಕತ್ವಯೋಗ, ಒಂದೇ ಸಂತತಿಯಾಗುವ ಯೋಗ, ನಿಪುತ್ರಿಕಳಾಗುವ ಯೋಗ, ಗರ್ಭಸ್ರಾವವಾಗುವದನ್ನು ತಿಳಿಯುವದು.
೪೦ ಇಬ್ಬರ ಗಂಡಂದಿರು (ಉಡಕಿ) ವಿವಾಹ ಯೋಗ.
ವಿಧವಾಯೋಗ, ನಾನಾರೀತಿಯ ಮರಣ ಯೋಗ.
ಗಂಡನಿಗಿಂತ ಮೊದಲು ಸಾಯುವ ಯೋಗ, ಮೃತ್ಯುಯೋಗ
ಗಂಡನ ಅನುಮತಿಯಿಂದ ವ್ಯಭಿಚಾರಯೋಗ, ತಾಯಿಯು ಸಹಿತ ವ್ಯಭಿಚಾರಯೋಗ ಶುಭಯೋಗಗಳು.

ಸ್ತ್ರೀಯರ ಪ್ರಥಮ ಋತು (ಮೈನೆರೆತ) ವಿಷಯ

೧ ಮಾಸಫಲ	೮೬	೧೦ ಸ್ಥಾನಫಲ	೧೦೨
೨ ವಾರಫಲ	೮೭	೧೧ ವಸ್ತ್ರಫಲ	೧೦೩
೩ ತಿಥಿಫಲ	೮೮	೧೨ ರಜೋಬಿಂದುಫಲ	೧೦೪
೪ ನಕ್ಷತ್ರ ಫಲ	೮೯	೧೩ ಮಕ್ಕಳವಿಚಾರ, ಋತು ನಕ್ಷತ್ರಗಳಲ್ಲಿ ಇರುವ ಗ್ರಹಗಳ ಫಲ	೧೦೫
೫ ಯೋಗಫಲ			
೬ ಕರಣ ಫಲ	೯೮	೧೪ ಆರ್ತವಲಗ್ನಗ್ರಹಫಲ, ರಜಲಾಚಕ್ರ	೧೦೬
೭ ಹೋರಾ ಫಲ	೯೯	೧೫ ಪ್ರಶ್ನಕರ್ತನು ನಿಲ್ಲುವ ದಿಕ್ಕಿನಿಂದ ವಸ್ತ್ರ, ಬಿಂದು ಮಕ್ಕಳ ಸಂಖ್ಯಾ ತಿಳಿಯುವದು	೧೦೮
೮ ರಾಶಿಯ ಫಲ ಲಗ್ನಫಲ	೧೦೦	೧೬ ರಜಸ್ವಲಾಪತ್ರಿಕೆಬರೆಯುವ ನಮೂನೆ	೧೦೯
೯ ಸಮಯ ಫಲ	೧೦೧		

—॥ ಶ್ರೀ ॥—

– ಶ್ರೀ ಮಹಾಗಣಾಧಿಪತಯೇ ನಮಃ –

– ಮಾಸ ಜನನ ಫಲವು –

ಚೈತ್ರಮಾಸದಲ್ಲಿ ಜನಿಸಿದವಳು–ಗುರು–ಹಿರಿಯರಲ್ಲಿ ಭಕ್ತಿಯುಳ್ಳವಳು, ಸುಖಭೋಗಿಯು, ವಿನಯಶೀಲಳು, ಬುದ್ಧಿವಂತಳು, ಬಂಧುಜನ ಮಾನ್ಯಳು, ದಾನಧರ್ಮ ಪರೋಪಕಾರ ಮಾಡತಕ್ಕವಳು, ಕೀರ್ತಿವಂತಳು, ಸುಶೀಲಳು ಆಗುವಳು.

ವೈಶಾಖಮಾಸದಲ್ಲಿ ಹುಟ್ಟಿದವಳು—ದಯಾಗುಣಳ್ಳವಳು, ದೀರ್ಘಾಯುಷಿಯು, ವ್ರತನೇಮಾದಿ ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಳು, ರೂಪವಂತಳು ಮಕ್ಕಳು, ಮೊಮ್ಮಕ್ಕಳುಳ್ಳವಳು, ಬಂಧು ಬಾಂಧವರಲ್ಲಿ ಶ್ರೇಷ್ಠಳು, ಧನವಂತಳು, ಗುರು ಹಿರಿಯರ ಸೇವೆಯನ್ನು ಪ್ರೀತಿಯಿಂದ ಮಾಡತಕ್ಕವಳು ಆಗುವಳು.

ಜ್ಯೇಷ್ಠಮಾಸದಲ್ಲಿ ಜನನ ಹೊಂದಿದವಳು-ಮೃದುವಾಗಿ ಮಾತಾಡತಕ್ಕವಳು, ಚಂಚಲ ಮನಸ್ಕಳು ಸಮಾಧಾನ ಚಿತ್ತಳು, ವಿದ್ಯಾಬುದ್ಧಿಯುಳ್ಳವಳು, ಚತುರಳು, ಧನಧಾನ್ಯ ಸಮೃದ್ಧಿಯುಳ್ಳವಳು, ಎಲ್ಲ ಕೆಲಸಗಳನ್ನು ಪರಿಶ್ರಮಪಡಿಸಿ ಮಾಡತಕ್ಕವಳು, ಕಷ್ಟಜೀವಿಯೂ ಆಗುವಳು.

ಆಷಾಢಮಾಸದಲ್ಲಿ — ಜನನವಾದವಳು— ಮಂದಾಗ್ನಿಯುಳ್ಳವಳು, ಹೆಚ್ಚು ಮಾತಾಡತಕ್ಕವಳು, ದರಿದ್ರಳು, ಕಷ್ಟಜೀವಿಯು, ಅಭಿಮಾನಿಯು, ಸುಳ್ಳುಹೇಳತಕ್ಕವಳು, ಬಡವಳು, ದುಃಖಿಯು, ಧನರಹಿತಳು, ಬಂಧುಗಳಲ್ಲಿ ವಿರೋಧಿಯು, ಕೃಪಣಳು ಆಗುವಳು.

ಶ್ರಾವಣಮಾಸದಲ್ಲಿ ಹುಟ್ಟಿದವಳು—ಅಂತಃಕರುಣ ಹೃದಯಿಯು, ಗುರು–ಹಿರಿಯರಲ್ಲಿ ದೇವ, ದ್ವಿಜರಲ್ಲಿ ಭಕ್ತಿಯುಳ್ಳವಳು, ವ್ರತನೇಮಾಚರಣೆ ಮಾಡತಕ್ಕವಳು, ಪುತ್ರಪೌತ್ರರುಳ್ಳವಳು, ಸಮಾಧಾನ ಮನಸ್ಸಿನವಳು, ಧನಧಾನ್ಯ ಸಮೃದ್ಧಿಯುಳ್ಳವಳು, ಸುಖಭೋಗಿಯು ಕೀರ್ತಿವಂತಳು, ಸಮಾ

ಸ್ತ್ರೀಯರಲ್ಲಿ ಹಿರಿಯಳು, ಚತುರಳು, ಬಂಧುಜನರಲ್ಲಿ ಪ್ರೀತಿಯುಳ್ಳವಳೂ, ಉದಾರ ಗುಣವುಳ್ಳವಳು, ಪರೋಪಕಾರಿಯು ಆಗುವಳು.

ಭಾದ್ರಪದ ಮಾಸದಲ್ಲಿ ಜನನ ಹೊಂದಿದವಳು-ಸುಶೀಲಳು ಸುಖಭೋಗಿಯು. ವಿಲಾಸ ಪ್ರಿಯಳು, ವಿನಯವಾಗಿ ಮಾತಾಡತಕ್ಕವಳು, ಧನಧಾನ್ಯ ಸಮೃದ್ಧಳು, ಸದ್ಗುಣಿಯು, ರೂಪವತಿಯು, ಚಂಚಲ ಮನಸ್ಸಿನವಳು, ಸದಾಚಾರಿಯು, ಧರ್ಮಶಾಸ್ತ್ರಗಳನ್ನು ಬಲ್ಲವಳು ಆಗುವಳು.

ಆಶ್ವಿನ ಮಾಸದಲ್ಲಿ ಹುಟ್ಟಿದವಳು ಬಹು ಪುತ್ರವತಿಯು, ಬುದ್ಧಿವಂತಳು, ಧನವಂತಳು, ದಾನ—ಧರ್ಮ ಪರೋಪಕಾರ ಮಾಡತಕ್ಕವಳು, ಬಹುಜನ ಸೇವಕರುಳ್ಳವಳು, ಕೀರ್ತಿವಂತಳು ಸದ್ಗುಣಿಯು, ಬಂಧುಗಳಲ್ಲಿ ಪ್ರೀತಿಯುಳ್ಳವಳು, ಭಕ್ತಿವಂತಳು, ಪತಿಪ್ರಿಯಳು ಆಗುವಳು.

ಕಾರ್ತೀಕ ಮಾಸದಲ್ಲಿ ಜನನವಾದವಳು-ಬಹಳ ಮಾತಾಡತಕ್ಕವಳು, ಸುಳ್ಳುಹೇಳತಕ್ಕವಳು, ವಾದಿಯು, ಹಟಮಾರಿಯು, ಲೋಭಿಯು, ಬುದ್ಧಿವಂತಳು, ಚತುರಳು, ಧನಧಾನ್ಯ ಸಮೃದ್ಧಿಯುಳ್ಳವಳು, ಬಹು ವಿಲಾಸಿಯು, ಸುಗಂಧದ್ರವ್ಯ ವಸ್ತ್ರಾಭರಣಗಳಲ್ಲಿ ಪ್ರೀತಿಯುಳ್ಳವಳು ಆಗುವಳು.

ಮಾರ್ಗಶಿರ ಮಾಸದಲ್ಲಿ ಜನಿಸಿದವಳು-ಶಾಸ್ತ್ರ ಪುರಾಣಗಳನ್ನು ಆಸಕ್ತಿಯಿಂದ ಕೇಳತಕ್ಕವಳು, ಭಕ್ತಿವಂತಳು, ಬುದ್ಧಿವಂತಳು, ಮೃದುವಾಗಿ ಮಾತಾಡತಕ್ಕವಳು, ಸುಶೀಲಳು, ದಾನಧರ್ಮ ಪರೋಪಕಾರ ಮಾಡತಕ್ಕವಳು, ಪುಣ್ಯಶೀಲಳು, ಸಂಗೀತ, ಚಿತ್ರಕಲೆ, ಕಸೂತಿ ಮುಂತಾದ ಕಲೆಗಳಲ್ಲಿ ಜಾಣಳು, ಸೌಭಾಗ್ಯವಂತಳು, ತೀರ್ಥಕ್ಷೇತ್ರ ನೋಡತಕ್ಕವಳು. ಬಂಧುಜನ ಮಾನ್ಯಳು, ಸರ್ವರಿಂದ ಗೌರವಾದರ ಹೊಂದತಕ್ಕವಳು ಆಗುವಳು.

ಪುಷ್ಯ ಮಾಸದಲ್ಲಿ ಹುಟ್ಟಿದವಳು-ಕಷ್ಟಜೀವಿಯು. ಬಂಧು ಬಾಂಧವರಲ್ಲಿ ದ್ವೇಷಿಯಾಗುವಳು. ಗುರುಹಿರಿಯರಲ್ಲಿ ಭಕ್ತಿಯುಳ್ಳವಳು. ಪರಿಶ್ರಮ ಸಹಿಸಿ ಕೆಲಸ ಮಾಡತಕ್ಕವಳು. ಲೋಭಿಯು ಪತಿಯಿಂದಲೂ, ಮಕ್ಕಳಿಂದಲೂ ದುಃಖ ಹೊಂದತಕ್ಕವಳು. ದುರಭಿಮಾನಿಯು, ಕಠೋರವಾಗಿ ಮಾತಾಡತಕ್ಕವಳು, ಕ್ರೂರಳು ಆಗುವಳು.

ಮಾಘಮಾಸದಲ್ಲಿ ಜನಿಸಿದವಳು - ಸಮಾಧಾನ ಮನಸ್ಸಿನವಳು, ಗುರು ಹಿರಿಯರಲ್ಲಿ ಸಾಧು ಸತ್ಪುರುಷರಲ್ಲಿ ಭಕ್ತಿಯುಳ್ಳವಳು. ಧರ್ಮಶಾಸ್ತ್ರಗಳ ರಹಸ್ಯವನ್ನು ತಿಳಿದವಳು. ಧನ ಧಾನ್ಯ ಸಮೃದ್ಧಿಯುಳ್ಳವಳು, ಸುಖ ಭೋಗಿಯು. ಸರ್ವಜನ ಮಾನ್ಯಳು ಬಂಧುಗಳೊಡನೆ ಪ್ರೀತಿಯಿಂದ ವರ್ತಿಸುವವಳು ಆಗುವಳು

ಫಾಲ್ಗುಣ ಮಾಸದಲ್ಲಿ ಜನನ ಹೊಂದಿದವಳು—ವಿಲಾಸ ಜೀವನದಲ್ಲಿ ಕಾಲ ಕಳೆಯು ತಕ್ಕವಳು, ಸುಗಂಧದ್ರವ್ಯ, ವಸ್ತ್ರಾಭರಣಗಳಲ್ಲಿ ಪ್ರೀತಿಯುಳ್ಳವಳು ಕಾಮುಕ ನೇತ್ರಗಳುಳ್ಳವಳು, ರೂಪವತಿಯು ಕೆಳ್ಳಗಾದ ದೇಹವುಳ್ಳವಳು, ದಾನ ಧರ್ಮ ಪರೋಪಕಾರ ಮಾಡುವ ಇಚ್ಛೆಯುಳ್ಳವಳು, ಬುದ್ಧಿವಂತಳು. ಬಹಳ ಮಾತಾಡತಕ್ಕವಳು, ಪತಿಯಿಂದ ದುಃಖ ಹೊಂದತಕ್ಕವಳು, ಪುತ್ರ ವತಿಯು ಆಗುವಳು.

— ಪಕ್ಷ ಜನನ ಫಲವು —

ಶುಕ್ಲ ಪಕ್ಷದಲ್ಲಿ ಜನನವಾದವಳು—ಸುಸ್ವರೂಪಳು, ಪೂರ್ಣ-ಚಂದ್ರನಂತೆ ದುಂಡಾದ ಮುಖವುಳ್ಳವಳು, ತೇಜಸ್ವಿಯು ಸುಶೀಲಳು, ಸದ್ಗುಣಿಯು ದೀರ್ಘಾಯುಷಿಯು, ಪತಿವ್ರತೆಯು, ಧನಧಾನ್ಯ ಸಮೃದ್ಧಿಯುಳ್ಳವಳು ಕೀರ್ತಿವಂತಳು, ಪಾಪಭೀರುವು, ಪುತ್ರಪೌತ್ರರುಳ್ಳ ದೊಡ್ಡ ಕುಟುಂಬಸ್ಥಳು, ಆರೋಗ್ಯವುಳ್ಳವಳು, ಗುರುಹಿರಿಯರಲ್ಲಿ, ದೇವ ಬ್ರಾಹ್ಮಣರಲ್ಲಿ ಭಕ್ತಿಯುಳ್ಳವಳು, ವ್ರತನೇಮಾದಿ ಆಚರಣೆಯುಳ್ಳವಳು ಸಮಾಧಾನ ಮನಸ್ಕಳು ಆಗುವಳು.

ಕೃಷ್ಣ ಪಕ್ಷದಲ್ಲಿ ಜನನ ಹೊಂದಿದವಳು—ತೀಕ್ಷ್ಣ ಸ್ವಭಾವಿಯು, ಕೋಪಿಷ್ಟಳು, ಕ್ರೂರಳು, ಕಷ್ಟಜೀವಿಯು, ಪರರ ಉತ್ಕರ್ಷವನ್ನು ನೋಡಿ ಸಹಿಸದವಳು, ಕಠೋರವಾಗಿ ಮಾತಾಡತಕ್ಕವಳು, ಮಂದಬುದ್ಧಿಯುಳ್ಳವಳು ಬಂಧು ಬಾಂಧವರಲ್ಲಿ ವಿರೋಧಿಯು ಜಗಳಗಂಟಿಯು, ದರಿದ್ರಳು, ನಿರ್ಧನಳು, ಗುರು-ಹಿರಿಯರನ್ನು ನಿಂದಿಸತಕ್ಕವಳು, ದುರಾಚಾರಿಯು, ಬಡವಿಯು, ದುರ್ಭಾಗ್ಯಳು, ನಾಸ್ತಿಕಳು, ನಿಪುತ್ರಕಳು, ಧನ ಧಾನ್ಯರಹಿತಳು, ರೋಗಪೀಡಿತಳು, ದುಃಖಿಯು, ದುಷ್ಟೆಯು, ಆಗುವಳು.

- ವಾರ ಜನನ ಫಲ -

ರವಿವಾರ ಜನನವಾದವಳು—ಮೃಷ್ಟಾನ್ನಭೋಜನಪ್ರಿಯಳು, ಪುತ್ರವತಿಯು, ಸುಖಭೋಗ ವಿಲಾಸಪ್ರಿಯಳು, ಶೀಘ್ರಕೋಪಿಯು, ಮಾನವಂತಳು, ಪಿತ್ತಾಧಿಕ್ಯ ಪ್ರಕೃತಿಯುಳ್ಳವಳು, ಭಾಗ್ಯವಂತಳು, ತೀಕ್ಷ್ಣಸ್ವಭಾವಿಯು, ತೇಜಸ್ವಿಯು, ಸುಂದರಳು, ಪಾಪದ ಕೆಲಸ ಮಾಡಲು ಹೆದರದವಳು ಕಪಟಿಯು, ಕ್ರೂರಳು, ಕಲಹ ಪ್ರಿಯಳು, ಬಂಧು-ಬಾಂಧವರಿಗೆ ವಿರೋಧಿಯಾಗತಕ್ಕವಳು ಆಗುವಳು.

ಸೋಮವಾರ ಜನಿಸಿದವಳು—ಗುಣವಂತಳು, ಸುಶೀಲಳು, ವಿದ್ಯಾಬುದ್ಧಿಯುಳ್ಳವಳು ಸ್ವಜನ ಪರಜನರಲ್ಲಿ ಮಾನ್ಯಳು, ಶಾಂತಮನಸ್ಕಳು, ಧರ್ಮಶಾಸ್ತ್ರಗಳನ್ನು ತಿಳಿದವಳು, ವ್ರತನೇಮಾಚರಣೆಯುಳ್ಳವಳು, ಸುಂದರಳು, ಹಸನ್ಮುಖಳು, ಹೊಸವಸ್ತ್ರಾಭರಣಧರಿಸುವ ಅಪೇಕ್ಷೆಯುಳ್ಳವಳು, ಸೌಭಾಗ್ಯವತಿಯು, ಸದ್ಗುಣಿಯು, ಜನ ಪ್ರಿಯಳು, ಮನಸ್ಸಂಯಮನವುಳ್ಳವಳು, ಆಗುವಳು

ಮಂಗಳವಾರ ಜನಿಸಿದ ಸ್ತ್ರೀಯಳು—ಬಹಳ ಸಿಟ್ಟಿನ ಸ್ವಭಾವದವಳು, ಅನ್ಯರ ಉಪಕಾರವನ್ನು ಮರೆಯತಕ್ಕವಳು, ಧರ್ಮಾಚರಣೆಯಂತೆ ನಡೆಯದವಳು, ಗುರು—ಹಿರಿಯರನ್ನು ದೂಷಿಸುವವಳು, ನಾಸ್ತಿಕ ಸ್ವಭಾವದವಳು, ತೇಜಸ್ವಿಯು, ಧನವಂತಳು, ಮೂರ್ಖಳು ಆಗುವಳು.

ಬುಧವಾರ ಜನನವಾದವಳು—ಕೀರ್ತಿವಂತಳು, ದಾನ-ಧರ್ಮ ಪರೋಪಕಾರ ಮಾಡತಕ್ಕವಳು, ಅಂತಃಕರುಣೆಯು, ಸುಖಭೋಗಿಯು, ಅಂಜುಬರುಕಳು, ಪುತ್ರಪೌತ್ರರುಳ್ಳವಳು, ಮೃದುವಾಗಿ ಮಾತಾಡತಕ್ಕವಳು, ವಿದ್ಯಾಸಂಪನ್ನಳು, ಸತ್ಯವಂತಳು, ವಾಕ್ ಚಾತುರ್ಯವುಳ್ಳವಳು, ಮಾತಿನಿಂದ ಮನಸ್ಸನ್ನು ರಂಜನಗೊಳಿಸುವವಳು, ಆಗುವಳು.

ಗುರುವಾರ ಹುಟ್ಟಿದವಳು— ಧನಧಾನ್ಯ ಸಮೃದ್ಧಿಯುಳ್ಳವಳು, ನಿಸ್ಸೀಮ ಭಕ್ತಿಯುಳ್ಳವಳು, ಗುರು ಹಿರಿಯರಲ್ಲಿ ನಿಷ್ಠೆಯುಳ್ಳವಳು, ಪುತ್ರವತಿಯು ಧರ್ಮಶಾಸ್ತ್ರಗಳಲ್ಲಿ ಅಭಿರುಚಿಯುಳ್ಳವಳು, ಪೂಜಾ ವ್ರತನೇಮಾಚರಣೆಯುಳ್ಳವಳು, ಪಾಪ ಭೀರುವು, ಧರ್ಮಿಷ್ಠಳು, ವಿದ್ಯಾವಂತಳು, ದಾನ ಧರ್ಮ

ಪರೋಪಕಾರ ಮಾಡತಕ್ಕವಳು, ಬಂಧು ಜನ ಶ್ರೇಷ್ಠಳು, ಪೂಜ್ಯಳು, ಪತಿವ್ರತಾ ಶಿರೋಮಣಿಯು, ಸುಶೀಲಳು, ಶಾಂತ ಮನಸ್ಸಿನವಳು, ಉತ್ತಮ ವಾಹನ ವುಳ್ಳವಳು ಆಗುವಳು.

ಶುಕ್ರವಾರ ಜನನ ಹೊಂದಿದವಳು— ಸುಖಭೋಗ ವಿಲಾಸಪ್ರಿಯಳು, ಧನವಂತಳು, ವಸ್ತ್ರ ಆಭರಣ ಸುಗಂಧ ದ್ರವ್ಯಗಳಲ್ಲಿ ಬಹು ಪ್ರೀತಿಯುಳ್ಳವಳು ಪುತ್ರವತಿಯು, ಸುಮಂಗಲಿಯು ಅನೇಕ ಜನ ಸೇವಕಿಯರುಳ್ಳವಳು, ಧರ್ಮ ಶಾಸ್ತ್ರಪ್ರಿಯಳು, ಪರೋಪಕಾರಿಯು, ಸಮಾಧಾನ ಮನಸ್ಕಳು, ಕೀರ್ತಿ ವಂತಳು ಧನವಂತಳು, ಉತ್ತಮ ವಸ್ತ್ರ ವಾಹನವುಳ್ಳವಳು.

ಶನಿವಾರ ಜನಿಸಿದವಳು— ವಿಶ್ವಾಸಘಾತಕಿಯು, ಬಂಧುಜನರೊಡನೆ ವಿರೋಧಿಯು, ನಾಚಿಕೆ ಇಲ್ಲದವಳು, ಉಪಕಾರವನ್ನು ಅರಿಯದವಳು, ಕುರೂಪಿಯು, ಪಾಪದ ಕೆಲಸ ಮಾಡಲು ಹಿಂಜರಿಯದವಳು ಮಲಿನಳು, ನಿರ್ದ—ಯಳು ಎಲ್ಲರೊಡನೆ ವೈರತ್ವಬೆಳೆಯಿಸತಕ್ಕವಳು, ಜಗಳಗಂಟಿಯು, ರೋಗ ಪೀಡಿತಳು;ದುರಾಚಾರಿಯು, ಮೂರ್ಖಳು, ಬಡವಳು ಅಲ್ಪ ಸಂತಾನವುಳ್ಳವಳು ಆಗುವಳು

— ತಿಥಿ ಜನನ ಫಲ —

ಪ್ರತಿಪದ ತಿಥಿಯಲ್ಲಿ ಜನಿಸಿದವಳು— ಸುಶೀಲಳು, ಕೀರ್ತಿವಂತಳು, ಪುತ್ರವತಿಯು; ಧರ್ಮಶಾಸ್ತ್ರಗಳನ್ನು ಬಲ್ಲವಳು, ಪುಣ್ಯಶೀಲಳು ಪತಿಭಕ್ತಿಯುತಳು, ಸೌಭಾಗ್ಯವತಿಯು, ಧನಧಾನ್ಯ ಸಮೃದ್ಧಿವುಳ್ಳವಳು. ಚಂಚಲವಾದ ಮನಸ್ಸುಳ್ಳವಳು, ಬಂಧುಗಳಿಗೆ ವಿರೋಧಿಯು ಆಗುವಳು.

ದ್ವಿತಿಯಾ ತಿಥಿಯಲ್ಲಿ ಜನನವಾದವಳು–ಸುಸ್ವರೂಪಳು, ಸುಂದರ ವಾದ ನೇತ್ರ, ಹಾಗೂ ಕೂದಲುಗಳುಳ್ಳವಳು ದಾನಧರ್ಮ ಪರೋಪಕಾರ ಪ್ರಿಯಳು, ಕೀರ್ತಿವಂತಳು, ಸಮಾಧಾನ ಮನಸ್ಸಿನವಳು, ಸುಲಕ್ಷಣಳು ಕಾಂತಿಯುಳ್ಳವಳು, ಪತಿಯಲ್ಲಿ ಅನುರಾಗವುಳ್ಳವಳು, ಸೌಭಾಗ್ಯವಂತಳು, ರಾಜ ಸುಖಭೋಗಿಯು, ಧನವಂತನ ಪತ್ನಿಯು, ಬಹುಜನ ಸೇವಕಿಯರುಳ್ಳ ವಳು ಆಗುವಳು.

ತೃತಿಯಾ ತಿಥಿಯಲ್ಲಿ ಹುಟ್ಟಿದವಳು ಸುಗುಣವತಿಯು, ಅಭಿಮಾನ ವುಳ್ಳವಳು, ಪುಣ್ಯಕ್ಷೇತ್ರ ತೀರ್ಥಯಾತ್ರಾ ಮಾಡತಕ್ಕವಳು, ಪತಿವ್ರತೆಯು

ಶಾಂತಮನಸ್ಕಳು, ಪರಿಶ್ರಮಪಟ್ಟು ಕೆಲಸ ಮಾಡತಕ್ಕವಳು, ಪುತ್ರ ಪೌತ್ರರು ವಳು, ಭಾಗ್ಯವತಿಯು, ಸಮಾನರಲ್ಲಿ ಶ್ರೇಷ್ಠಳು, ಧನರಹಿತಳು, ಮಂದ ಬುದ್ಧಿಯುಳ್ಳವಳು ಆಗುವಳು.

ಚತುರ್ಥಿ ತಿಥಿಯಲ್ಲಿ ಜನನ ಹೊಂದಿದವಳು—ದರಿದ್ರಳು, ಆಪ್ತೇಷ್ಟ ರಲ್ಲಿ ವಿರೋಧಿಯಾಗುವಳು, ಪತಿಗೆ ದ್ರೋಹಮಾಡತಕ್ಕವಳು ಕಾಮಿಯು, ತೀಕ್ಷ್ಣಗುಣದವಳು, ಅವಿಚಾರಿಯು, ಪತಿಗೆ ವಂಚಕಳು, ಜೂಜು ಮೊದ ಲಾದ ದುಷ್ಟ ಆಟಗಳಲ್ಲಿ ಪ್ರೀತಿಯುಳ್ಳವಳು, ಕ್ರೂರಳು ಮದ್ಯಮಾಂಸ ಭಕ್ಷಿಸ ತಕ್ಕವಳು, ಅಧರ್ಮಿಯು, ಚೋರಳು, ದುರಾಚಾರಿಯು, ಕೋಪಿಷ್ಠಳು ಆಗು ವಳು.

ಪಂಚಮಿ ತಿಥಿಯಲ್ಲಿ ಜನಿಸಿದ ಸ್ತ್ರೀಯಳು– ಸುಸ್ವಭಾವಿಯು, ವಸ್ತ್ರಾ ಭರಣಗಳಲ್ಲಿ ಪ್ರೀತಿಯುಳ್ಳವಳು ಸತ್ಪುತ್ರರುಳ್ಳವಳು, ಸದ್ಗುಣಿಯು ನಗೆಮೊ ಗದವಳು, ಆಪ್ತೇಷ್ಟರಲ್ಲಿ ಪ್ರೀತಿಯುಳ್ಳವಳು, ಕಾರ್ಯದಕ್ಷಳು, ಚತುರಳು, ಮೃದುವಾಗಿ ಮಾತಾಡತಕ್ಕವಳು, ದಾನಧರ್ಮ ಪರೋಪಕಾರ ಪ್ರಿಯಳು ಸುಖಭೋಗಿಯು, ಧನಧಾನ್ಯ ಸಮೃದ್ಧಿಯುಳ್ಳವಳು, ಪತಿವ್ರತೆಯು ಆಗು ವಳು

ಷಷ್ಠಿ ತಿಥಿಯಲ್ಲಿ ಜನನಹೊಂದಿದವಳು—ಕಠೋರಹೃದಯದವಳು ಕೋಪಿಷ್ಠಳು, ನೃತ್ಯ, ಸಂಗೀತಾದಿ ಕಲೆಗಳನ್ನು ಬಲ್ಲವಳು, ಚಂಚಲ ಮನಸ್ಸಿ ನವಳು, ನೀತಿರಹಿತಳು, ಅಧಿಕಖರ್ಚುಮಾಡತಕ್ಕವಳು, ಪ್ರಾಣಿಗಳಲ್ಲಿ ಅಂತಃಕ ರುಣವುಳ್ಳವಳು, ಜಗಳಗಂಟಿಯು, ಉದರರೋಗವುಳ್ಳವಳು, ಗುರು— ಹಿರಿಯರಲ್ಲಿ ಭಕ್ತಿಯುಳ್ಳವಳು, ಸುಂದರಳು, ಆಗುವಳು

ಸಪ್ತಮಿ ತಿಥಿಯಲ್ಲಿ ಹುಟ್ಟಿದವಳು—ಪತಿವ್ರತೆಯು, ಗೌರವವುಳ್ಳ ವಳು, ಪತಿಗೆಪ್ರಿಯಳು, ಚತುರಳು ಜಾಣಳು, ಪರರ ಮನದ ಇಂಗಿತವನ್ನು ತಿಳಿಯ ತಕ್ಕವಳು,ಸೂಕ್ಷ್ಮ ಬುದ್ಧಿಯುಳ್ಳವಳು,ವಿನಮ್ರ ಸ್ವಭಾವಿಯು, ತೇಜ ಸ್ವಿಯು, ಸೌಭಾಗ್ಯವಂತಳು, ವ್ರತನೇಮಾದಿ ಆಚರಣೆಯುಳ್ಳವಳು, ಗುರು ಹಿರಿಯರಲ್ಲಿ ಭಕ್ತಿಯುಳ್ಳವಳು, ಪರೋಪಕಾರಿಯು, ಅಭಿಮಾನವುಳ್ಳವಳು

ಸುಂದರಳು, ಹಸನ್ಮುಖಳು, ವಿಶಾಲವಾದ ಹಣೆ, ನೇತ್ರಗಳುಳ್ಳವಳು, ಆಗುವಳು.

ಅಷ್ಟಮಿ ತಿಥಿಯಲ್ಲಿ ಜನಸಿದವಳು—ಬಂಧು-ಬಾಂಧವರಲ್ಲಿ ಪ್ರೀತಿಯಿಲ್ಲದವಳು, ದಯಾಶೂನ್ಯಳು, ಕ್ರೂರಸ್ವಭಾವದವಳು, ದುಷ್ಟಳು, ರೂಪವಿಲ್ಲದವಳು, ಚಂಚಲವಾದ ಮನಸ್ಸುಳ್ಳವಳು, ಧೂರ್ತಳು, ಕುರೂಪಿಯು, ಸಂತಾನಹೀನಳು, ತಾಮಸ ಆಹಾರದಲ್ಲಿ ಪ್ರೇಮವುಳ್ಳವಳು, ನೀತಿಯಿಲ್ಲದವಳು ಭಾಗ್ಯಹೀನಳು, ದುಃಖಿಯು, ಕುಲಕಂಟಕಿಯು, ಮೂರ್ಖಳು, ದರಿದ್ರಳು, ಆಗುವಳು.

ನವಮಿ ತಿಥಿಯಲ್ಲಿ ಜನನವಾದವಳು - ಗುರುಹಿರಿಯರನ್ನು ದೂಷಿಸುವವಳು, ಸೌಖ್ಯಹೀನಳು, ಕಠೋರ ಮನಸ್ಸಿನವಳು, ಆಲಸಿಯು, ದುರ್ವ್ಯಸನಿಯು ಕಲಹಪ್ರಿಯಳು, ಆಪ್ತೇಷ್ಟರೊಡನೆ ದ್ವೇಷ ಮಾಡತಕ್ಕವಳು, ಚಂಚಲ ಚಿತ್ತವುಳ್ಳವಳು, ದುಃಖಿಯು, ದರಿದ್ರಳು, ಪತಿಗೆ ದ್ರೋಹಮಾಡತಕ್ಕವಳು, ಕೋಪಿಷ್ಠಳು ಆಗುವಳು.

ದಶಮಿ ತಿಥಿಯಲ್ಲಿ ಹುಟ್ಟಿದವಳು ಧರ್ಮಿಷ್ಟಳು. ಧರ್ಮಶಾಸ್ತ್ರ ಪುರಾಣ ಪುಣ್ಯಕಥಾ ಶ್ರವಣ ಮಾಡುವ ಅಪೇಕ್ಷೆಯುಳ್ಳವಳು ಗುರು, ದೇವ, ಬ್ರಾಹ್ಮಣರಲ್ಲಿ ಭಕ್ತಿಯುಳ್ಳವಳು, ಸೌಭಾಗ್ಯವಂತಳು ಸದಾಚಾರಿಯು ಸದ್ಗುಣಿಯು ರೂಪವತಿಯು. ಮೃದುವಾಗಿ ಮಾಡತಕ್ಕವಳು, ಹಸನ್ಮುಖಳು, ಉದ್ದವಾದ ಕುತ್ತಿಗೆಯುಳ್ಳವಳು, ಕಾರ್ಯಚತುರಳು ಪುತ್ರವತಿಯು ಸುಗಂಧ ಮಾಲಾಭರಣ ಭೂಷಿತಳು, ಇಂಪಾದ ಸ್ವರವುಳ್ಳವಳು, ಧನಧಾನ್ಯ ಸಮೃದ್ಧಿಯುಳ್ಳವಳು ಆಗುವಳು.

ಏಕಾದಶಿ ತಿಥಿಯಲ್ಲಿ ಜನಸಿದವಳು- ಭಾಗ್ಯವಂತಳು, ಸಮಾಧಾನ ಚಿತ್ತಳು, ಪಾಪಭೀರುವು ಒಳ್ಳೇ ಕಾರ್ಯ ಮಾಡುವದರಲ್ಲಿ ಆಸಕ್ತಳು, ಸತ್ಪುತ್ರರುಳ್ಳವಳು, ಸರ್ವರಲ್ಲಿ ಮಾನ್ನಣೆ ಹೊಂದತಕ್ಕವಳು, ಶಾಸ್ತ್ರಾರ್ಥಗಳನ್ನು ಬಲ್ಲವಳು, ಧರ್ಮಕಾರ್ಯಾಸಕ್ತಳು, ಬಂಧುಬಾಂಧವರಲ್ಲಿ ಪ್ರೀತಿಯುಳ್ಳವಳು, ಸಮಾನಸ್ತ್ರೀಯರಲ್ಲಿ ಶ್ರೇಷ್ಠಳು, ವ್ರತನೇಮಾಚರಣಗಳು

ಪುಣ್ಯ ಶೀಲಳು, ಧ ನಧನ್ಯ ಪರೋಪಕಾರ ಮಾಡತಕ್ಕವಳು ಸುಮಂಗಲೆಯು ಪವಿತ್ರಳು ಸುವಿಚಾರಿಯು ಆಗುವಳು.

ದ್ವಾದಶಿ ತಿಥಿಯಲ್ಲಿ ಹುಟ್ಟಿದವಳು— ಚಪಲಳು, ಚಂಚಲ ಚಿತ್ತಳು, ಕಾಮವಿಲಾಸಪ್ರಿಯಳು, ಸ್ತ್ರೀಯರಲ್ಲಿ ಪ್ರಧಾನಳು, ಸುಶೀಲವಂತಳು, ಕಷ್ಟ ಪಟ್ಟು ಪರಿಶ್ರಮ ವಹಿಸಿ ಕಾರ್ಯ ಮಾಡತಕ್ಕವಳು, ಪರರ ಗುಣದೋಷ ಗಳನ್ನು ನೋಡಿ ತಿಳಿದುಕೊಂಡಿರತಕ್ಕವಳು, ಗೌರವಯುತಳು, ತೀರ್ಥಕ್ಷೇತ್ರ, ತೋಟ, ಉದ್ಯಾನಗಳಲ್ಲಿ ತಿರುಗಾಡಬೇಕೆಂಬ ಅಪೇಕ್ಷೆಯುಳ್ಳವಳು ಆಗುವಳು.

ತ್ರಯೋದಶಿ ತಿಥಿಯಲ್ಲಿ ಜನಿಸಿದವಳು—ಬಹುಬುದ್ಧಿವಂತಳು ಧನ ಕನಕ ಐಶ್ವರ್ಯವುಳ್ಳವಳು, ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿಯುಳ್ಳವಳು, ಪತಿವ್ರತ ಶೀಲಳು, ಸಮಾಧಾನ ಸ್ವಭಾವಿಯು, ವಿರೋಧಿಗಳನ್ನು ಹಿತವಚನ ಗಳಿಂದ ಜಯಿಸತಕ್ಕವಳು. ಇಂಪಾದ ಸ್ವರವುಳ್ಳವಳು. ರೂಪವಂತಳು, ಧರ್ಮ ಶಾಸ್ತ್ರಗಳ ರಹಸ್ಯವನ್ನು ತಿಳಿದವಳು, ಪುತ್ರವತಿಯು ಸೌಭಾಗ್ಯವತಿಯು, ಸ್ತ್ರೀಯರಲ್ಲಿ ಶ್ರೇಷ್ಠಳು, ಆಪ್ತೇಷ್ಟರಲ್ಲಿ ಪ್ರೀತಿಯುಳ್ಳವಳು, ಕೀರ್ತಿವಂತಳು ಆಗುವಳು.

ಚತುರ್ದಶಿ ತಿಥಿಯಲ್ಲಿ ಜನಕೊಂಡಿದವಳು- ಅನಾಚಾರಳು, ಮಂದ ಬುದ್ಧಿಯುಳ್ಳವಳು ಕಾಮಕೇಳೀವಿಲಾಸದಲ್ಲಿ ಆಸಕ್ತಳು. ಪತಿಪುತ್ರರಿಂದ ದುಃಖಿ ತಳು, ಚಂಚಲ ಮನಸ್ಸಳು, ಕಪಟಿಯು, ತನ್ನ ಇಂಗಿತವನ್ನು ಅನ್ಯರಿಗೆ ಹೇಳದವಳು, ಎಲ್ಲ ಕೆಲಸಗಳನ್ನು ದಕ್ಷತೆಯಿಂದ ಮಾಡತಕ್ಕವಳು, ವಿರೋಧಿ ಸ್ವಭಾವಿಯು ಆಗುವಳು

ಪೌರ್ಣಿಮಾ ತಿಥಿಯಲ್ಲಿ ಜನಿಸಿದವಳು— ತೇಜಸ್ವಿಯು, ಸುಂದರಳು, ಪೂರ್ಣಚಂದ್ರನಂತಹ ಮುಖವುಳ್ಳವಳು ವಿದ್ಯಾವಂತಳು, ಪತಿಭಕ್ತಿ ಸಂಪ ನ್ನಳು, ಪತಿವ್ರತಾ ಶಿರೋಮಣಿಯು, ಸುಲಕ್ಷಣಳು, ಸರ್ವರೊಡನೆ ಪ್ರೀತಿ ಯಿಂದಲೂ ವಿನಯದಿಂದಲೂ ವರ್ತಿಸತಕ್ಕವಳು, ಧನಧಾನ್ಯ ಸಕಲ ಸೌಭಾಗ್ಯಯುತಳು, ಸುಖಭೋಗಿಯು, ಪುತ್ರಪೌತ್ರರುಳ್ಳವಳು, ಮೃಷ್ಟಾನ್ನ ಭೋಜನಪ್ರಿಯಳು, ಪರೋಪಕಾರಿಯು, ಪುಣ್ಯಕಾರ್ಯಾಸಕ್ತಳು. ಆಗುವಳು.

ಅಮಾವಾಸ್ಯ ತಿಥಿಯಲ್ಲಿ ಜನನವಾದವಳು— ಚಂಚಲಸ್ವಭಾವಿಯು, ಪುತ್ರಶೋಕವುಳ್ಳವಳು, ಅಪ್ತೇಷ್ಟರನ್ನು ದ್ವೇಷಿಸುವವಳು, ಕಪಟಿಯು, ಕಾರ್ಯ ಚತುರಳು, ಪತಿಭಕ್ತಿಯುಳ್ಳವಳು ಎಲ್ಲ ಕಾರ್ಯಗಳನ್ನು ಕುಶಲತನದಿಂದ ಮಾಡತಕ್ಕವಳು, ಗುರುಹಿರಿಯರಲ್ಲಿ ಭಕ್ತಿಯುಳ್ಳವಳು, ಕೀರ್ತಿವಂತಳು, ವಿಚಾರವಂತಳು ಆಗುವಳು.

— ಅಶ್ವಿನ್ಯಾದಿ ೨೭ ನಕ್ಷತ್ರಗಳಲ್ಲಿ ಜನನವಾದ ಫಲ —

ಅಶ್ವಿನಿ ನಕ್ಷತ್ರದಲ್ಲಿ ಜನಿಸಿದವಳು- ತಾಳ್ಮೆಯುಳ್ಳವಳು, ರೂಪವಂತಳು, ಹೃದ್ರೋಗವುಳ್ಳವಳು, ಪತಿಯನ್ನು ಪ್ರೇಮದಿಂದ ಕಾಣತಕ್ಕವಳು, ನಗುಮೊಗದವಳು, ಸದಾಚಾರವುಳ್ಳವಳು, ದೇವರಲ್ಲಿ ಗುರು ಹಿರಿಯರಲ್ಲಿ ಭಕ್ತಿಯುಳ್ಳವಳು, ದ್ರವ್ಯಾನುಕೂಲಳು, ಆಗುವಳು.

ಭರಣಿ ನಕ್ಷತ್ರದಲ್ಲಿ ಜನಿಸಿದವಳು—ಘಾತಕ ವಿಚಾರದವಳು, ಅಂತಃಕರಣ ಶುದ್ಧವಿಲ್ಲದವಳು, ಪಾಪಿಷ್ಟಳು, ಗರ್ವಸ್ವಭಾವಿಯು, ಕಲಹಪ್ರಿಯಳು, ಭಾಗ್ಯಹೀನಳು, ಸುಖರಹಿತಳು ಉಡಿಗೆ ತೊಡಿಗೆ ಮಲಿನವಾಗಿಡತಕ್ಕವಳು, ಆಗುವಳು.

ಕೃತ್ತಿಕ ನಕ್ಷತ್ರದಲ್ಲಿ ಜನಿಸಿದವಳು- ಕೃಶ (ತೆಳ್ಳಗಾದ) ಶರೀರದವಳು, ಶೀಘ್ರಕೋಪಿಯು, ಕಫ, ಶೀತ ಪ್ರಕೃತಿಯುವಳು ಜಗಳಗಂಟಿಯು, ಆಪ್ತೇಷ್ಟರೊಡನೆ ಕಲಹ ಮಾಡತಕ್ಕವಳು, ವಿನಾಕಾರಣ ದ್ವೇಷ ಮಾಡತಕ್ಕವಳು. ಉದಾಸೀನ ಪ್ರವೃತ್ತಿಯುವಳು ಆಗುವಳು

ರೋಹಿಣಿ ನಕ್ಷತ್ರದಲ್ಲಿ ಜನಿಸಿದವಳು— ಸದಾಚಾರಳು, ತಾಯಿ ತಂದೆಗಳಲ್ಲಿ ಭಕ್ತಿಯುಳ್ಳವಳು, ಬಹುಜಾಣಳು ಪತಿವ್ರತೆಯು, ಐಶ್ವರ್ಯವಂತಳು, ಪುತ್ರ ಪುತ್ರಿಯುಳ್ಳವಳು, ಸುಂದರಳು, ಲೋಕಮಾನ್ಯಳು, ಆಗುವಳು.

ಮೃಗಶಿರ ನಕ್ಷತ್ರದಲ್ಲಿ ಜನಿಸಿದವಳು— ಸಕಲ ಜನರೊಡನೆ ಪ್ರೇಮದಿಂದ ಮಾತಾಡುವವಳು, ಸುಸ್ವರೂಪಳು, ವಸ್ತ್ರಾಲಂಕಾರ ಪ್ರಿಯಳು, ಧನ ಧಾನ್ಯ, ಪೂರ್ಣಳು, ಎಲ್ಲ ಕೆಲಸಗಳನ್ನು ಮನಃಪೂರ್ವಕ ಮಾಡತಕ್ಕವಳು, ಪುತ್ರವತಿಯು, ದಾನ, ಧರ್ಮ, ಪರೋಪಕಾರಗಳಲ್ಲಿ ಆಸಕ್ತಳು, ಶುದ್ಧ ಅಂತಃಕರಣವುಳ್ಳವಳು, ವಿನಯಶೀಲಳು, ಆಗುವಳು.

ಆರಿದ್ರಾ ನಕ್ಷತ್ರದಲ್ಲಿ ಜನಿಸಿದವಳು—ದುಷ್ಟಸ್ವಭಾವದವಳು, ದೇವತಾ ಭಕ್ತಿಯುಳ್ಳವಳು, ಪರರ ಕೆಲಸಗಳಲ್ಲಿ ಕೈಹಾಕತಕ್ಕವಳು, ವಿಶೇಷವಾಗಿ ಖರ್ಚು ಮಾಡತಕ್ಕವಳು, ಗುಪ್ತಕಾರಸ್ಥಾನದಲ್ಲಿ ಚತುರಳು, ಕಫ, ಪಿತ್ತ ವಿಕಾರವುಳ್ಳ ದಳು, ಬಹು ಸಿಟ್ಟಿನವಳು ಆಗುವಳು.

ಪುನರ್ವಸು ನಕ್ಷತ್ರದಲ್ಲಿ ಜನಿಸಿದವಳು—ಉತ್ತಮ ಸ್ವಭಾವದವಳು, ಸುಂದರಳು, ಪುಣ್ಯದಕೆಲಸ ಮಾಡುವ ಅಪೇಕ್ಷೆಯುಳ್ಳವಳು, ಲೋಕಪೂಜ್ಯಳು, ಪತಿಭಕ್ತಿ ಪಾರಾಯಣಳು, ಧರ್ಮದಂತೆ ನಡೆಯುತಕ್ಕವಳು, ವಂಧ್ಯಳು, ನಿಷ್ಕಪಟಳು ಆಗುವಳು.

ಪುಷ್ಯ ನಕ್ಷತ್ರದಲ್ಲಿ ಜನಿಸಿದವಳು—ಸುಖಭೋಗಿಯು, ರೂಪವಂತಳು, ಕಾರ್ಯದಕ್ಷಳು, ದೇವಬ್ರಾಹ್ಮಣರಲ್ಲಿ ಭಕ್ತಿಯುಳ್ಳವಳು, ಸುಖಸಂಪನ್ನಳು, ಬಂಧುಜನಪ್ರಿಯಳು, ಸುಪುತ್ರರುಳ್ಳವಳು, ಸೌಭಾಗ್ಯವಂತಳು, ಧನವಂತಳು, ಪ್ರಸಿದ್ಧಳು ಆಗುವಳು.

ಆಶ್ಲೇಷ ನಕ್ಷತ್ರದಲ್ಲಿ ಜನಿಸಿದವಳು—ಕಠೋರವಾಗಿ ಮಾತಾಡುವವಳು, ಎಲ್ಲ ಕೆಲಸಗಳನ್ನು ಸರಿಯಾಗಿ ಮಾಡದವಳು, ಗರ್ವಿಷ್ಠಳು, ಕಪಟಿಯು, ಕೃತಘ್ನಳು ಕ್ರಿಯಾಭ್ರಷ್ಟಳು ಆಗುವಳು.

ಮಘಾ ನಕ್ಷತ್ರದಲ್ಲಿ ಜನಿಸಿದವಳು—ಗುರುಹಿರಿಯರಲ್ಲಿ ಭಕ್ತಿಯುಳ್ಳವಳು, ರಾಜಸುಖಭೋಗಿಯು, ಐಶ್ವರ್ಯವಂತಳು, ಪಾಪಕ್ಕೆ ಅಂಜತಕ್ಕವಳು, ಲೋಕಮಾನ್ಯಳು, ಬಹುಜನರಲ್ಲಿ ವಿರೋಧವುಳ್ಳವಳು ಆಗುವಳು.

ಪುಬ್ಬ ನಕ್ಷತ್ರದಲ್ಲಿ ಜನಿಸಿದವಳು—ರೂಪವತಿಯು, ಸತ್ಯಮಾರ್ಗಸಕ್ತಳು, ಶತ್ರುಗಳನ್ನು ಜಯಿಸುವವಳು, ಪ್ರೀತಿಯಿಂದ ಮಾತಾಡುವವಳು, ಧರ್ಮಶಾಸ್ತ್ರಗಳಲ್ಲಿ ಅಭಿರುಚಿಯುಳ್ಳವಳು, ಪುಣ್ಯವಂತಳು, ಅನ್ಯರಿಗೆ ಉಪಕಾರ ಮಾಡತಕ್ಕವಳು, ವಿನಯವತಿಯು ಆಗುವಳು.

ಉತ್ತರ ನಕ್ಷತ್ರದಲ್ಲಿ ಜನಿಸಿದವಳು—ವಿನಯಶೀಲಳು, ಧನಧಾನ್ಯಯುತಳು, ಮನೆಯ ಕೆಲಸಗಳಲ್ಲಿ ಇತರ ವಿಷಯಗಳಲ್ಲಿ ಬಹುದಕ್ಷಳು, ಆರೋಗ್ಯವಂತಳು, ಸದ್ಗುಣಳು, ಸ್ಥಿರಬುದ್ಧಿಯುಳ್ಳವಳು, ಸುಖಿಯು ಆಗುವಳು.

ಹಸ್ತ ನಕ್ಷತ್ರದಲ್ಲಿ ಜನಿಸಿದವಳು—ಸದ್ಗುಣಳು, ಕ್ಷಮಾಗುಣವುಳ್ಳವಳು, ಸುಶೀಲೆಯು, ಹಲವು ಉಪಾಯ ಬಲ್ಲವಳು, ದೈವಶಾಲಿಯೂ, ಬಹು ಸುಖ

ಭೋಗಿಯೂ, ಸುಂದರವಾದ ಕಣ್ಣು, ಕಿವಿ, ಕರ, (ಕೈ) ಇವುಳ್ಳವಳು ಶುಭಯೋಗವುಳ್ಳವಳು ಆಗುವಳು.

ಚಿತ್ತಾ ನಕ್ಷತ್ರದಲ್ಲಿ ಜನಿಸಿದವಳು ರೂಪವತಿಯೂ, ಸುಖಿಯೂ, ನಾನಾ ರೀತಿಯ ಅಲಂಕಾರಪ್ರಿಯಳು, ಶುಕ್ಲಪಕ್ಷದ ಚತುರ್ದಶಿ ತಿಥಿ ಹಾಗೂ ಚಿತ್ತಾ ನಕ್ಷತ್ರದಲ್ಲಿ ಜನಿಸಿದವಳು ವ್ಯಭಿಚಾರದಲ್ಲಿ ಪ್ರವೀಣಳು, ದರಿದ್ರಳು, ಆಗುವಳು.

ಸ್ವಾತಿ ನಕ್ಷತ್ರದಲ್ಲಿ ಜನಿಸಿದವಳು–ಸತ್ಪುತ್ರವಂತಳು, ಧನಧಾನ್ಯ ಸಮೃದ್ಧಿಯುಳ್ಳವಳು, ಪತಿವ್ರತೆಯೂ, ಸತ್ಯ ಮಾತಾಡುವವಳು, ಸಾವಕಾಶ ನಡೆಯತಕ್ಕವಳು, (ಮಂದಗಮನೆ) ಬಹುಸುಖಭೋಗಿಯೂ, ಕೀರ್ತಿವಂತಳು, ಬಹುಜನ ಸಖಿ(ಗೆಳತಿ) ಯರುಳ್ಳವಳು, ವೈರಿಗಳಿಗೆ ಅಂಜದವಳು, ಪ್ರತಿಸ್ಪರ್ಧಿಗಳನ್ನು ಜಯಿಸುವವಳು ಆಗುವಳು.

ವಿಶಾಖಾ ನಕ್ಷತ್ರದಲ್ಲಿ ಜನಿಸಿದವಳು– ಕೋಮಲ ಸ್ವಭಾವಿಯೂ, ಐಶ್ವರ್ಯವಂತಳು, ದಾನ, ಧರ್ಮ, ಪರೋಪಕಾರ, ವ್ರತ, ನೇಮಾದಿಗಳನ್ನು ಮಾಡುವವಳು, ಬಂಧುಜನ ಪ್ರಿಯಳು, ತೀರ್ಥ, ಪುಣ್ಯಕ್ಷೇತ್ರ ಯಾತ್ರಾಮಾಡತಕ್ಕವಳು, ವಿನಯಶೀಲಳು, ಮೃದುವಾಗಿ ಮಾತಾಡತಕ್ಕವಳು, ಭಯ ಭಕ್ತಿಯುಳ್ಳವಳು ಆಗುವಳು.

ಅನುರಾಧಾ ನಕ್ಷತ್ರದಲ್ಲಿ ಜನಿಸಿದವಳು ಅಖಂಡ ಸೌಭಾಗ್ಯವತಿಯೂ, ಸೂಕ್ಷ್ಮ ಸ್ವಭಾವಿಯೂ, ಗುರುದೇವತಾ ಭಕ್ತಿಯುಳ್ಳವಳು, ವಸ್ತ್ರಾಲಂಕಾರ ಪ್ರಿಯಳು, ಸುಶೀಲರಾದ ಗೆಳತಿಯರುಳ್ಳವಳು, ನಿರಭಿಮಾನಿಯೂ, ಅಧಿಕಾರ ಯೋಗವುಳ್ಳವಳು, ವಿಚಾರವಂತಳು, ಆಗುವಳು.

ಜ್ಯೇಷ್ಠ ನಕ್ಷತ್ರದಲ್ಲಿ ಜನಿಸಿದವಳು–ಮಂಜುಳವಾದ ಧ್ವನಿಯುಳ್ಳವಳು, ಪ್ರೌಢವಿಚಾರವುಳ್ಳವಳು, ಧನಧಾನ್ಯಯುತಳು, ಪುತ್ರವತಿಯೂ, ಬಂಧುಪ್ರಿಯಳು, ಸೌಭಾಗ್ಯವತಿಯೂ, ಸತ್ಯಭಾಷಿಣಿಯೂ ಆಗುವಳು.

ಮೂಲ ನಕ್ಷತ್ರದಲ್ಲಿ ಜನಿಸಿದವಳು— ರೋಗಿಯೂ, ದರಿದ್ರಳು, ಗರ್ವಿಷ್ಠಳು, ನೀಚಳು, ಬಂಧುಜನ ಹೀನಳು, ಬಹುಶತ್ರುವಂತಳು, ಪರರಿಂದ ಕಷ್ಟ ಹೊಂದತಕ್ಕವಳು, ವಿಧವೆಯೂ, ಸಾಧಾರಣ ಸುಖಭೋಗಿಯು ಆಗುವಳು.

ಪೂರ್ವಾಷಾಢ ನಕ್ಷತ್ರದಲ್ಲಿ ಜನಿಸಿದವಳು– ಸರ್ವಾನುಕೂಲಳು, ತನ್ನ ಕುಲದಲ್ಲಿ ಶ್ರೇಷ್ಠಳು, ಸತ್ಯ ಹಾಗೂ ಸ್ತುತ್ಯ ಕೆಲಸಗಳಲ್ಲಿ ಅಭಿರುಚಿಯು ಯುಳ್ಳವಳು, ಬಹು ಸಾಹಸಿಯು, ವಿಶಾಲವಾದ ನೇತ್ರವುಳ್ಳವಳು, ಬಹು ಕೀರ್ತಿವಂತಳು, ಸೌಂದರ್ಯವತಿಯು ಆಗುವಳು.

ಉತ್ತರಾಷಾಢ ನಕ್ಷತ್ರದಲ್ಲಿ ಜನಿಸಿದವಳು– ಸುಂದರಳು, ಪ್ರಖ್ಯಾತಳು, ನಾನ ರೀತಿಯಿಂದ ಶ್ರೀಮಂತಿಕೆಯ ಸುಖಭೋಗ ಕೊಂದತಕ್ಕವಳು, ಪತಿಪ್ರಿಯಳು, ಸರ್ವಾನುಕೂಲಳು, ಶಾಂತಸ್ವಭಾವಿಯು, ಜಾಣಳು, ಸಮಾಜದಲ್ಲಿ ಅಗ್ರಗಣ್ಯಳು ಆಗುವಳು.

ಶ್ರವಣ ನಕ್ಷತ್ರದಲ್ಲಿ ಜನಿಸಿದವಳು–ಸ ಸ್ವರೂಪಳು, ಜ್ಞಾನವತಿಯು, ಧರ್ಮಶಾಸ್ತ್ರಪ್ರಿಯಳು, ಪ್ರಮುಖಳು, ದಾನಶೂರಳು, ಸತ್ಯಮಾತಾಡುವವಳು, ಪರೋಪಕಾರ ಮಾಡುವವಳು, ಪತಿಪ್ರಿಯಳು ಆಗುವಳು.

ಧನಿಷ್ಠ ನಕ್ಷತ್ರದಲ್ಲಿ ಜನಿಸಿದವಳು– ಬಹು ಸುಖಭೋಗಿಯು, ನಾನಾ ಪ್ರಕಾರದ ವಸ್ತ್ರಾಲಂಕಾರಯುಕ್ತಳು, ಧನಧಾನ್ಯಯುತಳು, ಸುಖಿಭೋಗಿಯು, ಭೂತದಯೆಯುಳ್ಳವಳು, ಗುಣಸಂಪನ್ನಳು, ಹೆಸರುವಾಸಿಯಾದವಳು ಆಗುವಳು.

ಶತತಾರ ನಕ್ಷತ್ರದಲ್ಲಿ ಜನಿಸಿದವಳು–ಆತ್ಮ ಸಂಯಮವುಳ್ಳವಳು, ಸ್ತ್ರೀಜನ ಮಾನ್ಯಳು, ಬಂಧುಜನರಲ್ಲಿ ಪೂಜ್ಯಳು, ದೇವತಾ ಪೂಜಾದಿಗಳಲ್ಲಿ ಅಭಿರುಚಿಯುಳ್ಳವಳು, ಪೂಜ್ಯರಲ್ಲಿ, ಸಾಧು ಸತ್ಪುರುಷರಲ್ಲಿ ಭಕ್ತಿಯುಳ್ಳವಳು, ಕೌತುಕಪಡತಕ್ಕಂಥ ಸದ್ಗುಣವುಳ್ಳವಳು ಆಗುವಳು.

ಪೂರ್ವಾಭಾದ್ರಪದ ನಕ್ಷತ್ರದಲ್ಲಿ ಜನಿಸಿದವಳು– ಶ್ರೀಮಂತಳು, ಪುರಾಣ, ಪುಣ್ಯಕಥಾ, ಶ್ರವಣ ಪ್ರಿಯಳು, ಸತ್ಪಾತ್ರದಲ್ಲಿ ದಾನ ಮಾಡತಕ್ಕವಳು, ಪೂಜ್ಯರಲ್ಲಿ, ಸತ್ಪುರುಷರಲ್ಲಿ, ಭಕ್ತಿಯುಳ್ಳವಳು, ಹೆಸರುವಾಸಿಯಾಗತಕ್ಕವಳು ಆಗುವಳು.

ಉತ್ತರ ಭಾದ್ರಪದ ನಕ್ಷತ್ರದಲ್ಲಿ ಜನಿಸಿದವಳು– ಯಾವಾಗಲೂ ಗಂಡನ ಹಿತವನ್ನು ಅಪೇಕ್ಷಿಸುವವಳು, ಕ್ಷಮಾಶೀಲಳು, ಗುರು ಹಿರಿಯರಲ್ಲಿ ಭಕ್ತಿಯುಳ್ಳವಳು, ನಿಗರ್ವಿಯು, ತಾಳ್ಮೆಯ ಸ್ವಭಾವದವಳು, ವಿಚಾರವಂತಳು,

ಸಕಲ ಕಾರ್ಯಗಳನ್ನು ಮನಃಪೂರ್ವಕ ಮಾಡತಕ್ಕವಳು, ಸುಖಭೋಗಿಯು ಆಗುವಳು.

ರೇವತಿ ನಕ್ಷತ್ರದಲ್ಲಿ ಜನಿಸಿದವಳು- ಬಹುಜನ ಸಖಿಯರುಳ್ಳವಳು, ಶುದ್ಧಸ್ವಭಾವದವಳು, ಸುಸ್ವರೂಪಳು (ರೂಪವತಿ) ವಸ್ತ್ರ, ವಾಹನ, ಪಶು ಸಂಪತ್ತಿಯುಳ್ಳವಳು, ದಾಸಿಯರಲ್ಲಿ ಪ್ರೀತಿಯುಳ್ಳವಳು, ಲೋಕಪೂಜ್ಯಳು, ಶತ್ರುಗಳನ್ನು ಗೆಲ್ಲತಕ್ಕವಳು, ಯಾವಾಗಲೂ ನಗುಮೊಗದವಳು, ಹಸನ್ಮುಖಿಯು ಆಗುವಳು

– ಮೇಷಾದಿ ೧೨ ರಾಶಿಗಳಲ್ಲಿ ಜನನವಾದ ಫಲ –

ಮೇಷರಾಶಿಯಲ್ಲಿ ಜನಿಸಿದವಳು–ಪ್ರೌಢವಿಚಾರದವಳು, ಅತಿ ಸುಂದರಳು, ಪತಿಗೆ ಪ್ರಿಯಳು, ಗುರು-ಹಿರಿಯರಲ್ಲಿ ಭಯಭಕ್ತಿಪೂರ್ಣಳು, ಕರ್ತವ್ಯದಕ್ಷಳು, ಶ್ರೇಷ್ಠಳು ಆಗುವಳು.

ವೃಷಭರಾಶಿಯಲ್ಲಿ ಜನಿಸಿದವಳು– ವಿದ್ಯಾವಂತಳು, ವಿಚಾರಶೀಲಳು, ಬಹು ಸಂತಾನಯುತಳು, ಸುಶೀಲಳು, ಶ್ರೀಮಂತಳು, ಪತಿಪ್ರಿಯಳು, ಪುಣ್ಯಕ್ಷೇತ್ರ, ತೀರ್ಥಯಾತ್ರೆ ಕೈಕೊಳ್ಳತಕ್ಕವಳು ಆಗುವಳು.

ಮಿಥುನರಾಶಿಯಲ್ಲಿ ಜನಿಸಿದವಳು– ಸುಂದರವಾದ ಶರೀರವುಳ್ಳವಳು, ಧನಧಾನ್ಯಯುತಳು, ಮಾನವಂತಳು, ಕುಶಲಳು, ಪರೋಪಕಾರಿಯು, ಸುಶೀಲಳು ಆಗುವಳು.

ಕರ್ಕರಾಶಿಯಲ್ಲಿ ಜನಿಸಿದವಳು–ತನ್ನ ಬಂಧುಬಳಗದವರಲ್ಲಿ ಪೂಜ್ಯಳು, ಶತ್ರುಗಳಿಲ್ಲದವಳು, ದೇವ, ಬ್ರಾಹ್ಮಣ ಗುರುಹಿರಿಯರಲ್ಲಿ ಶ್ರದ್ಧೆಯುಳ್ಳವಳು, ಮಾನವತಿಯು ಆಗುವಳು

ಸಿಂಹರಾಶಿಯಲ್ಲಿ ಜನಿಸಿದವಳು–ವಸ್ತ್ರಾಲಂಕಾರಪ್ರಿಯಳು, ಸೌಭಾಗ್ಯವತಿಯು, ರೂಪದಲ್ಲಿ ಸುಂದರಳು, ಚಪಲಳು, ಕಲಹಪ್ರಿಯಳು, ಸ್ವಜನ ಪರಜನರಲ್ಲಿ ಮುಖಂಡಳು ಆಗುವಳು.

ಕನ್ಯಾರಾಶಿಯಲ್ಲಿ ಜನಿಸಿದವಳು–ಧನಧಾನ್ಯ ಪಶು ಸಂಪತ್ತಿಯುಳ್ಳವಳು, ಪತಿಮಾನ್ಯಳು, ಶತ್ರುಗಳಿಗೆ ಭಯಪಡದವಳು, ಕ್ಷಮಾಶೀಲಳು, ಶುದ್ಧಾಚಾರಸಂಪನ್ನಳು, ಸುಖಭೋಗಾಪೇಕ್ಷೆಯುಳ್ಳವಳು ಆಗುವಳು.

ತುಲಾರಾಶಿಯಲ್ಲಿ ಜನಿಸಿದವಳು— ಎಲ್ಲ ಕೆಲಸಗಳನ್ನು ಪರಿಶ್ರಮವಹಿಸಿ ಮಾಡತಕ್ಕವಳು, ಪುತ್ರವತಿಯೂ, ಸುಂದರಿಯೂ, ವ್ರತನೇಮಾದಿಗಳಲ್ಲಿ ಆಸಕ್ತಳು, ಬಂಧು ಜನರಲ್ಲಿ ಪ್ರೀತಿಯುಳ್ಳವಳು, ಡಾಂಭಿಕ ಸ್ವಭಾವದವಳು, ಪತಿವ್ರತೆಯು, ಸುಂದರಳು ಆಗುವಳು.

ವೃಶ್ಚಿಕರಾಶಿಯಲ್ಲಿ ಜನಿಸಿದವಳು— ಸ್ಥಿರ ಬುದ್ಧಿಯುಳ್ಳವಳು, ಧನ ಸಂಗ್ರಹ ಮಾಡತಕ್ಕವಳು, ಸಿರಭಿಮಾನಿಯೂ, ಕೈಕೊಂಡ ಕೆಲಸಗಳನ್ನು ಪೂರ್ಣ ಮಾಡತಕ್ಕವಳು, ಗುರು ಹಿರಿಯರಲ್ಲಿ ಭಕ್ತಿಯುಳ್ಳವಳು, ಗುಪ್ತವಾಗಿ ಪಾಪಕಾರ್ಯ ಮಾಡತಕ್ಕವಳು.

ಧನುರಾಶಿಯಲ್ಲಿ ಜನಿಸಿದವಳು—ದಾನಶೂರಳು, ಸಕಲರೊಡನೆ ಪ್ರೀತಿಯಿಂದ ಇರತಕ್ಕವಳು, ದೀರ್ಘಾಯುಷಿ ಆಗಬೇಕೆಂಬ ಇಚ್ಛೆಯುಳ್ಳವಳು, ವಿನಯಶೀಲಳು, ಹೆಣ್ಣು ಸಂತತಿಯುಳ್ಳವಳು, ವ್ರತನೇಮಾದಿಗಳಲ್ಲಿ ಆಸಕ್ತಳು, ಸಂಗೀತ ಪ್ರಿಯಳು ಆಗುವಳು.

ಮಕರರಾಶಿಯಲ್ಲಿ ಜನಿಸಿದವಳು - ಸ್ಥೂಲ ಶರೀರದವಳು, ಗಂಭೀರಳು, ರೂಪವಂತಳು, ವಿದ್ಯಾವಂತಳು, ಸಂಶಯ ಸ್ವಭಾವದವಳು, ನೀತಿವಂತಳು, ಶತ್ರುಗಳನ್ನು ಜಯಿಸತಕ್ಕವಳು, ಹಟಮಾರಿಯು, ಧೈರ್ಯವಾಗಿ ಮಾತಾಡತಕ್ಕವಳು, ವಿಶಾಲಮುಖವುಳ್ಳವಳು ಆಗುವಳು.

ಕುಂಭರಾಶಿಯಲ್ಲಿ ಜನಿಸಿದಳು— ಚಂದ್ರನಂತೆ ಮುಖಕಾಂತಿಯುಳ್ಳವಳು, ಸನ್ಮಾರ್ಗನಿರತಳು, ಅಭಿಮಾನವುಳ್ಳವಳು, ಧನ, ಧಾನ್ಯ, ಪುತ್ರ, ಪೌತ್ರರಿಂದ ಕೂಡಿದವಳು ಆಗುವಳು.

ಮೀನರಾಶಿಯಲ್ಲಿ ಜನಿಸಿದವಳು—ಧರ್ಮಸಂಬಂಧ ವಿಚಾರದಲ್ಲಿ ಆಸಕ್ತಿಯುಳ್ಳವಳು, ಸುಶೀಲಳು, ಲಜ್ಜಾವತಿಯು, ಮಾನವಂತಳು, ಸುಸ್ವರೂಪಳು, ಬುದ್ಧಿಶಾಲಿಯು, ಆತ್ಮಸಂಯಮನವುಳ್ಳವಳು ಆಗುವಳು.

— ಮೇಷಾದಿ ೧೨ ಲಗ್ನಗಳಲ್ಲಿ ಜನನವಾದ ಫಲ —

ಮೇಷಲಗ್ನದಲ್ಲಿ ಜನಿಸಿದವಳು— ಸುಳ್ಳುಮಾತಾಡುವವಳು, ಘಾತಕ ವಿಚಾರದವಳು, ಕ್ರೋಧ ಸ್ವಭಾವದವಳು, ನಿಷ್ಠುರವಾಗಿ ಮಾತಾಡತಕ್ಕವಳು, ಆಪ್ತೇಷ್ಟರಲ್ಲಿ ಪ್ರೇಮವಿಲ್ಲದವಳು, ಕಫದಿಂದ ಉಂಟಾಗುವ ಕೆಮ್ಮು, ದಮ್ಮು

ಮುಂತಾದ ರೋಗಗಳಿಂದ ಬಳಲುವವಳು, ಯಾರಿಂದಲೂ ಉಪಕಾರವನ್ನು ಹೊಂದದವಳು, ಧೂರ್ತಳು, ಕಠೋರ ನಡತೆಯುಳ್ಳವಳು ಆಗುವಳು.

ವೃಷಭಲಗ್ನದಲ್ಲಿ ಜನಿಸಿದವಳು— ಸತ್ಯಮಾತಾಡುವವಳು, ಸುಂದರ ವಾದ ದೇಹವುಳ್ಳವಳು, ವಿನಯವಂತಳು, ಪತಿಪ್ರೇಮಕ್ಕೆ ಪಾತ್ರಳು, ಜಾಣಳು, ಸ್ವಜನರಲ್ಲಿ ಬಹುಪ್ರಿಯಳು, ಪತಿವಾಕ್ಯಪಾಲನ ಮಾಡುವದರಲ್ಲಿ ಪ್ರಸಿದ್ಧಳು. ಗೌರವ ಶೀಲಳು ಆಗುವಳು.

ಮಿಥುನಲಗ್ನದಲ್ಲಿ ಜನಿಸಿದವಳು— ಸಿಟ್ಟಿನಿಂದ ಮಾತಾಡುವವಳು, ಬಹು ಕಾಮಿಯು, ಗುಣಹೀನಳು, ಘಾತವಿಚಾರ ಮಾತಾಡತಕ್ಕವಳು, ಖರ್ಚು ಮಾಡಲಿಕ್ಕೆ ಹೆದರದವಳು, ಕಫ, ವಾತ ಶರೀರದವಳು, ಕ್ರೂರ ಕೆಲಸ ಮಾಡ ತಕ್ಕವಳು ಆಗುವಳು.

ಕರ್ಕಲಗ್ನದಲ್ಲಿ ಜನಿಸಿದವಳು— ಸುಂದರಳು, ಧನಧಾನ್ಯಯುಕ್ತಳು, ನೀತಿಯಿಂದ ನಡೆದು ಕೀರ್ತಿ ಹೊಂದತಕ್ಕವಳು, ಬಂಧುಪ್ರಿಯಳು, ಸಾಧು ಸತ್ಪುರುಷರಲ್ಲಿ ಪೂಜ್ಯಗುರುಗಳಲ್ಲಿ ಭಕ್ತಿಯುಳ್ಳವಳು, ಸುಶೀಲಳು, ಸರ್ವ ಪ್ರಕಾರದ ಸುಖಭೋಗಗಳನ್ನು ಪೂರ್ಣವಾಗಿ ಹೊಂದತಕ್ಕವಳು, ಹಸನ್ಮುಖಿಳು, ಆಗುವಳು.

ಸಿಂಹಲಗ್ನದಲ್ಲಿ ಜನಿಸಿದವಳು— ಪರೋಪಕಾರ ದುರಂಧರಳು, ಶರಣಾ ಗತರನ್ನು ರಕ್ಷಿಸತಕ್ಕವಳು, ಹಟದ ಸ್ವಭಾವದವಳು, ತನ್ನ ಇಷ್ಟ ಕಾರ್ಯಸಿದ್ಧಿ ಯಾಗದೆ ಶಾಂತಿ ಹೊಂದಿದವಳು, ಗಂಭೀರಳು, ಕಲಹಪ್ರಿಯಳು, ಪ್ರಖರಳು, ಮತ್ತು ಈ ಲಗ್ನದಲ್ಲಿ ಜನಿಸಿದ ತ್ರಿಂಶಾಂಶವಾದರೆ ಅವಳು ದುರ್ಗೆಯಂತೆ ಯಾವಾಗಲೂ ಭಯಂಕರ ಸ್ವಭಾವದವಳು ಆಗುವಳು.

ಕನ್ಯಾಲಗ್ನದಲ್ಲಿ ಜನಿಸಿದವಳು ಸುಶೀಲರಾದ ಮೈತ್ರಿಣಿ (ಗೆಳತಿ) ಯ ರಲ್ಲಿ ಸ್ನೇಹ ಮಾಡತಕ್ಕವಳು, ಬಹುದಾನಶೂರಳು, ಸಕಲ ಕಲಾ ಕುಶಲಳು, ಆತ್ಮ ಸಂಯಮವುಳ್ಳವಳು, ಹಿತಕಾರ್ಯದಕ್ಷಳು, ಸೌಭಾಗ್ಯವಂತಳು, ಸುಖ ಭೋಗಿಯು ಆಗುವಳು.

ತುಲಾಲಗ್ನದಲ್ಲಿ ಜನಿಸಿದವಳು— ಎಲ್ಲ ಕೆಲಸಗಳನ್ನು ಆಲಸ್ಯದಿಂದ ಮಾಡತಕ್ಕವಳು, ಮಂದಬುದ್ಧಿಯುಳ್ಳವಳು, ಪ್ರೀತಿಯನ್ನೇ ಜರಿಯುವವಳು, ಗರ್ವಿಷ್ಠಳು, ಜ್ಞಾನಶೂನ್ಯಳು, ನೀತಿಯುಲ್ಲದವಳು ಆಗುವಳು.

ವೃಶ್ಚಿಕಲಗ್ನದಲ್ಲಿ ಜನಿಸಿದವಳು— ಮೋಹಕವಾದ ಹಾಗೂ ಸುಂದ
ವಾದ ದೇಹವುಳ್ಳವಳು, ಪುಣ್ಯಶೀಲಳು, ಪತಿವ್ರತೆಯು ಸದ್ಗುಣಿಯು ಸ
ವಂತಳು, ಸಂಪನ್ನಳು, ಆಗುವಳು.

ಧನಸ್ಸುಲಗ್ನದಲ್ಲಿ ಜನಿಸಿದವಳು— ಸುವಿಚಾರವುಳ್ಳವಳು, ಪುರುಷರ
ನಡಿಗೆಯುಳ್ಳವಳು, ಮನೋರಥವನ್ನು ಪೂರ್ಣಮಾಡಿಕೊಳ್ಳುವ ಸುಯೋ
ವುಳ್ಳವಳು, ಯಾರ ಮೇಲೆಯೂ ವಿಶ್ವಾಸವಿಡದವಳು, ಪ್ರೀತಿ, ಆಶಾ, ಆಕಾ
ಗಳನ್ನು ಅರಿಯದವಳು ಆಗುವಳು.

ಮಕರಲಗ್ನದಲ್ಲಿ ಜನಿಸಿದವಳು— ಸದೈವಯೋಗವುಳ್ಳವಳು, ಸತ್ಯವ
ತಾಡತಕ್ಕವಳು, ತೀರ್ಥಯಾತ್ರೆ, ಪುಣ್ಯಕ್ಷೇತ್ರ ನೋಡುವ ಇಚ್ಛೆಯುಳ್ಳವ
ಸ್ತುತ್ಯವಾದ ಕೆಲಸ ಮಾಡತಕ್ಕವಳು, ಶತ್ರುಗಳನ್ನು ನಾಶಮಾಡತಕ್ಕವ
ಹೆಸರುವಾಸಿಯಾದವಳು, ಪುತ್ರವತಿಯು, ಲೋಕಮಾನ್ಯಳು, ಆಗುವಳು.

ಕುಂಭಲಗ್ನದಲ್ಲಿ ಜನಿಸಿದವಳು— ಗುರುಭಕ್ತಿರಹಿತಳು, ವಿಶೇಷ ಖ
ಮಾಡುವವಳು, ಕುಲ ಧರ್ಮಾಚರಣೆಯಂತೆ ನಡೆದುಕೊಳ್ಳುವವಳು, ಪ
ಕಾರ್ಯಗಳಲ್ಲಿ ಆಸಕ್ತಳು, ಕೃತಘ್ನಳು, ಮದೋನ್ಮತ್ತಳು, ರಕ್ತದೋಷವುಳ್ಳವ
ಆಗುವಳು.

ಮೀನಲಗ್ನದಲ್ಲಿ ಜನಿಸಿದವಳು - ಪುತ್ರ, ಪೌತ್ರರ ಸುಖವನ್ನು ಪಡೆ
ತಕ್ಕವಳು, ಪತಿಪ್ರಿಯಳು, ಸ್ವಜನ, ಪರಜನರಲ್ಲಿ ಮಾನ್ಯಳು, ಕಣ್ಣು, ಕೂದ
ಸುಂದರವಾಗಿ ಇರತಕ್ಕವಳು, ದೇವದ್ವಿಜ, ಗುರು, ಹಿರಿಯರಲ್ಲಿ ಭಕ್ತಿಯು
ವಳು, ವಿನಯವಂತಳು, ಸ್ವಜನ ಪರಜನರಲ್ಲಿ ಮನ್ನಣೆ ಹೊಂದತಕ್ಕವ
ಆಗುವಳು.

ಜನನ ಲಗ್ನಕುಂಡಲಿಯೊಳು ೧೨ ಸ್ಥಾನಗಳಲ್ಲಿ ಇರತಕ್ಕ ಗ್ರಹಗಳ ಫಲ

– ಲಗ್ನದಿಂದ ೧೨ ಸ್ಥಾನಗಳಲ್ಲಿರುವ ರವಿಯ ಫಲ–

ಜನನ ಲಗ್ನ ಕುಂಡಲಿಯೊಳು (ತನುಸ್ಥಾನ) ದಲ್ಲಿ ರವಿಯು ಇದ್ದ
ಆ ಜಾತಕಳು ರೋಗಿಯು, ದುಷ್ಟಸ್ವಭಾವದವಳು, ಕೃಶ (ತೆಳ್ಳಗಾದ) ವಾ

ಶರೀರವುಳ್ಳವಳು, ಕೃತಘ್ನಳು, ಎರಡನೆಯವರ ಅನ್ನವನ್ನು ಅಪೇಕ್ಷಿಸುವವಳು, ಕಾಂತಿಹೀನಳು ಕ್ರೂರಳು ಆಗುವವಳು.

ಎರಡನೆಯ (ಧನ)ಸ್ಥಾನದಲ್ಲಿ ರವಿಯು ಇದ್ದರೆ–ಕಠೋರವಾಗಿ ಮಾ.ಾಡ ತಕ್ಕವಳು, ಕಲಹಪ್ರಿಯಳು, ಸ್ನೇಹಹೀನಳು, ದುಷ್ಟಳು,ದ್ವೇಷಿಯು, ಧನಧಾನ್ಯ ರಹಿತಳು, ಪರಿಶ್ರಮ ಪಡದವಳು ಆಗುವವಳು.

ಮೂರನೆಯ (ಭ್ರಾತೃ) ಸ್ಥಾನದಲ್ಲಿ ರವಿಯು ಇದ್ದರೆ— ಸುಂದರವಾದ ದೇಹವುಳ್ಳವಳು, ನಗೆಮುಖದವಳು, ನಮ್ರಸ್ವಭಾವಿಯು, ಸುಖಭೋಗಿಯು, ಆಗುವವಳು.

ನಾಲ್ಕನೆಯ (ಮಾತೃ) ಸ್ಥಾನದಲ್ಲಿ ರವಿಯು ಇದ್ದರೆ— ವಿಶಾಲವಾದ ಮುಖವು, ದೊಡ್ಡಹಲ್ಲುಗಳು, ಇರತಕ್ಕವಳು, ಸೌಖ್ಯಹೀನಳು, ಅಕಸ್ಮಾತ್ ಗಂಡನನ್ನು ತಿರಸ್ಕರಿಸುವವಳು, ರೋಗಿಯು ಆಗುವವಳು.

ಐದನೆಯ (ಸುತ)ಸ್ಥಾನದಲ್ಲಿ ರವಿಯು ಇದ್ದರೆ-ಸ್ತ್ರೀಯರಲ್ಲಿ (ತವರುಮನೆ ಹಾಗೂ ಗಂಡನ ಮನೆಯಲ್ಲಿ) ಶ್ರೇಷ್ಠಳು, ವ್ರತನೇಮಾದಿಗಳುಳ್ಳವಳು, ಮಾತಾ ಪಿತೃಗಳಲ್ಲಿ ದೇವ ಬ್ರಾಹ್ಮಣರಲ್ಲಿ ಗುರುಭಕ್ತಿಯುಳ್ಳವಳು, ಸರ್ವರೊಡನೆ ಪ್ರೀತಿಯಿಂದ ಮಾತಾಡತಕ್ಕವಳು, ಚತುರೋಪಾಯ ಬಲ್ಲವಳು, ಧೀರಳು, ಶೂರಳು, ವಿಚಾರಶೀಲಳು, ಪುತ್ರವತಿಯು ಆಗುವವಳು.

ಆರನೆಯ (ಶತ್ರು) ಸ್ಥಾನದಲ್ಲಿ ರವಿಯು ಇದ್ದರೆ ಶಾಂತ ಸ್ವಭಾವ ದವಳು, ಧರ್ಮಕಾರ್ಯಗಳಲ್ಲಿ ಅಭಿರುಚಿಯುಳ್ಳವಳು, ಸೌಭಾಗ್ಯವತಿಯು, ಕಾರ್ಯದಕ್ಷಳು, ಪ್ರೌಢಳು, ಸುಸ್ವರೂಪಿಯು, ಶತ್ರುಗಳನ್ನು ಜಯಿಸತಕ್ಕವಳು ಆಗುವವಳು.

ಏಳನೆಯ (ಪತ್ನಿ) ಸ್ಥಾನದಲ್ಲಿ ರವಿಯು ಇದ್ದರೆ— ಕುರೂಪಿಯು, ಕ್ರೂರ ವಾದ ಸ್ವಭಾವದವಳು, ಪಾಪದ ಕೆಲಸ ಮಾಡಲು ಹಿಂಜರಿಯದವಳು, ಕದಾ-ಚಿತ್ ಪತಿಯ ಸುಖವನ್ನು ಹೊಂದಲಾರದವಳು ಆಗುವವಳು.

ಎಂಟನೆಯ (ಮೃತ್ಯು) ಸ್ಥಾನದಲ್ಲಿ ರವಿಯು ಇದ್ದರೆ– ರಕ್ತದೋಷದಿಂದ ಬಳಲತಕ್ಕವಳು, ಉತ್ಸಾಹಹೀನಳು, ಆಚಾರ, ವಿಚಾರಗಳಲ್ಲಿ ಬದಲಾವಣೆ

ಹೊಂದತಕ್ಕವಳು. ತನರುಷನಿಗೆ ಬಹತರವನ್ನುಂಟು ಮಾಡುವಂಥವ
ಆಗುವಳು.

ಒಂಭತ್ತನೆಯ (ಧರ್ಮ) ಸ್ಥಾನದಲ್ಲಿ ರವಿಯು ಇದ್ದರೆ–ಬಹು ಶತ
ಗಳುಳ್ಳವನು, ಕೋಪಿಷ್ಠಳು, ಭಾಗ್ಯಹೀನಳು, ಐಶ್ವರ್ಯಹೀನಳು. ಧರ್ಮ
ಬಾಹಿರಳು, ಸಾಹಸಿಯು ಆಗುವಳು.

ಹತ್ತನೆಯ (ಕಾರ್ಯ) ಸ್ಥಾನದಲ್ಲಿ ರವಿಯು ಇದ್ದರೆ—ಗ್ರಹಶಕ್ತಿ
ಯಿಲ್ಲದವಳು, ನಿಸ್ತೇಜಳು, ಕೆಟ್ಟ ಬುದ್ಧಿಯುಳ್ಳವಳು, ಯಾವಾಗಲೂ ಕಷ್ಟದಿ
ನಿಟ್ಟುಸುರು ಬಿಡತಕ್ಕವಳು, ಸೋಮಾರಿಯು ಆಗುವಳು.

ಹನ್ನೊಂದನೆಯ (ಲಾಭ) ಸ್ಥಾನದಲ್ಲಿ ರವಿಯು ಇದ್ದರೆ ತನ್ನ ಇಂದ್ರಿಯ
ಗಳನ್ನು ಸಾಧೀನದಲ್ಲಿಟ್ಟುಕೊಳ್ಳುವವಳು, ಸಕಲ ಕಲಾ ನಿಪುಣಳು, ಕ್ಷಮಾ
ಶೀಲಳು, ಬಂಧುಬಳಗದವರಲ್ಲಿ ಮಾನ್ಯಳು, ಬಹು ಪುತ್ರಪೌತ್ರರುಳ್ಳವಳು
ಸುಖಿಯು; ಲಾಭವತಿಯು ಆಗುವಳು.

ಹನ್ನೆರಡನೆಯ (ನಷ್ಟ) ಸ್ಥಾನದಲ್ಲಿ ರವಿಯು ಇದ್ದರೆ ಕ್ರೂರಕರ್ಮಿಯ
ಉದ್ಧಟಳು, ಬಹಳವಾಗಿ ಖರ್ಚುಮಾಡತಕ್ಕವಳು, ಪಾತಕಿಯು, ಅನಾಚಾ
ರಿಯು, ಉಪದ್ವ್ಯಾಪಿಯು ಆಗುವಳು.

– ಲಗ್ನದಿಂದ ೧೨ ಸ್ಥಾನಗಳಲ್ಲಿರುವ ಚಂದ್ರನ ಫಲ –

ಜನನ ಲಗ್ನ ಕುಂಡಲಿಯಲ್ಲಿ ೧ನೆಯ ಸ್ಥಾನದಲ್ಲಿ ಶುಕ್ಲಪಕ್ಷದ ಚಂದ್ರ
ನಿದ್ದರೆ–ಸುಸ್ವರೂಪಳು, ಕೆಂಪು ಬಣ್ಣದವಳು ಆಗುವಳು, ಕೃಷ್ಣಪಕ್ಷದ ಚಂದ್ರ
ನಿದ್ದರೆ—ವಾದವಿವಾದ ಮಾಡುವವಳು, ಬೆಳ್ಳಗಾದ ದೇಹವುಳ್ಳವಳು ರೋಗಿಯ
ಶುಚಿಯಿಲ್ಲದವಳು ಆಗುವಳು.

೨ನೆಯ ಸ್ಥಾನದಲ್ಲಿ ಚಂದ್ರನಿದ್ದರೆ–ದಾನಧರ್ಮ, ಪರೋಪಕಾರ ಮಾ
ತಕ್ಕವಳು. ನಮ್ರಸ್ವಭಾವಿಯು, ನೀತಿವಂತಳು, ಧನಧಾನ್ಯಯುತಳು, ದೇ
ಬ್ರಾಹ್ಮಣರಲ್ಲಿ ಭಕ್ತಿಯುಳ್ಳವಳು, ಪತಿಗನುಕೂಲಿಯು, ಶ್ರೇಷ್ಠಳು ಆಗುವಳ

೩ನೆಯ ಸ್ಥಾನದಲ್ಲಿ ಚಂದ್ರನಿದ್ದರೆ ನೀತಿರಹಿತಳು, ಕೃಪಣಳು, ಕಠೋ
ವಾಗಿ ಮಾತಾಡತಕ್ಕವಳು, ನೀಚಸ್ತ್ರೀಯರಲ್ಲಿ ಮಿತ್ರತ್ವ ಮಾಡತಕ್ಕವಳ
ಕೃಶಪ್ನೆಯು, ದುಷ್ಟೆಯು ಕಫ ವಾತರೋಗವುಳ್ಳವಳು ಆಗುವಳು.

೪ನೆಯ ಸ್ಥಾನದಲ್ಲಿ ಚಂದ್ರನಿದ್ದರೆ-ಸಕಲೈಶ್ವರ್ಯಯುತಳು, ಸುಖಭೋಗ ಶಾಲೆಯು, ಅಲಂಕಾರ ಪ್ರಿಯಳು; ಧರ್ಮಾಚರಣೆಯುಳ್ಳವಳು, ಸ್ಥಿರ ಮನಸ್ಸಿನವಳು, ದೇವ ಗುರುಭಕ್ತಿ ನಿಸ್ಸೀಮಳು, ಉದಾರ ಗುಣದವಳು, ಆಗುವಳು.

೫ನೆಯ ಸ್ಥಾನದಲ್ಲಿ ಚಂದ್ರನಿದ್ದರೆ-ಸುಪುತ್ರವತಿಯು ಗುಣಗೌರವ ಪೂರ್ಣಳು. ಅನೇಕ ಜನ ನೌಕರರಿಂದ ಸೇವೆಯುನ್ನು ಸ್ವೀಕರಿಸುವಳು, ಪತಿ ಆಜ್ಞಾ ಪರಿಪಾಲಕಳು, ಸುಂದರಳು, ಉತ್ತಮ ಜನಮಾನ್ಯಳು, ವಿನಯುವತಿಯು ಆಗುವಳು.

೬ನೆಯ ಸ್ಥಾನದಲ್ಲಿ ಚಂದ್ರನಿದ್ದರೆ-ಕೋಮಲವಾದ ದೇಹವುಳ್ಳವಳು, ಧನಹೀನಳು, ಅಶಿಬುರುಕಳು, ತೀಕ್ಷ್ಣವಾದ ದೃಷ್ಟಿಯುಳ್ಳವಳು, ಮಂದಾಗ್ನಿಯುವಳ, ವಿನಯ ರಹಿತಳು, ತೆಳ್ಳಗಾದ ಶರೀರವುಳ್ಳವಳು.

೭ನೆಯ ಸ್ಥಾನದಲ್ಲಿ ಚಂದ್ರನಿದ್ದರೆ-ಮೃದುಭಾಷಿಯು, ಧರ್ಮವತಿಯು, ತೇಜಸ್ವಿಯು, ಪತಿಪ್ರಿಯಳು, ಶುದ್ಧಾಚರಣೆಯುಳ್ಳವಳು, ಐಶ್ವರ್ಯವಂತಳು, ಸುಖಭೋಗಿಯು, ಚತುರಳು, ವಿವೇಕಶಾಲಿಯು ಆಗುವಳು.

೮ನೆಯ ಸ್ಥಾನದಲ್ಲಿ ಚಂದ್ರನಿದ್ದರೆ,-ಕುರೂಪವಾದ ನೇತ್ರವುಳ್ಳವಳು, ಬಹು ಸಿಟ್ಟಿನವಳು, ನಿಂದಿತಳು, ಪಾಪಬುದ್ಧಿಯುವಳು, ದರಿದ್ರಳು ಆಗುವಳು.

೯ನೆಯ ಸ್ಥಾನದಲ್ಲಿ ಚಂದ್ರನಿದ್ದರೆ-ದಾನಧರ್ಮ ಮಾಡುವದರಲ್ಲಿ ಹೆಸರಾದವಳು, ಬಹುಭೋಗ ಭಾಗ್ಯ ಹೊಂದುವವಳು, ಸಮರ್ಥಳು, ಸುಪುತ್ರವತಿಯು, ಅತಿಸುಂದರಳು, ಉತ್ತಮ ದಾಸೀಜನರುಳ್ಳವಳು, ತೇಜಸ್ವಿಯು, ಆರೋಗ್ಯವಂತಳು ಆಗುವಳು.

೧೦ನೆಯ ಸ್ಥಾನದಲ್ಲಿ ಚಂದ್ರನಿದ್ದರೆ-ಧನಧಾನ್ಯ ಸಮೃದ್ಧಿಯುಳ್ಳವಳು. ಪ್ರಖ್ಯಾತೆಯು, ಉಭಯ ಕುಲಶ್ರೇಷ್ಠಳು, ದಾನಶೂರಳು, ಸತ್ಯ ಮಾತಾಡುವವಳು, ಪುಣ್ಯಶೀಲಳು,ಮುತ್ತು ರತ್ನ, ಪಚ್ಚ ಮೊದಲಾದ ಮಣಿ ವಿಭೂಷಿತಳು, ಸಾಧ್ವಿಯು ದೈವಾನುಕೂಲಯೋಗಗಳ್ಳಗವುಳು, ಭಾಗ್ಯಶಾಲಿಯು ಆಗುವಳು.

೧೧ನೆಯ ಸ್ಥಾನದಲ್ಲಿ ಚಂದ್ರನಿದ್ದರೆ ಪಾಪ ಪುಣ್ಯಗಳ ವಿಚಾರಬಲ್ಲವಳು, ಶಾಂತ ಸ್ವಭಾವಿಯು, ದಾನಶೂರಳು, ರೋಗರಹಿತಳು, ಇಂದಿಯ

ನಿಗ್ರಹ ಮಾಡತಕ್ಕವಳು, ಸದ್ಬುದ್ಧಿಯುಳ್ಳವಳು, ವಿನಮ್ರಳು, ಐಶ್ವರ್ಯ ವಂತಳು ಆಗುವಳು.

೧೨ ನೆಯ ಸ್ಥಾನದಲ್ಲಿ ಚಂದ್ರನಿದ್ದರೆ ಧನರಹಿತಳು, ದರಿದ್ರಳು, ಕಳ್ಳತನ ಸುರಾಪಾನ, ಸುಳ್ಳು, ಮೋಸ, ವ್ಯಭಿಚಾರಗಳಿಗಾಗಿ ಪತಿ ತ್ಯಾಗಮಾಡಲು ಹಿಂಜರಿಯದವಳು, ವಾತ ಪ್ರಕೃತಿಯವಳು. ಚಂಚಲ ಸ್ವಭಾವದವಳು, ಅಧ-ಮಳು ಆಗುವಳು.

— ಲಗ್ನದಿಂದ ೧೨ ಸ್ಥಾನಗಳಲ್ಲಿ ಕುಜನು ಇರುವ ಫಲ —

ಜನನಲಗ್ನ ಕುಂಡಲಿಯಲ್ಲಿ ೧ ನೆಯ ಸ್ಥಾನದಲ್ಲಿ ಕುಜನಿದ್ದರೆ— ರಕ್ತ ರೋಗ ಪೀಡಿತಳು, ಭಾಗ್ಯಹೀನಳು, ಗರ್ವಿಷ್ಠಳು, ಸಿಟ್ಟು ಸೆಡವು ಸ್ವಭಾವ. ದವಳು, ಅಶಾಂತ ಮನಸ್ಸಿನವಳು, ಬಂಧುಹೀನಳು ಆಗುವಳು.

೨ ನೆಯ ಸ್ಥಾನದಲ್ಲಿ ಕುಜನಿದ್ದರೆ— ಸ್ಥೂಲದೇಹವುಳ್ಳವಳು, ಬಹು ಕಾಮುಕಳು, ಚಿತ್ತ ಚಂಚಲಳು ಸ್ವಲ್ಪ ಕೂದಲುಳ್ಳವಳು ಆಗುವಳು.

೩ ನೆಯ ಸ್ಥಾನದಲ್ಲಿ ಕುಜನಿದ್ದರೆ— ಸೌಭಾಗ್ಯವತಿಯು, ಶಾಂತ ಸ್ವಭಾವಿಯು, ಆಪ್ತೇಷ್ಟರಲ್ಲಿ ಪ್ರೀತಿಯುಳ್ಳವಳು, ಆರೋಗ್ಯವಂತಳು, ಪ್ರಖ್ಯಾತಳು ಸರಳ ಸ್ವಭಾವಿಯು, ಬಹುಜನ ಮಾನ್ಯಳು, ಸಾಧು ಸತ್ಪುರುಷರಲ್ಲಿ ಭಕ್ತಿಯುಳ್ಳವಳು, ಸುಶೀಲಗಳು ಆಗುವಳು.

೪ ನೆಯ ಸ್ಥಾನದಲ್ಲಿ ಕುಜನಿದ್ದರೆ— ಕೋಪಿಷ್ಠಳು, ದರಿದ್ರಳು, ಪಾಪಿಷ್ಠಳು ಗಂಡನಲ್ಲಿ ಭಕ್ತಿ ಇಲ್ಲದವಳು, ಕೈಕೊಂಡ ಕೆಲಸಗಳನ್ನು ಪೂರ್ಣಗೊಳಿಸಲು ಅಸಮರ್ಥಳು, ದುಃಖಿಯು ಆಗುವಳು.

೫ ನೆಯ ಸ್ಥಾನದಲ್ಲಿ ಕುಜನಿದ್ದರೆ – ಬಂಧು ವರ್ಗರಹಿತಳು, ದುಷ್ಟಜನ ಮಾನ್ಯಳು, ನಾಚಿಕೆ ಇಲ್ಲದವಳು, ಮಂದಬುದ್ಧಿಯುಳ್ಳವಳು, ಪುತ್ರಹೀನಳು, ಧರ್ಮಶಾಸ್ತ್ರದಂತೆ ನಡೆಯದವಳು ಆಗುವಳು.

೬ ನೆಯ ಸ್ಥಾನದಲ್ಲಿ ಕುಜನಿದ್ದರೆ— ವಿದ್ಯಾಸಂಪನ್ನಳು, ಬಹುಜನ ಮಾನ್ಯಳು, ಪತಿಯಲ್ಲಿ ನಿಷ್ಠೆಯುಳ್ಳವಳು ಆಗುವಳು. ಸಜ್ಜನರಲ್ಲಿ ಭಕ್ತಿಯುಳ್ಳವಳು, ಧನಧಾನ್ಯಯುತರು, ಸದೃಢವಾದ ಶರೀರವುಳ್ಳವಳು, ಹರ್ಷಚಿತ್ತವುಳ್ಳ

೭ ನೆಯ ಸ್ಥಾನದಲ್ಲಿ ಕುಜನಿದ್ದರೆ— ಕುರೂಪಿಯು, ದುಷ್ಟಗುಣದವಳು ಐಶ್ವರ್ಯ ಹೀನಳು, ಬಾಲವಿಧವೆಯು ಆಗುವಳು.

೮ ನೆಯ ಸ್ಥಾನದಲ್ಲಿ ಕುಜನಿದ್ದರೆ—ದರಿದ್ರಳು, ದುಃಖಿಯು, ಕಾಂತಿಹೀನಳು, ಮೂರ್ಖಳು, ತೆಳ್ಳಗಾದ ದೇಹವುಳ್ಳವಳು ರೋಗಿಯು ಆಗುವಳು.

೯ ನೆಯ ಸ್ಥಾನದಲ್ಲಿ ಕುಜನಿದ್ದರೆ— ಭಾಗ್ಯಹೀನಳು, ಸುಸ್ವರೂಪಳು, ಮಾಂಸ, ಸುರಾಪಾನಾದಿಗಳಲ್ಲಿ ಆಸಕ್ತಳು, ರಾಕ್ಷಸೀ ಸ್ವಭಾವದವಳು, ಧರ್ಮರಹಿತಳು, ಸಜ್ಜನರನ್ನು ಸೇರದವಳು ಕ್ರೂರಗಳು.

೧೦ ನೆಯ ಸ್ಥಾನದಲ್ಲಿ ಕುಜನಿದ್ದರೆ— ಕೆಟ್ಟಬುದ್ಧಿಯುಳ್ಳವಳು ಲಜ್ಜಾಹೀನಳು, ಪಾಪಿಷ್ಠಳು, ನೀಚಳು, ಬಹು ಕಾಮುಕಳು, ಧರ್ಮಹೀನಳು, ಕುಕರ್ಮಿಯು ಆಗುವಳು.

೧೧ ನೆಯ ಸ್ಥಾನದಲ್ಲಿ ಕುಜನಿದ್ದರೆ— ಉತ್ತಮ ಸ್ವಭಾವದವಳು, ಬುದ್ಧಿವಂತಳು, ಧರ್ಮ ಕಾರ್ಯಗಳಲ್ಲಿ ಅಭಿರುಚಿಯುಳ್ಳವಳು, ನಾನಾ ಮೂಲಕ ಲಾಭ ಹೊಂದತಕ್ಕವಳು, ದೇವ ಬ್ರಾಹ್ಮಣರಲ್ಲಿ ಭಕ್ತಿಯುಳ್ಳವಳು ಆಗುವಳು.

೧೨ ನೆಯ ಸ್ಥಾನದಲ್ಲಿ ಕುಜನಿದ್ದರೆ— ಕದನ ಪ್ರಿಯಳು, ಗುಣಹೀನಳು, ಬಹು ಆತುರ ಸ್ವಭಾವಿಯು, ಅಸಹ್ಯ ಕಾರ್ಯಾಸಕ್ತಳು, ಅಶಕ್ತಳು, ನಾಸ್ತಿಕಳು, ಕಠೋರಳು ಆಗುವಳು.

— ಲಗ್ನದಿಂದ ೧೨ ಸ್ಥಾನಗಳಲ್ಲಿ ಬುಧನಿರುವ ಫಲ —

ಜನನ ಲಗ್ನ ಕುಂಡಲಿಯಲ್ಲಿ ೧ ನೆಯ ಸ್ಥಾನದಲ್ಲಿ ಬುಧನಿದ್ದರೆ— ರೂಪವತಿಯು, ವಿಶಾಲವಾದ ನೇತ್ರಗಳುಳ್ಳವಳು, ಧನಧಾನ್ಯಯುತಳು, ಸಕಲರಿಗೂ ಪ್ರಿಯಳು, ಮಾನ್ಯಳು ನೀತಿವಂತಳು, ಧರ್ಮಶೀಲಳು, ಸತ್ಯಮಾತಾಡುವವಳು, ಆಗುವಳು.

೨ ನೆಯ ಸ್ಥಾನದಲ್ಲಿ ಬುಧನಿದ್ದರೆ— ಧನವಂತಳು, ಗುರುಭಕ್ತಿ ಪರಾಯಣೆಯು, ಶುದ್ಧಚಾರವುಳ್ಳವಳು, ವಿಚಾರವಂತಳು, ಸುಂದರಳು, ಗುಣಸಂಪನ್ನಳು, ಧಾರ್ಮಿಕ ಕೆಲಸಗಳಲ್ಲಿ ಅಭಿರುಚಿಯುಳ್ಳವಳು, ಮಾನವತಿಯು ಆಗುವಳು.

೩ನೆಯ ಸ್ಥಾನದಲ್ಲಿ ಬುಧನಿದ್ದರೆ-ದೇವತಾರಾಧನ ಪ್ರಿಯಳು. ಪುತ್ರವತಿಯು; ಧನಪತಿಯು. ಸರ್ವಕೆಲಸ ಮಾಡಲು ಸಮರ್ಥಳು, ಧೂರ್ಥಳು, ಲೋಕಾನುಕೂಲವುಳ್ಳವಳು ಬಂಧುಜನ ಮಾನ್ಯಳೂ ಆಗುವಳು.

೪ನೆಯ ಸ್ಥಾನದಲ್ಲಿ ಬುಧನಿದ್ದರೆ-ದಾನ, ಧರ್ಮ, ಪರೋಪಕಾರ ಪ್ರಿಯಳು, ಸುಜನರಲ್ಲಿ ಒಡನಾಡತಕ್ಕವಳು, ದೇವ ಬ್ರಾಹ್ಮಣರಲ್ಲಿ ಭಕ್ತಿಯುಳ್ಳವಳು. ಪ್ರಖ್ಯಾತಳು, ಬಹುಜನ ಸೇವಕರುಳ್ಳವಳು. ಭಾಗ್ಯಶಾಲಿಯು ಆಗುವಳು.

೫ನೆಯ ಸ್ಥಾನದಲ್ಲಿ ಬುಧನಿದ್ದರೆ-ಧರ್ಮಶಾಸ್ತ್ರಪ್ರಿಯಳು. ದಯಾಳು ಸ್ವಭಾವಿಯು ಸ್ವಜನ ಪರಜನರಿಗೆ ಕಲ್ಯಾಣಕಾರ್ಯ ಮಾಡತಕ್ಕವಳು, ಕೈಕೊಂಡ ಕೆಲಸವನ್ನು ತೀರ್ವ ಮಾಡತಕ್ಕವಳು, ಬುದ್ಧಿವಂತಳು, ಶತ್ರುಗಳನ್ನು ಗೆಲ್ಲುವಳು ಆಗುವಳು.

೬ನೆಯ ಸ್ಥಾನದಲ್ಲಿ ಬುಧನಿದ್ದರೆ-ಕಲಹ ಪ್ರಿಯಳು, ದರಿದ್ರಳು, ಧನಧಾನ್ಯರಹಿತಳು. ಅಲ್ಪಸಂತತಿಯುಳ್ಳವಳು, ಅವಿಚಾರಿಯು, ಬಡತನವನ್ನು ಅನುಭವಿಸತಕ್ಕವಳು, ಈರ್ಷ್ಯಾ ಸ್ವಭಾವವುಳ್ಳವಳು ಆಗುವಳು.

೭ನೆಯ ಸ್ಥಾನದಲ್ಲಿ ಬುಧನಿದ್ದರೆ ಪುಣ್ಯಕಾರ್ಯಾಸಕ್ತಳು, ಧರ್ಮಶಾಸ್ತ್ರಗಳಲ್ಲಿ ಅಭಿರುಚಿಯುಳ್ಳವಳು, ಬಹುಚತುರಳು, ಶ್ರೀಮಂತಳು, ಕೀರ್ತಿವಂತಳು, ನಮ್ರಸ್ವಭಾವಿಯು: ನಿಯಮಿತ ಪದ್ಧತಿಯವಳು, ಆಗುವಳು.

೮ನೆಯ ಸ್ಥಾನದಲ್ಲಿ ಬುಧನಿದ್ದರೆ-ದುಷ್ಟಬುದ್ಧಿಯುಳ್ಳವಳು, ಕೃತಘ್ನಳು, ನಿರಭಿಮಾನಿಯು, ಬಹುಜನ ವಿರೋಧಿಯು, ನೀತಿ, ಅನೀತಿ; ವಿಚಾರ ಮಾಡುವವಳು, ರೋಗಿಯು. ಪುಕ್ಕಸ್ವಭಾವದವಳು, ಆಗುವಳು.

೯ನೆಯ ಸ್ಥಾನದಲ್ಲಿ ಬುಧನಿದ್ದರೆ-ಧರ್ಮಾಚರಣೆಯಿಂದ ನಡೆಯತಕ್ಕವಳು, ಕೀರ್ತಿವಂತಳು. ಶಾಂತಸ್ವಭಾವಿಯು ವಿನಯ ಶೀಲಳು, ಧನಧಾನ್ಯಯುತಳು, ಲೋಕಮಾನ್ಯಳು. ನಾನಾಭೋಗಭಾಗ್ಯವುಳ್ಳವಳು ಆಗುವಳು.

೧೦ನೆಯ ಸ್ಥಾನದಲ್ಲಿ ಬುಧನಿದ್ದರೆ-ತೇಜಸ್ವಿಯು, ಸುಂದರಳು, ವಿಚಾರವಂತಳು, ಸ್ವಜನ-ಪರಜನರಲ್ಲಿ ಪ್ರೀತಿಯುಳ್ಳವಳು, ಗುರುಭಕ್ತಿಯುಳ್ಳವಳು, ಧನಧಾನ್ಯಯುತಳು ಪತಿಗೆ ಮಾನ್ಯಳು, ಸತ್ಕರ್ಮನಿರತಳು ಆಗುವಳು.

೧೧ ನೆಯ ಸ್ಥಾನದಲ್ಲಿ ಬುಧನಿದ್ದರೆ–ಶೀಲಗುಣಸಂಪನ್ನಳು, ಸದಾ ಸುಖಿಯು, ಬಂಧುಜನಮಾನ್ಯಳು, ಪತಿವ್ರತೆಯು, ಬಹುಭಾಗ್ಯಶಾಲಿಯು, ವಿಜಯಿಯು, ಧನ ಧಾನ್ಯಯುತಳು, ಆಗುವಳು.

೧೨ ನೆಯ ಸ್ಥಾನದಲ್ಲಿ ಬುಧನಿದ್ದರೆ–ಪ್ರತಿಷ್ಠಾಹೀನಳು, ಖರ್ಚುಮಾಡಲು ಹಿಂಜರಿಯದವಳು, ಜಗಳಗಂಟಿಯು, ತೆಳ್ಳಗಾದ ದೇಹವುಳ್ಳವಳು, ಸಜ್ಜನರನ್ನು ತಿರಸ್ಕರಿಸುವವಳು, ಎಲ್ಲ ಕೆಲಸಗಳನ್ನು ದಕ್ಷತೆಯಿಂದ ಮಾಡುವವಳು ಆಗುವಳು.

– ಲಗ್ನದಿಂದ ೧೨ ಸ್ಥಾನಗಳಲ್ಲಿ ಗುರು ಇರುವ ಫಲ –

ಜನನ ಕುಂಡಲಿಯಲ್ಲಿ ೧ ನೆಯ ಸ್ಥಾನದಲ್ಲಿ ಗುರು ಇದ್ದರೆ– ಬಹು ಸುಂದರಳು, ಸ್ತ್ರೀಕುಲ ಶ್ರೇಷ್ಠಳು, ಗಂಭೀರವಾಗಿ ಮಾತಾಡುವವಳು, ಯಾರಿಗೂ ಪಕ್ಷಪಾತ ಮಾಡದವಳು, ಸತ್ಯ ಮಾತಾಡುವವಳು, ಭೋಗ ಭಾಗ್ಯಯುತಳು ಆಗುವಳು.

೨ನೆಯ ಸ್ಥಾನದಲ್ಲಿ ಗುರು ಇದ್ದರೆ ಸೌಭಾಗ್ಯವಂತಳು, ಧರ್ಮಶೀಲಳು ನೀತಿವಂತಳು, ಶ್ರೇಷ್ಠಳು, ರೂಪವತಿಯು, ಅನ್ಯರ ಉಪಕಾರವನ್ನು ಸ್ಮರಿಸುವವಳು, ಪಶು ಸಂಪತ್ತು ವಾಹನ ಸಂಪತ್ತು ಉಳ್ಳವಳು ಆಗುವಳು.

೩ ನೆಯ ಸ್ಥಾನದಲ್ಲಿ ಗುರು ಇದ್ದರೆ ದುರ್ಮಾರ್ಗದಲ್ಲಿ ನಡೆಯತಕ್ಕವಳು. ಜನನಿಂದೆಗೆ ಹೆದರದವಳು, ಗುರು ಹಿರಿಯರಲ್ಲಿ ಭಕ್ತಿಯಿಲ್ಲದವಳು, ಗೌರವರಹಿತಳು ತೆಳ್ಳಗಾದ ದೇಹವುಳ್ಳವಳು, ದೋಷಿಯು, ಆಗುವಳು.

೪ ನೆಯ ಸ್ಥಾನದಲ್ಲಿ ಗುರು ಇದ್ದರೆ ಬಹುಸುಖಿಯು, ಧನ ಧಾನ್ಯ ವಸ್ತ್ರಾಲಂಕಾರ ಪ್ರಿಯಳು ವಿದ್ಯಾವಂತಳು, ಅತಿಶಯ ರೂಪವಂತಳು, ಗುರು ಹಿರಿಯರಲ್ಲಿ ಭಕ್ತಿಯುಳ್ಳವಳು, ಗುಣವತಿಯು, ಪ್ರಖ್ಯಾತಳು ಐಶ್ವರ್ಯವಂತಳು, ಆಗುವಳು.

೫ ನೆಯ ಸ್ಥಾನದಲ್ಲಿ ಗುರು ಇದ್ದರೆ ಸತ್ಯವಾದಿಯು, ವಿದ್ಯಾವಂತಳು ಅತಿಥಿಗಳಿಗೆ ಆದರ ಸತ್ಕಾರ ಮಾಡತಕ್ಕವಳು, ಪತಿಗೆ ಅನುಕೂಲಳು, ಪಾಪವನ್ನು ಅರಿಯದವಳು, ಸತ್ಪುತ್ರರುಳ್ಳವಳು, ವಿನಯವಂತಳು, ಆಗುವಳು.

೬ ನೆಯ ಸ್ಥಾನದಲ್ಲಿ ಗುರು ಇದ್ದರೆ— ಶತ್ರುಗಳಿಂದ ಕಷ್ಟನಷ್ಟ ಹೊಂದತಕ್ಕವಳು. ಬುದ್ಧಿಹೀನಳು. ಕಾಮಿಯು, ಶ್ರೇಷ್ಠ ಕೃತಿಗಳನ್ನು ಮಾಡತಕ್ಕವಳು. ಶರೀರ ಬಾಧೆಯುಳ್ಳವಳು, ಕಠೋರಳು, ಉದ್ವೇಗಿಯು ಆಗುವಳು.

೭ ನೆಯ ಸ್ಥಾನದಲ್ಲಿ ಗುರು ಇದ್ದರೆ—ಪುಣ್ಯಶೀಲಳು. ಜ್ಞಾನಸಂಪನ್ನಳು ಪತಿಭಕ್ತಿ ಪರಾಯಣಳು, ಧರ್ಮ ಶಾಸ್ತ್ರಗಳಲ್ಲಿ ಅಭಿರುಚಿಯುಳ್ಳವಳು, ಬಹು ಭಾವಿಕಳು, ದಾನಿಯು, ಕೀರ್ತಿವಂತಳು ಆಗುವಳು.

೮ ನೆಯ ಸ್ಥಾನದಲ್ಲಿ ಗುರು ಇದ್ದರೆ—ಸ್ಥೂಲವಾದ ದೇಹವುಳ್ಳವಳು, ಪತಿ ಭಕ್ತಿಯಿಲ್ಲದವಳು, ಸ್ವಜನ ಪರಜನರಲ್ಲಿ ಭೀತಿಯಿಲ್ಲದವಳು, ಕೃಪಣಗಳು, ರೂಪ ವಿಲ್ಲದವಳು. ಸತ್ಯ ಮಾತಾಡದವಳು, ಆಗುವಳು.

೯ ನೆಯ ಸ್ಥಾನದಲ್ಲಿ ಗುರು ಇದ್ದರೆ— ದೇವತಾಭಕ್ತಿ, ಗುರುಭಕ್ತಿ, ಮಾತಾಪಿತೃಭಕ್ತಿ ಸಂಪನ್ನಳು, ಕೆರೆಭಾವಿ ಕಟ್ಟಿಸಿ ಲೋಕೋಪಕಾರ ಮಾಡ ತಕ್ಕವಳು, ಅಚ್ಚುಕಟ್ಟಾದ ಶರೀರವುಳ್ಳವಳು. ಸುಂದರಳು. ವಿನಯವತಿಯು. ತೀರ್ಥಯಾತ್ರಾ ಮಾಡತಕ್ಕವಳು ಆಗುವಳು.

೧೦ ನೆಯ ಸ್ಥಾನದಲ್ಲಿ ಗುರು ಇದ್ದರೆ— ದಯಾಳು ಸ್ವಭಾವಿಯು. ಪುಣ್ಯದ ಕೆಲಸ ಮಾಡಿ ಕೀರ್ತಿ ಹೊಂದತಕ್ಕವಳು, ಅದ್ಭುತ ಕಾರ್ಯ ಮಾಡ ತಕ್ಕವಳು. ಬಹುಜನ ಸೇವಕರುಳ್ಳವಳು, ಉತ್ತಮ ಗುಣಸಂಪನ್ನಳು, ಪ್ರಖ್ಯಾತಳು, ಪ್ರೌಢಳು ಆಗುವಳು.

೧೧ ನೆಯ ಸ್ಥಾನದಲ್ಲಿ ಗುರು ಇದ್ದರೆ— ಗುಣವತಿಯರ ಸ್ನೇಹ ಮಾಡ ತಕ್ಕವಳು, ಬಹು ಸಂಪತ್ತುಳ್ಳವಳು, ಭಾಗ್ಯಶಾಲಿಯು, ಧನಧಾನ್ಯ, ವಸ್ತ್ರಾ ಲಂಕಾರಯುಕ್ತಳು, ಕೀರ್ತಿವಂತಳು, ಆತ್ಮ ಸಂಯಮವುಳ್ಳವಳು, ಪಶು ವಾಹನಗಳುಳ್ಳವಳು ಆಗುವಳು.

೧೨ ನೆಯ ಸ್ಥಾನದಲ್ಲಿ ಗುರು ಇದ್ದರೆ—ದುಷ್ಟಸ್ವಭಾವಿಯು, ಕುಲಧರ್ಮ ದಲ್ಲಿ ಪ್ರೀತಿಯಿರದವಳು, ದುಷ್ಕಾರ್ಯಕ್ಕೆ ಹಣ ಖರ್ಚು ಮಾಡುವವಳುಬಂಧು ಜನ ವಿರೋಧಿಯು. ಗುರುಜನರನ್ನು ನಿಂದಿಸುವವಳು ರೋಗಿಯು ಆಗುವಳು,

– ಲಗ್ನದಿಂದ ೧೨ ಸ್ಥಾನಗಳಲ್ಲಿ ಶುಕ್ರನಿರುವ ಫಲ –

ಜನನ ಲಗ್ನಕುಂಡಲಿಯೊಳು ೧ನೆಯ ಸ್ಥಾನದಲ್ಲಿ ಶುಕ್ರನಿದ್ದರೆ–ಯಾವು ದಕ್ಕೂ ಕೊರತೆ ಇಲ್ಲದ ಸುಖಭೋಗಿಯು, ಸದ್ಗುಣವತಿಯು, ಸುಂದರಳು, ಶತ್ರುರಹಿತಳು, ಸದೃಢಳು, ಸುಶೀಲೆಯು, ಸೌಭಾಗ್ಯವತಿಯು, ನಿರ್ದೋಷಿಯು, ಸುಮಂಗಲೆಯು ಆಗುವಳು.

೨ನೆಯ ಸ್ಥಾನದಲ್ಲಿ ಶುಕ್ರನಿದ್ದರೆ–ಕೈಕೊಂಡ ಕೆಲಸದಲ್ಲಿ ಕುಶಲಳು, ಧರ್ಮಿಷ್ಠಳು, ಮೃದುಭಾಷಿಯು, ಸತ್ಯವತಿಯು, ವ್ರತನೇಮಾದಿ ಪರಾಯಣೆಯು, ಭಾಗ್ಯವತಿಯು, ಧನವಂತಳು, ಕಷ್ಟಸಾಧ್ಯದಿಂದ ಸುಖಭೋಗ ಪಡೆಯತಕ್ಕವಳು ಆಗುವಳು.

೩ನೆಯ ಸ್ಥಾನದಲ್ಲಿ ಶುಕ್ರನಿದ್ದರೆ–ಬಹುಕಾಮುಕಳು, ಎಲ್ಲ ಸಂಗತಿ ಗಳನ್ನು ಗೌಪ್ಯವಾಗಿಡತಕ್ಕವಳು, ದುಃಖಿಯು, ಕಠಿಣ ಸ್ವಭಾವದವಳು, ಬಂಧು ಜನರಿಂದ ದೂರಇರತಕ್ಕವಳು, ಜಾಣತನದಿಂದ ಮಾತಾಡುವವಳು ಆಗುವಳು.

೪ನೆಯ ಸ್ಥಾನದಲ್ಲಿ ಶುಕ್ರನಿದ್ದರೆ–ಪತಿಭಕ್ತಿ ನಿಸ್ಸೀಮಳು, ವಿದ್ಯಾವಂತಳು ಇಂದ್ರಿಯ ನಿಗ್ರಹಳು, ದೃಢನಿಶ್ಚಯವುಳ್ಳವಳು, ಉತ್ತಮ ಭೋಗವಂತಳು, ಧರ್ಮ ಕೆಲಸಗಳಲ್ಲಿ ಆಸಕ್ತಳು, ವಂಶೋದ್ಧಾರಕಳು, ಬಹುಸುಖಿಯು, ಧನಾ ಢ್ಯಳು, ಆಗುವಳು.

೫ನೆಯ ಸ್ಥಾನದಲ್ಲಿ ಶುಕ್ರನಿದ್ದರೆ–ಬಹು ಸ್ತ್ರೀಸಂತತಿಯುಳ್ಳವಳು ಹೆಸರು ವಾಸಿಯಾಗತಕ್ಕವಳು, ಗುಣವತಿಯರ ಸ್ನೇಹ ಮಾಡತಕ್ಕವಳು, ಸರ್ವ ಸಮೃದ್ಧಿಯುಳ್ಳವಳು, ಸುಂದರಳು. ಆಗುವಳು.

೬ನೆಯ ಸ್ಥಾನದಲ್ಲಿ ಶುಕ್ರನಿದ್ದರೆ–ಬಹು ಹೇವದಸ್ವಭಾವದವಳು, ಶೀಘ್ರ ಕೋಪಿಯು, ಪತಿ ಪುತ್ರರನ್ನು ನಿಂದಿಸುವಳು, ಜಗಳಗಂಟಿಯು, ನಿರ್ಭಯ ವುಳ್ಳವಳು, ಮೂರ್ಖಳು.

೭ನೆಯ ಸ್ಥಾನದಲ್ಲಿ ಶುಕ್ರನಿದ್ದರೆ—ಆಗರ್ಭ ಶ್ರೀಮಂತಳು, ಗುರು ಹಿರಿ ಯರಿಗಾಗಿ ಶ್ರಮವಹಿಸಿ ಹಿತಕಾರ್ಯ ಮಾಡತಕ್ಕವಳು, ಪ್ರಖ್ಯಾತಳು, ಧರ್ಮ ಶಾಸ್ತ್ರಗಳಲ್ಲಿ ಪ್ರೀತಿಯುಳ್ಳವಳು, ಪ್ರೌಢವಿಚಾರದವಳು, ಮಾನ್ಯಳು, ಸುಂದರಳು, ಸುಖಸಂಪನ್ನಳು ಆಗುವಳು.

೮ನೆಯ ಸ್ಥಾನದಲ್ಲಿ ಶುಕ್ರನಿದ್ದರೆ—ದರಿದ್ರಳು, ಪರಪೀಡೆಗೊಳಗಾಗು ವವಳು, ನಿಷ್ಠುರವಾಗಿ ಮಾತಾಡತಕ್ಕವಳು, ಅನ್ನವಸ್ತ್ರಗಳಿಗಾಗಿ ಶ್ರಮಪಡತಕ್ಕ ವಳು, ಧರ್ಮಾಚರಣೆ ಅರಿಯದವಳು, ಕಲಹಪ್ರಿಯಳು, ಆಗುವಳು.

೯ನೆಯ ಸ್ಥಾನದಲ್ಲಿ ಶುಕ್ರನಿದ್ದರೆ-ಧರ್ಮತತ್ಪರಳು, ಸಮಾಧಾನ ಮನ ಸ್ಸಿನವಳು, ಪತಿಯ ಆಜ್ಞಾ ಪರಿಪಾಲಕಳು, ಪುರುಷರ ಹಾಗೆ ನಡೆನುಡಿಗಳುಳ್ಳ ವಳು, ಧನಧಾನ್ಯ ವಸ್ತ್ರಾಲಂಕಾರಯುತಳು, ಹೆಸರುವಾಸಿಯು, ಜನಪ್ರಿಯಳು ಆಗುವಳು.

೧೦ನೆಯ ಸ್ಥಾನದಲ್ಲಿ ಶುಕ್ರನಿದ್ದರೆ-ಬುದ್ಧಿಸಂಪನ್ನಳು, ಉತ್ತಮ ಕೆಲಸ ಮಾಡತಕ್ಕಳು, ಪತಿಪ್ರಿಯಳು, ಧನಧಾನ್ಯ ವಸ್ತ್ರಾಲಂಕಾರಯುಕ್ತಳು, ಉದ್ಯೋ ಗತತ್ಪರಳು, ಸತ್ಯ ಮಾತಾಡತಕ್ಕವಳು, ನಿರೋಗಿಯು ಆಗುವಳು

೧೧ನೆಯ ಸ್ಥಾನದಲ್ಲಿ ಶುಕ್ರನಿದ್ದರೆ—ಧರ್ಮಶಾಸ್ತ್ರಗಳನ್ನು ತಿಳಿದು ಕೊಂಡು ಅದರಂತೆ ಪರರಿಗೆ ಬೋಧ ಮಾಡುವವಳು, ಬಹಳ ಪ್ರಭಾವಿ ಸ್ತ್ರೀಯಳು, ಪ್ರಸಿದ್ಧಳು, ಸದ್ಗುಣಿಯು, ಶುದ್ಧ ಆಚರಣೆಯುಳ್ಳವಳು, ಸುಖ ಭೋಗಿಯು ಧನವಂತಳು ಆಗುವಳು.

೧೨ನೆಯ ಸ್ಥಾನದಲ್ಲಿ ಶುಕ್ರನಿದ್ದರೆ-ಅಲ್ಲಸಲ್ಲದ ಕೆಲಸಗಳನ್ನು ಮಾಡಿ ದುಃಖ ಹೊಂದತಕ್ಕವಳು, ಚಾಡಿಖೋರಳು, ಕಪಟಸ್ವಭಾವಿಯು, ರೋಗಿಯು, ಅಧಿಕ ಖರ್ಚು ಮಾಡತಕ್ಕವಳು, ಗುರುಗಳನ್ನು ಗೆಳತಿಯರನ್ನು ನಿಂದಿಸುವವಳು ಆಗುವಳು.

— ಲಗ್ನದಿಂದ ೧೨ ಸ್ಥಾನಗಳಲ್ಲಿ ಇರುವ ಫಲ —

ಜನನ ಲಗ್ನಕುಂಡಲಿಯೊಳು ೧ನೆಯ ಸ್ಥಾನದಲ್ಲಿ ಶನಿ ಇದ್ದರೆ—ಅಮಂಗಲ ವಾದ ದೇಹವುಳ್ಳವಳು, ಕುರೂಪಿಯು, ಕಷ್ಟಜೀವಿಯು, ದೊಡ್ಡ ಹಲ್ಲು ಉಳ್ಳ ವಳು, (ಕದಾಚಿತ್ ಕುರುಡಿಯೂ ಆಗಬಹುದು) ಕೃಪಣಳು, ಬುದ್ಧಿಯಿಲ್ಲದ ವಳು ದರಿದ್ರಳು ಆಗುವಳು.

೨ನೆಯ ಸ್ಥಾನದಲ್ಲಿ ಶನಿ ಇದ್ದರೆ-ದುಃಖಭೋಗಿಯು, ನಮ್ರತೆ ಇಲ್ಲ ದವಳು, ಅಪಯಶ ಹೊಂದುವವಳು, ದುರ್ನಡತೆಯುಳ್ಳವಳು, ವಾದ ವಿವಾದ ಮಾಡತಕ್ಕವಳು, ದಾರಿದ್ರ್ಯವುಳ್ಳವಳು ಆಗುವಳು.

೩ನೆಯ ಸ್ಥಾನದಲ್ಲಿ ಶನಿ ಇದ್ದರೆ ಸದಾ ಸಂತೋಷ ಚಿತ್ತಳು, ಪುತ್ರವತಿಯು, ಶರಣಾಗತರನ್ನು ರಕ್ಷಿಸುವವಳು, ಸಾಧುಸತ್ಪುರುಷರನ್ನು ಗುರು ಹಿರಿಯರನ್ನು ಮನ್ನಿಸುವವಳು, ಕಾರ್ಯದಕ್ಷಳು, ಧನಧಾನ್ಯ ಸಂಗ್ರಹವುಳ್ಳವಳು ಆಗುವಳು.

೪ನೆಯ ಸ್ಥಾನದಲ್ಲಿ ಶನಿ ಇದ್ದರೆ-ಮಂದ ಬುದ್ಧಿಯುಳ್ಳವಳು, ನಿಂದ್ಯ ವೃತ್ತಿಯಿಂದ ಸೌಖ್ಯ ಪಡತಕ್ಕವಳು, ಚಂಚಲ ಸ್ವಭಾವಿಯು, ದುಷ್ಟಳು, ದರಿದ್ರಳು, (ಇವಳ ಧನಸಂಪತ್ತಿಯನ್ನು ಬಂಧುಗಳು ಹರಣ ಮಾಡುವರು) ಕೃಷ್ಣಳು ಆಗುವಳು.

೫ನೆಯ ಸ್ಥಾನದಲ್ಲಿ ಶನಿ ಇದ್ದರೆ— ದಯೆಯಿಲ್ಲದವಳು, ಗರ್ವಿಷ್ಠಳು, ಸಜ್ಜನರನ್ನು ದೂಷಿಸುವವಳು, ಬುದ್ಧಿ ಇಲ್ಲದವಳು, ಕೀರ್ತಿಯಿಲ್ಲದವಳು, ಧನಹೀನಳು, ಕುರೂಪಿಯು, ನಿಪುತ್ರಿಕಳು ಆಗುವಳು.

೬ನೆಯ ಸ್ಥಾನದಲ್ಲಿ ಶನಿ ಇದ್ದರೆ- ಪುತ್ರವತಿಯು, ಭಾಗ್ಯಶಾಲಿಯು, ವಸ್ತ್ರಾಲಂಕಾರ ಭೂಷಣಳು, ಮಂದಸ್ವಭಾವಿಯು, ಪಶು, ವಾಹನಸಂಪತ್ತುಳ್ಳವಳು, ರೋಗರಹಿತಳು, ವಿರೋಧಿಗಳಿಲ್ಲದವಳು ಆಗುವಳು.

೭ನೆಯ ಸ್ಥಾನದಲ್ಲಿ ಶನಿ ಇದ್ದರೆ– ನೀಚ ಜನರ ಸ್ನೇಹ ಮಾಡತಕ್ಕವಳು, ವಿಧವೆಯು, ಸೆರೆ ಸಿಂದಿ ವಗೈರೆ ಸೇವಿಸುವ ಇಚ್ಛೆಯುಳ್ಳವಳು. ಕಪಟಿಯು, ದುರ್ನಡತೆಯವಳು, ಗಂಡನನ್ನು ನಿಂದಿಸುವವಳು, ಮಲಿನಳು ಆಗುವಳು.

೮ನೆಯ ಸ್ಥಾನದಲ್ಲಿ ಶನಿ ಇದ್ದರೆ-ದುಷ್ಟ ಸ್ವಭಾವಿಯು, ಅಸತ್ಯಭಾಷಿಣಿಯು, ಪಾಪಿಷ್ಠಳು, ಕಪಟಿಯು, ದುರಾಚಾರಿಯು, ಕ್ರೋಧಾತುರಳು, ದರಿದ್ರಳು, ಕಷ್ಟದಿಂದ ಜೀವಿಸುವವಳು ಆಗುವಳು.

೯ನೆಯ ಸ್ಥಾನದಲ್ಲಿ ಶನಿ ಇದ್ದರೆ-ಬಹಳ ಖರ್ಚು ಮಾಡುವವಳು, ಜ್ಞಾನಹೀನಳು, ಕಠೋರ ಸ್ವಭಾವದವಳು, ಗರ್ವಿಷ್ಠಳು, ಧರ್ಮಹೀನಳು, ನಮ್ರಭಾವವನ್ನು ಅರಿಯದವಳು, ಕ್ರೂರಳು ಆಗುವಳು.

೧೦ನೆಯ ಸ್ಥಾನದಲ್ಲಿ ಶನಿ ಇದ್ದರೆ-ದರಿದ್ರಳು, ದುಷ್ಟಳು, ಡಾಂಭಿಕಳು, ತಾನು ಮಾಡಿದ್ದೇ ಮಾನ್ಯ ಎಂದು ಹೇಳುವವಳು, ದುಷ್ಟಸ್ತ್ರೀಯರ ಸ್ನೇಹ

ತಾಡುವವಳು, ನಿರ್ದಯಳು, ಅಸತ್ಯವಾದಿಯು, ಗುಣಹೀನಳು, ಚಂಚಲಳು, ಆಗುವಳು.

೧೧ನೆಯ ಸ್ಥಾನದಲ್ಲಿ ಶನಿ ಇದ್ದರೆ ನಿಪುಣಳು, ರಾಜಮಾನ್ಯಳು, ಧೈರ್ಯವಂತಳು, ಬಹುಲಾಭಪೂರ್ಣಳು, ಧನಧಾನ್ಯ ವಸ್ತ್ರಾಲಂಕಾರಯುಕ್ತಳು, ಪುತ್ರವತಿಯು, ಬಹುಸುಂದರಳು, ಸಾಹಸಿ ಸ್ವಭಾವಿಯು ಆಗುವಳು

೧೨ನೆಯ ಸ್ಥಾನದಲ್ಲಿ ಶನಿ ಇದ್ದರೆ - ಕುಟಿಲ ಸ್ವಭಾವದವಳು, ಬಹುಕಾಮುಕಳು ಅವಿಚಾರಿಯು, ಧನಹೀನಳು, ಬಂಧುಜನ ವಿರೋಧಿಯು, ಪತಿನಿಂದಕಳು, ರೋಗಿಯು, ಕೃತಘ್ನಳು, ಚಂಚಲ ಸ್ವಭಾವದವಳು ಆಗುವಳು.

— ಲಗ್ನದಿಂದ ೧೨ ಸ್ಥಾನಗಳಲ್ಲಿ ರಾಹು ಇರುವ ಫಲ —

ಜನನ ಲಗ್ನಕುಂಡಲಿಯೊಳು ೧ನೆಯ ಸ್ಥಾನದಲ್ಲಿ ರಾಹು ಇದ್ದರೆ—ಪತಿ ಹಾಗೂ ಗುರು ಹಿರಿಯರಲ್ಲಿ ದ್ವೇಷಿಯು, ಕಾಮುಕಳು, ವಾದ ಮಾಡತಕ್ಕವಳು, ವಂಚಕಳು, ದುರ್ಬುದ್ಧಿಯುಳ್ಳವಳು, ರೋಗಿಷ್ಠಳು, ಆಗುವಳು ಜನನ ಲಗ್ನ ವು ಮೇಷ, ವೃಷಭ, ಕರ್ಕ ಇವುಗಳಲ್ಲಿ ಒಂದು ಆಗಿದ್ದರೆ ಆ ಜಾತಕಳು ಬಹು ಸುಖಭೋಗಿಯಾಗುವಳು.

೨ನೆಯ ಸ್ಥಾನದಲ್ಲಿ ಇದ್ದರೆ—ಸ್ವಜನ ಪರಜನರಿಗೆ ಹಿತ ಮಾಡದವಳು, ಕಲಹ ಪ್ರಿಯಳು, ಕಠಿಣ ಹೃದಯದವಳು, ನಿರ್ಧನಳು ಆಗುವಳು. ಆದರೆ ರಾಹುವಿಗೆ ೨ ಅಥವಾ ಹನ್ನೆರಡನೆಯ ಸ್ಥಾನಗಳಲ್ಲಿ ಮೂರು ಶುಭಗ್ರಹಗಳಾಗಲಿ ೩ ಪಾಪಗ್ರಹಗಳಾಗಲಿ ಇದ್ದರೆ ಆ ಜಾತಕಳು ಸದ್ಗುಣವತಿಯಾಗುವಳು.

೩ನೆಯ ಸ್ಥಾನದಲ್ಲಿ ರಾಹು ಇದ್ದರೆ— ಐಶ್ವರ್ಯವತಿಯು, ವಿಲಾಸ, ಭೋಗಾಪೇಕ್ಷೆಯುಳ್ಳವಳು, ಬಂಧುರಹಿತಳು, ಲೋಕಮಾನ್ಯಳು, ಶತ್ರುಗಳನ್ನು ಜಯಿಸತಕ್ಕವಳು ಆಗುವಳು.

೪ನೆಯ ಸ್ಥಾನದಲ್ಲಿ ರಾಹು ಇದ್ದರೆ–ಅಷ್ಟೈಶ್ವರ್ಯ ಸುಖವನ್ನು ನಾಶ ಮಾಡತಕ್ಕವಳು, ಸಖೀಜನರ ಸ್ನೇಹ ಬಯಸದವಳು, ದೇಹಸುಖವಿಲ್ಲದವಳು, ಅಲ್ಪ ಸಂತತಿಯವಳು, ಆಗುವಳು, ಆದರೆ ಲಗ್ನದಲ್ಲಿ ಗುರು ಇದ್ದರೆ ಅಥವಾ ಗುರುವಿನ ದೃಷ್ಟಿಯಿದ್ದರೆ ಅರಿಷ್ಟ ನಿವಾರಣೆಯಾಗುವದು, ಇತರ ಶುಭಗ್ರಹಗಳು ಲಗ್ನವನ್ನು ನೋಡುತ್ತಿದ್ದರೂ ಸುಖಸಂಪದವು.

೫ನೆಯ ಸ್ಥಾನದಲ್ಲಿ ರಾಹು ಇದ್ದರೆ–ಉದರ ರೋಗಿಯುಳ್ಳವಳು, ಸತ್ಯ ಮಾತಾಡುವವಳು, ಮಕ್ಕಳಿಂದ ಸೌಖ್ಯ ಹೊಂದತಕ್ಕವಳು, ಬುದ್ಧಿವಂತಳು, ಶತ್ರುರಹಿತಳು ಆಗುವಳು.

೬ನೆಯ ಸ್ಥಾನದಲ್ಲಿ ರಾಹು ಇದ್ದರೆ–ಸಕಲ ಕಲಾಕುಶಲರಳು, ಶತ್ರುಗಳನ್ನು ನಿಗ್ರಹಿಸತಕ್ಕವಳು ನೀಚ ಜನರಲ್ಲಿ ಸ್ನೇಹ ಬೆಳೆಸತಕ್ಕವಳು, ಸಾಹಸಿಯು, ನಿಷ್ಕಾಳಜಿ ಸ್ವಭಾವದವಳು ಆಗುವಳು, ಲಗ್ನದಲ್ಲಿ ಪೂರ್ಣಚಂದ್ರ, ಅಥವಾ ಸ್ವಕ್ಷೇತ್ರ ಹೊಂದಿದ ಗ್ರಹವಿದ್ದರೆ ದೀರ್ಘಾಯುಷಿಯಾಗುವಳು.

೭ನೆಯ ಸ್ಥಾನದಲ್ಲಿ ರಾಹು ಇದ್ದರೆ–ಸ್ವಜನ ಪರಜನರ ವಿರೋಧದಿಂದ ಕಷ್ಟನಷ್ಟ ಹೊಂದತಕ್ಕವಳು, ನೀಚ ಸ್ತ್ರೀಯರಲ್ಲಿ ಒಡನಾಡತಕ್ಕವಳು, ವಾದಮಾಡತಕ್ಕಳು ಆಗುವಳು, ರಾಹುವು ಪಾಪಗ್ರಹಗಳ ಮಧ್ಯದಲ್ಲಿದ್ದು ಶುಭಗ್ರಹಗಳ ದೃಷ್ಟಿಹೊಂದಿರದಿದ್ದರೆ–ಗಂಡನನ್ನು ಬಿಡತಕ್ಕವಳು, ಹಾಗೂ ಬೀಡಿ ಸಿಗರೇಟ ಸೇದುವದು, ತಂಬಾಕ ತಿನ್ನುವದು, ಈ ಚಟವುಳ್ಳವಳಾಗುವಳು.

೮ನೆಯ ಸ್ಥಾನದಲ್ಲಿ ಇದ್ದರೆ—ಬುದ್ಧಿಹೀನಳು, ಮಾನಹೀನಳು ಗಂಡಮಾಲೆ, ಪ್ರಮೇಹ ಇತ್ಯಾದಿ ರೋಗಪೀಡಿತಳು, ಪತಿ ಪುತ್ರರ ಸುಖ ಹೊಂದವಳು ಆಗುವಳು, ಆದರೆ ೮ನೆಯ ಸ್ಥಾನವು ಮಿಥುನರಾಶಿಯಾಗಿದ್ದರೆ ಪರಾಕ್ರಮಶಾಲಿಯು, ದಿಗಂತರ ಕೀರ್ತಿ ಹೊಂದತಕ್ಕವಳು ಆಗುವಳು

೯ನೆಯ ಸ್ಥಾನದಲ್ಲಿ ರಾಹು ಇದ್ದರೆ—ಅಲ್ಪ ಸುಖಿಯು ಯಾವಾಗಲೂ ರೋಗದಿಂದ ಬಳಲುವವಳು, ವಿಶೇಷ ತಿರುಗಾಡುವವಳು ಆಗುವಳು. ೯ ನೆಯ ಸ್ಥಾನವು ಮೇಷ, ವೃಷಭ, ಮಿಥುನ, ಕರ್ಕ, ಕನ್ಯಾ, ಮೀನ ಈ ರಾಶಿಗಳಲ್ಲಿ ಒಂದು ಆಗಿದ್ದರೆ ಉತ್ತಮ ಫಲ ಹೊಂದುವಳು.

೧೦ನೆಯ ಸ್ಥಾನದಲ್ಲಿ ರಾಹು ಇದ್ದರೆ–ಪಿತೃಸುಖ,ಪತಿಸುಖರಹಿತಳು,ವಾದ ವಿವಾಹ ಮಾಡತಕ್ಕವಳು, ಧನ ನಾಶ ಹೊಂದತಕ್ಕವಳು ಆಗುವಳು. ೧೦ನೆಯ ಸ್ಥಾನವು ಮೀನರಾಶಿಯಾಗಿದ್ದರೆ ಸುಖಭೋಗವುಳ್ಳವಳು ಆಗುವಳು.

೧೧ನೆಯ ಸ್ಥಾನದಲ್ಲಿ ರಾಹು ಇದ್ದರೆ— ಸದ್ಗುಣಿಯು ಧನಧಾನ್ಯ ವಸ್ತ್ರಾಲಂಕಾರಯುಕ್ತಳು, ಮನೋರಥಪೂರ್ಣ ಮಾಡಿಕೊಳ್ಳುವವಳು, ರಾಜಪೂಜ್ಯಳು, ನಿರೋಗಿಯು ಸೌಭಾಗ್ಯಶಾಲಿಯು ಆಗುವಳು.

೧೨ನೆಯ ಸ್ಥಾನದಲ್ಲಿ ರಾಹು ಇದ್ದರೆ—ಯಶ ಪ್ರಾಪ್ತಿಯುಳ್ಳವಳು, ದೊಡ್ಡ ಕುಟುಂಬಸ್ಥಳು, ನೇತ್ರರೋಗವುಳ್ಳವಳು, ಸಜ್ಜನರಲ್ಲಿ ಗುರುಹಿರಿಯರಲ್ಲಿ ಭಕ್ತಿಯುಳ್ಳವಳು ಆಗುವಳು. ರಾಹುವಿನೊಡನೆ ಚಂದ್ರನಿದ್ದರೆ ಅರಿಷ್ಟ ಫಲಗಳನ್ನೇ ಹೊಂದುವಳು.

ಲಗ್ನದಿಂದ ೧೨ ಸ್ಥಾನಗಳಲ್ಲಿ ಇರುವ ಕೇತುವಿನ ಫಲ

ಜನನಲಗ್ನ ಕುಂಡಲಿಯೊಳು ೧ನೆಯ ಸ್ಥಾನದಲ್ಲಿ ಕೇತು ಇದ್ದರೆ—ವಾತ ಸಂಬಂಧ ರೋಗವುಳ್ಳವಳು, ಪಾಪಸಭಯವುಳ್ಳವಳು, ದುರ್ವರ್ತನೆಯುಳ್ಳವಳು ಆಗುವಳು.

೨ನೆಯ ಸ್ಥಾನದಲ್ಲಿ ಕೇತು ಇದ್ದರೆ-ಅನೇಕ ದುಃಖ ಭೋಗಿಯು, ಶಾಂತಿ ಇಲ್ಲದವಳು, ಮುಖಸಂಬಂಧ ರೋಗಪೀಡಿತಳು ಆಗುವಳು.

೩ನೆಯ ಸ್ಥಾನದಲ್ಲಿ ಕೇತು ಇದ್ದರೆ–ಐಶ್ವರ್ಯವಂತಳು, ಶತ್ರುಗಳನ್ನು ಗೆಲ್ಲುವಳು, ಸಾಹಸಿಯು ಮಾತೃಸುಖರಹಿತಳು ಆಗುವಳು. ಆದರೆ ಲಗ್ನದಿಂದ ೮ನೆಯ ಸ್ಥಾನದಲ್ಲಿ ಶುಭಗ್ರಹಗಳಿರದೆ ೪–೭-೧೦ ಸ್ಥಾನಗಳಲ್ಲಿ ಉಚ್ಚ ಗ್ರಹಗಳು ೧ನೆಯ ಸ್ಥಾನದಲ್ಲಿ ಗುರು ಇದ್ದು ೧-೮ನೆಯ ಸ್ಥಾನಗಳನ್ನು ಚಂದ್ರ ಅಥವಾ ಪಾಪ ಗ್ರಹಗಳು ನೋಡದಿದ್ದರೆ ಆ ಜಾತಕಳು ೭೦ ವರ್ಷ ಬದುಕುವಳು.

೪ನೆಯ ಸ್ಥಾನದಲ್ಲಿ ಕೇತು ಇದ್ದರೆ - ಅಶಕ್ತಳು, ತಂದೆ ಅಥವಾ ಗೆಳತಿಯರಿಂದ ದುಃಖ ಹೊಂದತಕ್ಕವಳು, ಬಂಧು ಸುಖ ಸಹಿತಳು ಆಗುವಳು.

೫ನೆಯ ಸ್ಥಾನದಲ್ಲಿ ಕೇತು ಇದ್ದರೆ– ಪುತ್ರಹೀನಳು, ಮಂದಬುದ್ಧಿಯುಳ್ಳವಳು, ಆಪ್ತಜನರಿಂದ ಸಂತೋಷ ಹೊಂದದವಳು ಸದ್ವೃತಳು ಆಗುವಳು.

೬ನೆಯ ಸ್ಥಾನದಲ್ಲಿ ಕೇತು ಇದ್ದರೆ ರಾಜಸುಖಭೋಗಿಯು, ಶ್ರೀಮಂತನ ಪತ್ನಿಯು ಶತ್ರುಗಳನ್ನು ಜಯಿಸತಕ್ಕವಳು, ಗುರು ಹಿರಿಯರಲ್ಲಿ ಭಕ್ತಿಯುಳ್ಳವಳು, ವಿದ್ಯಾವಂತಳು, ಪಶು ಸಂಗ್ರಹ ಪ್ರಿಯಳು. ಮಾವಂದಿರ ಸಂಬಂಧವಾಗಿ ಮಾನಹೀನಳು, ನಿರೋಗಿಯು ಆಗಿರುವಳು. ಚಂದ್ರನಿದ್ದ ಸ್ಥಾನದಿಂದ

೧೦ನೆಯ ಸ್ಥಾನದಲ್ಲಿ ಗುರು ೧೧ನೆಯ ಸ್ಥಾನದಲ್ಲಿ ಬುಧ ಶುಕ್ರರು ಅಥವಾ ಪಾಪ ಗ್ರಹಗಳು ಇದ್ದರೆ ಸರ್ವಾರಿಷ್ಟ ನಾಶಯೋಗವಾಗುವದು.

೭ನೆಯ ಸ್ಥಾನದಲ್ಲಿ ಕೇತು ಇದ್ದರೆ—ಪತಿಸುಖರಹಿತಳು, ಪ್ರಯಾಣದಲ್ಲಿ ಕಷ್ಟನಷ್ಟ ಕಂಟಕ ಹೊಂದುವ ಯೋಗದವಳು, ದುಃಖಿಯು, ವಿರೋಧಿಗಳಿಂದ ಹಾನಿ ಹೊಂದತಕ್ಕವಳು, ಆಗುವಳು. ೭ನೆಯ ಸ್ಥಾನವು ಧನು, ವೃಶ್ಚಿಕ ರಾಶಿಗಳಲ್ಲಿ ಒಂದಾಗಿದ್ದರೆ ಬಹು ಚಿಂತಾಯುಕ್ತಳು, ಧನವಂತಳು ಆಗುವಳು.

೮ನೆಯ ಸ್ಥಾನದಲ್ಲಿ ಕೇತು ಇದ್ದರೆ-ದುರ್ಬುದ್ಧಿಯುಳ್ಳವಳು,ಗುರು ಸಾಧು, ಸತ್ಪುರುಷರನ್ನು ನಿಂದಿಸುವವಳು, ರೋಗಿಷ್ಟಳು, ದುಷ್ಟಜನರ ಸ್ನೇಹವತಿಯು ಆಗುವಳು. ಅಷ್ಟಮಸ್ಥಾನವು ಮೇಷ, ವೃಷಭ, ಮಿಥುನ, ಕನ್ಯಾ, ವೃಶ್ಚಿಕ, ಧನು ರಾಶಿಗಳಲ್ಲಿ ಒಂದಾಗಿದ್ದರೆ ಒಳ್ಳೆ ವೈಭವಶಾಲಿಯಾಗುವಳು.

೯ನೆಯ ಸ್ಥಾನದಲ್ಲಿ ಕೇತು ಇದ್ದರೆ-ಸರ್ವಜನ ಮಾನ್ಯಳು, ಸತ್ಯವಂತಳು, ಪುತ್ರವತಿಯು, ದೇಶ ಸೇವಾ ತತ್ಪರಳು, ದೈವ ಸ್ವರೂಪಳು, ನೀಚ ಜನರಿಂದ ಭಾಗ್ಯೋದಯ ಹೊಂದತಕ್ಕವಳು ಆಗುವಳು.

೧೦ನೆಯ ಸ್ಥಾನದಲ್ಲಿ ಕೇತು ಇದ್ದರೆ-ಜಡಬುದ್ಧಿಯವಳು, ಪತಿಪ್ರಿಯಳು, ಕ್ರೂರಳು, ವಾಹನ ಭಯವುಳ್ಳವಳು, ರೋಗಿಷ್ಟಳು, ದುರದೃಷ್ಟಳು, ಶತ್ರುರಹಿತಳು, ವಾತರೋಗಿಯು ಆಗುವಳು

೧೧ನೆಯ ಸ್ಥಾನದಲ್ಲಿ ಕೇತು ಇದ್ದರೆ–ಕಥೆ, ಕಾದಂಬರಿ, ಗ್ರಂಥ, ಪದ ಪದ್ಯ ಬರೆಯುತಕ್ಕವಳು, ಮಧುರವಾಗಿ ಮಾತನಾಡುವವಳು, ಗುಹ್ಯಸಂಬಂಧ ರೋಗವುಳ್ಳವಳು, ವಾಹನ ಸಂಪತ್ತುಳ್ಳವಳು ಆಗುವಳು. ಲಗ್ನದಲ್ಲಿ ಗುರುವು ಕೇಂದ್ರ ಸ್ಥಾನಗಳಲ್ಲಿ ಶುಕ್ರನು ಇದ್ದರೆ ೧೦೦ ವರ್ಷ ಬಾಳುವಳು.

೧೨ನೆಯ ಸ್ಥಾನದಲ್ಲಿ ಕೇತು ಇದ್ದರೆ—ಐಶ್ವರ್ಯವಂತಳು, ಜಗತ್ತಿಗೆ ಪೂಜ್ಯಳು, **ಕೀರ್ತಿವಂತಳು**, ನ್ಯಾಯಾನ್ಯಾಯ ಬಲ್ಲವಳು, ರಾಜ ಸುಖ ಭೋಗವುಳ್ಳವಳು, ಶತ್ರುರಹಿತಳು, ನೇತ್ರ, ಪಾದ, ಗುದ ಸಂಬಂಧ ರೋಗಪೀಡಿತಳು ಆಗುವಳು. ಕೆಲವು ಸ್ತ್ರೀಯರು ವ್ಯಾಪಾರಿ ಮನೋವೃತ್ತಿಯವರಾಗುವರು. ಲಗ್ನದಲ್ಲಿ ಉಚ್ಚನಾದ ಗುರು ಇದ್ದು ತ್ರಿಕೋಣ ಸ್ಥಾನಗಳಲ್ಲಿ ಶುಭಗ್ರಹಗಳಿದ್ದರೆ ೮೦ ವರ್ಷ ಆಯುಷ್ಯವು.

—ಸ್ತ್ರೀಡಿಂಭ ಚಕ್ರವು—

ಒಬ್ಬ ಸ್ತ್ರೀಯಳ ಆಕೃತಿಯನ್ನು ತೆಗೆದು ಆಕೃತಿಯ ತಲೆಯ ಮೇಲೆ ೩ ನಕ್ಷತ್ರಗಳು. ನಂತರ ೭ ನಕ್ಷತ್ರಗಳು ಮುಖದಲ್ಲಿ, ಮೊಲೆಗಳ ಮೇಲೆ ೪ ನಕ್ಷತ್ರಗಳು ೩ ನಕ್ಷತ್ರಗಳು ಹೃದಯ (ಎದೆ)ದಲ್ಲಿ ೩ ನಕ್ಷತ್ರಗಳು ಹೊಕ್ಕಳದಲ್ಲಿ ೩ ನಕ್ಷತ್ರಗಳು ಯೋನಿಯಲ್ಲಿ ಎರಡೂ ಪಾದಗಳಲ್ಲಿ, ೪ ನಕ್ಷತ್ರಗಳು ಈ ಪ್ರಕಾರ ಸ್ಥಾಪನ ಮಾಡಬೇಕು. ಹಾಗೂ ಸೂರ್ಯನು ಯಾವ ನಕ್ಷತ್ರದಲ್ಲಿ (ಮಹಾ ನಕ್ಷತ್ರ) ಇರುವನೋ ಅಲ್ಲಿಂದಲೇ ಆರಂಭಿಸಬೇಕು, ಜನನ ನಕ್ಷತ್ರವು ಯಾವ ಸ್ಥಾನದಲ್ಲಿ ಬರುವದೋ ಆ ಸ್ಥಾನದ ಫಲವು ಈ ಪ್ರಕಾರ ಇರುತ್ತದೆ.

ಸ್ತ್ರೀಯಳ ಜನನ ನಕ್ಷತ್ರವು ತಲೆಯಲ್ಲಿ ಬಂದರೆ ಸಂತಾಪವು, ಮುಖದಲ್ಲಿ ಬಂದರೆ ಮೃಷ್ಟಾನ್ನಭೋಜನವು. ಸುಖಪ್ರಾಪ್ತಿಯು. ಮೊಲೆಗಳಲ್ಲಿ ಬಂದರೆ, ಕಾಮವೃದ್ಧಿಯು, ಪತಿಯ ಪ್ರೇಮ ಹೆಚ್ಚಿಸುವವಳು, ಹೃದಯದಲ್ಲಿ ಬಂದರೆ ಹರ್ಷವು. ಹೊಕ್ಕಳದಲ್ಲಿ ಬಂದರೆ, ಆನಂದವೃದ್ಧಿಯು, ಯೋನಿಯಲ್ಲಿ ಬಂದರೆ ಅಧಿಕ ಕಾಮುಕ ಸ್ತ್ರೀಯಳು ಮತ್ತು ಪಾದಗಳಲ್ಲಿ ಬಂದರೆ ಆ ಸ್ತ್ರೀಯಳು ಬಹಳ ದುಷ್ಟಳು, ಪತಿಗೆ ಚಿಂತೆ ಹಾಗೂ ಕ್ಷೋಭವು.

ಉದಾಹರಣೆ— ಒಂದು ಕನ್ಯೆಯ ಜನನ ನಕ್ಷತ್ರವು ಶ್ರವಣ ಅದೆ. ಆಗ ಸೂರ್ಯನು ಮಘಾ ನಕ್ಷತ್ರದಲ್ಲಿ ಇರುತ್ತಾನೆ. ಆದ್ದರಿಂದ ಆ ಕನ್ಯೆಯ ಜನನ ನಕ್ಷತ್ರವು ಸ್ತ್ರೀ ಡಿಂಭ ಚಕ್ರದಲ್ಲಿ ಯಾವ ಸ್ಥಾನದಲ್ಲಿ ಬರುವದೆಂಬುದನ್ನು ನೋಡುವಾ ಮತ್ತು ಅದರ ಫಲವನ್ನು ತಿಳಿಯುವಾ.

ಈಗ ಮಘೆ, ಹುಬ್ಬ, ಉತ್ತರ ಈ ೩ ನಕ್ಷತ್ರಗಳು ತಲೆಯಲ್ಲಿ ಹಸ್ತ, ಚಿತ್ತ, ಸ್ವಾತಿ, ವಿಶಾಖ, ಅನುರಾಧ, ಜ್ಯೇಷ್ಠ ಮೂಲ ಈ ೭ ನಕ್ಷತ್ರಗಳು ಮುಖದಲ್ಲಿ ಪೂರ್ವಾಷಾಢ, ಉತ್ತರಾಷಾಢ, ಶ್ರವಣ, ಧನಿಷ್ಠ ಈ ೪ ನಕ್ಷತ್ರಗಳು ಮೊಲೆಗಳಲ್ಲಿ ಶತತಾರ, ಪೂರ್ವಾಭಾದ್ರ ಉತ್ತರಾಭಾದ್ರ ಈ ೩ ನಕ್ಷತ್ರಗಳು ಹೃದಯದಲ್ಲಿ ರೇವತಿ, ಅಶ್ವಿನಿ, ಭರಣಿ ಈ ೩ ನಕ್ಷತ್ರಗಳು ಹೊಕ್ಕಳದಲ್ಲಿ, ಕೃತ್ತಿಕ ರೋಹಿಣಿ, ಮೃಗಶಿರ ಈ ೩ ನಕ್ಷತ್ರಗಳು ಯೋನಿಯಲ್ಲಿ ಆರಿದ್ರ, ಪುನರ್ವಸು, ಪುಷ್ಯ, ಆಶ್ಲೇಷ, ಈ ೪ ನಕ್ಷತ್ರಗಳು ಪಾದಗಳಲ್ಲಿ ಬರುತ್ತವೆ. ಈಗ ಆ ಕನ್ಯೆಯ ಜನನ ನಕ್ಷತ್ರವು ಶ್ರವಣ ಇದ್ದು ಅದು ಮೊಲೆಗಳಲ್ಲಿ ಬಂದಿರುವದ

ರಿಂದ ಆ ಕನ್ಯೆಯು ಪತಿಯಲ್ಲಿ ಪ್ರೇಮವನ್ನು ಹೆಚ್ಚಿಸುವಳು, ಹಾಗೂ ಕಾಮುಕಳು ಎಂದು ತಿಳಿಯಬೇಕು.

ದ್ವಾದಶ ಸ್ಥಾನಗಳಲ್ಲಿರುವ ಭಾವಾಧಿಪತಿಗಳ ಫಲ ವಿಚಾರವು.

ಲಗ್ನಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ.

ಜನನ ಲಗ್ನ ಕುಂಡಲಿಯೊಳು ಲಗ್ನಾಧಿಪತಿಯು ೧ನೆಯ ಸ್ಥಾನದಲ್ಲಿದ್ದರೆ–ಆ ಸ್ತ್ರೀಯಳು ಸದ್ವೃತಳು, ಧನವಂತಳು, ಮನೆಯ ಕೆಲಸ, ಅಡಿಗೆಯ ಕೆಲಸ ಮಕ್ಕಳ ಪಾಲನೆ ಪೋಷಣೆಗಳಲ್ಲಿ ಜಾಣಳು, ಶೀಘ್ರವಾಗಿ ವಿವಾಹ ಸೌಖ್ಯವನ್ನು ಹೊಂದತಕ್ಕವಳು ಆಗುವಳು.

ಲಗ್ನಾಧಿ ಪತಿಯು ೨ನೆಯ ಸ್ಥಾನದಲ್ಲಿದ್ದರೆ–ಅಜಾತಕಳು, ಸಾತ್ವಿಕಳು, ಸುಶೀಲಳು, ತವರುಮನೆಗೆ ಭಾಗ್ಯೋದಯ ಕಾರಕಳು ಆಗುವಳು.

ಲಗ್ನಾಧಿ ಪತಿಯು ೩ ನೆಯ ಸ್ಥಾನದಲ್ಲಿದ್ದರೆ-ಬಂಧು ಬಾಂಧವರಲ್ಲಿ ಮಾನ್ಯಳು, ಸುಖಭೋಗಿಯು, ಹರ್ಷಚಿತ್ತಳು, ಆಗುವಳು. (ಆ ಸ್ಥಾನವು ಶತ್ರುಕ್ಷೇತ್ರ ಆಗಿರಬಾರದು ನೀಚಕ್ಷೇತ್ರ).

ಲಗ್ನಾಧಿಪತಿಯು ಶುಭಗ್ರಹವಾಗಿ ೪ನೆಯ ಸ್ಥಾನದಲ್ಲಿದ್ದರೆ– ಮಾತೃವರ್ಗದಿಂದ ಸೌಖ್ಯ ಹೊಂದತಕ್ಕವಳಾಗುವಳು. ಆದರೆ ಲಗ್ನಾಧಿಪತಿಯು ಪಾಪಗ್ರಹವಾಗಿದ್ದರೆ ಆ ಸುಖ ಸಿಗಲಾರದು.

ಲಗ್ನಾಧಿಪತಿಯು ಶುಭಗ್ರಹವಾಗಿ ೫ ನೆಯ ಸ್ಥಾನದಲ್ಲಿದ್ದರೆ–ವಿದ್ಯಾವಂತಳು, ಚತುರಳು, ಧರ್ಮಶಾಸ್ತ್ರಗಳ ರಹಸ್ಯವನ್ನು ತಿಳಿದವಳು ತಾಯಿಯಿಂದ ಆಪ್ತೇಷ್ಟರಿಂದ ಸುಖ ಪಡೆಯತಕ್ಕವಳು ಆಗುವಳು.

ಲಗ್ನಾಧಿಪತಿಯು ೬ ನೆಯ ಸ್ಥಾನದಲ್ಲಿದ್ದರೆ–ರೋಗಪೀಡಿತಳು, ವಿರೋಧಿಗಳಿಂದ ಕಷ್ಟ ಪಡತಕ್ಕವಳು, ಕೃಪಣಳು, ಕಷ್ಟಜೀವಿಯು ಆಗುವಳು.

ಲಗ್ನಾಧಿಪತಿಯು ೭ ನೆಯ ಸ್ಥಾನದಲ್ಲಿದ್ದರೆ-ಪತಿಪ್ರಿಯಳು, ಶೀಘ್ರವಾಗಿ ವಿವಾಹವಾಗತಕ್ಕವಳು ಸುಖ ಭೋಗಿಯು ಆಗುವಳು.

ಲಗ್ನಾಧಿಪತಿಯು ೮ ನೆಯ ಸ್ಥಾನದಲ್ಲಿದ್ದರೆ-ನಾನಾವಿಧ ರೋಗಗಳಿಂದ ಬಾಧೆ, ಪಡತಕ್ಕವಳು ಅಶಕ್ತಳು, ದುಃಖಿಯು ಆಗುವಳು.

ಲಗ್ನಾಧಿಪತಿಯು ೯ ನೆಯ ಸ್ಥಾನದಲ್ಲಿದ್ದರೆ-ಕೀರ್ತಿವಂತಳು, ಭಾಗ್ಯವಂತಳು, ಶ್ರೀಮಂತ ಪತಿಯನ್ನು ಪಡೆಯತಕ್ಕವಳು, ಧನಧಾನ್ಯ ಸಮೃದ್ಧಳು ಸುಖಭೋಗಿಯು, ಉತ್ತಮ ವಾಹನವುಳ್ಳವಳು, ಉತ್ತಮರಾದ ಬಹುಜನ ಸೇವಕಿಯರುಳ್ಳವಳು ಆಗುವಳು.

ಲಗ್ನಾಧಿಪತಿಯು ೧೦ ನೆಯ ಸ್ಥಾನದಲ್ಲಿದ್ದರೆ-ತಂದೆ ಅಥವಾ ತಂದೆಯ ಸಂಬಂಧಿಕರಿಂದ ಸೌಖ್ಯ ಪಡೆಯತಕ್ಕವಳು, ದೊಡ್ಡ ಅಧಿಕಾರಿಯ ಪತ್ನಿಯು ಸುಖಭೋಗ; ಭಾಗ್ಯಶಾಲಿಯು ಆಗುವಳು.

ಲಗ್ನಾಧಿಪತಿಯು ೧೧ ನೆಯ ಸ್ಥಾನದಲ್ಲಿದ್ದರೆ-ನಾನಾರೀತಿಯಿಂದ ಧನ ಸಂಪಾದನೆ ಮಾಡತಕ್ಕವಳು, ಸುಖಭೋಗ ವಿಲಾಸಿಯು ಆಗುವಳು.

ಲಗ್ನಾಧಿಪತಿಯು ೧೨ ನೆಯ ಸ್ಥಾನದಲ್ಲಿದ್ದರೆ-ಬಹು ದುಃಖಿಯು ಪರಿಶ್ರಮಪಟ್ಟು ಜೀವನ ಸಾಗಿಸತಕ್ಕವಳು, ದರಿದ್ರಳು, ದುರಾಚಾರಿಯು ಆಗುವಳು, ಲಗ್ನಾಧಿಪತಿಯು ರವಿ ಅಥವಾ ಚಂದ್ರನಾಗಿದ್ದು ೧೨ ನೆಯ ಸ್ಥಾನದಲ್ಲಿದ್ದರೆ-ಆ ಜಾತಕಳಿಗೆ ನೇತ್ರಪೀಡೆಯು ಅಥವಾ ದೃಷ್ಟಿ ಸಂಬಂಧ ದೋಷ ವುಂಟಾಗುವದು.

ಧನಾ (ದ್ವಿತಿಯಾ) ಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ

ಜನನ ಲಗ್ನ ಕುಂಡಲಿಯೊಳು ಧನಾಧಿಪತಿ (೨ನೆಯ ಸ್ಥಾನಾಧಿಪತಿ)ಯು ೧ನೆಯ ಸ್ಥಾನದಲ್ಲಿದ್ದರೆ-ಆ ಜಾತಕಳು, ಕೃಪಣಳು, ಹಣ ಖರ್ಚು ಮಾಡಲು ಹೆದರುವವಳು, ಆದರೆ ತನ್ನ ಸ್ವಂತ ಕೆಲಸಕ್ಕಾಗಿ ಖರ್ಚುಮಾಡುವ ಪ್ರವೃತ್ತಿಯವಳು ಆಗುವಳು.

ಧನಾಧಿಪತಿಯು ೨ ನೆಯ ಸ್ಥಾನದಲ್ಲಿದ್ದರೆ ಶ್ರೀಮಂತಳು, ಧನಧಾನ್ಯ ಸಮೃದ್ಧಿಯುಳ್ಳವಳು, ಸುಖಭೋಗ ಭಾಗ್ಯಯುತಳು, ವಿಲಾಸಿ ಜೀವನ ಸಾಗಿಸತಕ್ಕವಳು, ಚತುರಳು, ಮೃದುವಾಗಿ ಮಾತಾಡತಕ್ಕವಳು, ಉತ್ತಮ ಮಾತುಗಾರಳು ಆಗುವಳು.

ಧನಾಧಿಪತಿಯು ೩ ನೆಯ ಸ್ಥಾನದಲ್ಲಿದ್ದರೆ-ಜಗಳಗಂಟಿಯು ಬಂಧು ಬಾಂಧವರಲ್ಲಿ ದ್ವೇಷವುಳ್ಳವಳು, ಗುರು ಹಿರಿಯರನ್ನು ದೂಷಿಸ ತಕ್ಕವಳು ಆಗುವಳು.

ಧನಾಧಿಪತಿಯು ೪ ನೆಯ ಸ್ಥಾನದಲ್ಲಿದ್ದರೆ–ಧನವಂತಳು. ಸುಖಭೋಗವತಿಯು ಉತ್ತಮ ವಾಹನವುಳ್ಳವಳು, ಕೀರ್ತಿವಂತಳು ಆಗುವಳು.

ಧನಾಧಿಪತಿಯು ೫ ನೆಯ ಸ್ಥಾನದಲ್ಲಿದ್ದರೆ-ನೃತ್ಯ, ಸಂಗೀತ, ಚಿತ್ರಕಲೆ, ಕಸೂತಿ ಮುಂತಾದ ಕಲೆಗಳಲ್ಲಿ ನಿಪುಣಳು, ಸಾಹಿತ್ಯ (ಕಥೆ, ಕಾದಂಬರಿ,) ಧರ್ಮಶಾಸ್ತ್ರ ಓದುವದರಲ್ಲಿ ಲವಲವಿಕೆಯುಳ್ಳವಳು, ಉತ್ತಮ ಭಾಷಣಕಾರಳು ಬುದ್ಧಿವಂತಳು ಆಗುವಳು.

ಧನಾಧಿಪತಿಯು ೬ ನೆಯ ಸ್ಥಾನದಲ್ಲಿದ್ದರೆ–ಧನಾಧಿಪತಿಯು ಶುಭ ಗ್ರಹವಾಗಿದ್ದರೆ–ಆ ಜಾತಕಳು ನಾನಾವಿಧರೋಗಗಳಿಂದ ಬಳತಕ್ಕವಳು, ದುಃಖಿಯು, ಭಾಗ್ಯವಂತಳು, ಧನವತಿಯು ಆಗುವಳು. ಧನಾಧಿಪತಿಯು ಪಾಪಗ್ರಹವಾಗಿದ್ದರೆ–ಧನನಾಶಕಳು, ದರಿದ್ರಳು, ದುಃಖಿಯು. ಕಷ್ಟದಿಂದ ಜೀವಿಸುವವಳು ಆಗುವಳು.

ಧನಾಧಿಪತಿಯು ೭ ನೆಯ ಸ್ಥಾನದಲ್ಲಿದ್ದರೆ-ಆ ಸ್ತ್ರೀಯಳಿಗೆ ವಿವಾಹದ ನಂತರ ಭಾಗ್ಯೋದಯುವಾಗುವದು. ಗಂಡನ ಮನೆಯಲ್ಲಿ ಭೋಗ ಭಾಗ್ಯ ಹೊಂದತಕ್ಕವಳು, ಸುಖಿಯು, ಸದಾಚಾರಿಯು ಆಗುವಳು.

ಧನಾಧಿಪತಿಯು ೮ ನೆಯ ಸ್ಥಾನಲ್ಲಿದ್ದರೆ–ದುಃಖಿಯು, ಪತಿಯಸುಖವನ್ನು ಹೊಂದುವಳು, ಅಥವಾ ಕುಟುಂಬ ಜೀವನದಲ್ಲಿ ನಿರಾಶೆ ಹೊಂದತಕ್ಕವಳು ದುರ್ಭಾಗ್ಯಳು ಆಗುವಳು.

ಧನಾಧಿಪತಿಯು ೯ ನೆಯ ಸ್ಥಾನದಲ್ಲಿದ್ದರೆ-ಪತಿಗೆ ಆಕಸ್ಮಿಕ ಧನಲಾಭದ ಯೋಗಕಾರಕಳು. ತನ್ನ ಪಿತ್ರಾರ್ಜಿತ ಸಂಪತ್ತನ್ನು ಪಡೆಯತಕ್ಕವಳು, ಬಹು ಸುಖಭೋಗಿಯು ಹಸನ್ಮುಖಿಯು ಐಶ್ವರ್ಯವಂತಳು ಆಗುವಳು.

ಧನಾಧಿಪತಿಯು ೧೦ ನೆಯ ಸ್ಥಾನದಲ್ಲಿದ್ದರೆ– ಪ್ರತಿಷ್ಠಿತ ಮನೆತನದ ಪತಿಯನ್ನು ಹೊಂದತಕ್ಕವಳು, ಭಾಗ್ಯವಂತಳು, ಸುಖಭೋಗಿಯು, ಧನವತಿಯು, ವಸ್ತ್ರಾಲಂಕಾರಯುತಳು ಆಗುವಳು.

ಧನಾಧಿಪತಿಯು ೧೧ ನೆಯ ಸ್ಥಾನದಲ್ಲಿದ್ದರೆ–ಅನೇಕ ರೀತಿಯಿಂದ ಧನಲಾಭ ಪಡೆಯು ತಕ್ಕವಳು, ಸುಖಿಯು, ಸುಶೀಲಳು ಭೋಗಿಯು ಆಗುವಳು.

ಧನಾಧಿಪತಿಯು ೧೨ ನೆಯ ಸ್ಥಾನದಲ್ಲಿದ್ದರೆ-ಅಧಿಕ ಖರ್ಚು ಮಾಡುವ ಪ್ರವೃತ್ತಿಯುವಳು, ನೇತ್ರರೋಗ ಪೀಡಿತಳು, ದೃಷ್ಟಿ ದೋಷವುಳ್ಳವಳು ಆಗುವಳು.

ತೃತೀಯಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ

ಜನನ ಲಗ್ನ ಕುಂಡಲಿಯೊಳು ತೃತೀಯಾಧಿಪತಿಯು ೧ ನೆಯ ಸ್ಥಾನದಲ್ಲಿದ್ದರೆ- ಆ ಜಾತಕಳು ಸಾಧಾರಣ ಧನವಂತಳು, ಆಪ್ತೇಷ್ಟರಲ್ಲಿ ಬಂಧು ಬಳಗದವರಲ್ಲಿ ವಿರೋಧವುಳ್ಳವಳು ಆಗುವಳು. ತೃತಿಯಾಧಿಪತಿಯು ಶುಭ ಗ್ರಹವಾದರೆ- ಉತ್ತಮ ಪಾಪಗ್ರಹವಾದರೆ ಹಾನಿಕರವು.

ತೃತೀಯಾಧಿಪತಿಯು ೨ ನೆಯ ಸ್ಥಾನದಲ್ಲಿದ್ದರೆ-ಸಂಪದಭಿವೃದ್ಧಿಯುಳ್ಳವಳು, ಸುಖಭೋಗಿಯು. ಐಶ್ವರ್ಯವಂತಳು, ವಿಲಾಸ ಜೀವನ ಸಾಗಿಸತಕ್ಕವಳು ಆಗುವಳು.

ತೃತೀಯಾಧಿಪತಿಯು ೩ ನೆಯ ಸ್ಥಾನದಲ್ಲಿದ್ದರೆ-ಬಂಧು ಜನಮಾನ್ಯಳು ದಾನಧರ್ಮ ಪರೋಪಕಾರ ಮಾಡತಕ್ಕವಳು, ಕೀರ್ತಿವಂತಳು, ಸ್ತ್ರೀ ಸಮಾಜದಲ್ಲಿ ಶ್ರೇಷ್ಠಳು ಸಮಾಜದ ಮುಂದಾಳು ಆಗುವಳು.

ತೃತೀಯಾಧಿಪತಿಯು ೪ ನೆಯ ಸ್ಥಾನದಲ್ಲಿದ್ದರೆ-ತಾಯಿಯ ಸೌಖ್ಯವನ್ನು ಪಡೆಯದವಳು, ವಾಹನಗಳ ಅಪಘಾತದಿಂದ ದುಃಖ ಪಡತಕ್ಕವಳು ಶೀಘ್ರಕೋಪಿಯು ಆಗುವಳು.

ತೃತೀಯಾಧಿಪತಿಯು ೫ ನೆಯ ಸ್ಥಾನದಲ್ಲಿದ್ದರೆ- ಭಾಗ್ಯಶಾಲಿಯು, ಸತ್ಪುತ್ರರುಳ್ಳವರು ಸುಖಭೋಗವಂತಳು ಆಗುವಳು. ತೃತೀಯಾಧಿಪತಿಯು ರವಿ, ಮಂಗಳ, ಗುರು ಆಗಿದ್ದು ಈ ಗ್ರಹಗಳು ೫ ನೆಯ ಸ್ಥಾನವಲ್ಲಿ ಇದ್ದುದಾದರೆ- ಅಧಿಕ ಮಕ್ಕಳುಳ್ಳವಳಾಗುವಳು.

ತೃತೀಯಾಧಿಪತಿಯು ೬ ನೆಯ ಸ್ಥಾನದಲ್ಲಿದ್ದರೆ-ಬಂಧುಗಳು ವಿರೋಧಿಗಳಾಗುವರು ತೃತೀಯಾಧಿಪತಿಯು ಪಾಪಗ್ರಹವಾಗಿ ೬ ನೆಯ ಸ್ಥಾನದಲ್ಲಿದ್ದರೆ, ಶತ್ರುಗಳಿಗೆ ನಾಶವು ಸಂತೋಷ ಚಿತ್ತಳು ಆಗುವಳು.

ತೃತೀಯಾಧಿಪತಿಯು ೭ ನೆಯ ಸ್ಥಾನದಲ್ಲಿ ಇದ್ದರೆ-ಪ್ರವಾಸದಲ್ಲಿ ಅಭಿರುಚಿಯುಳ್ಳವಳು ತೀರ್ಥಕ್ಷೇತ್ರ ಯಾತ್ರಾ ಮಾಡತಕ್ಕವಳು, ಸಂಚಾರಿಯು ಆಗುವಳು. ತೃತೀಯಾಧಿಪತಿಯು ಚಂದ್ರ, ಗುರು, ಶುಕ್ರರು ಆಗಿದ್ದು ಇವರು ೭ ನೆಯ ಸ್ಥಾನದಲ್ಲಿದ್ದರೆ-ಪತಿಯೊಡನೆ ಬಹು ಸೌಖ್ಯ ಹೊಂದುವಳು, ಸುಖ ಭೋಗ ವಿಲಾಸಿಯು ಆಗುವಳು.

ತೃತೀಯಾಧಿಪತಿಯು ೮ ನೆಯ ಸ್ಥಾನದಲ್ಲಿದ್ದರೆ-ಬಂಧುಬಳಗದವರಿಂದ ತಿರಸ್ಕಾರ ಹೊಂದುವವಳು, ದುಃಖಿಯು, ಬೇನೆಯಿಂದ ಬಳಲತಕ್ಕವಳು ಸುಖ ರಹಿತಳು ಆಗುವಳು.

ತೃತೀಯಾಧಿಪತಿಯು ೯ ನೆಯ ಸ್ಥಾನದಲ್ಲಿದ್ದರೆ, ಬಂಧುಜನ ಪ್ರಿಯಳು, ಭಾಗ್ಯವಂತಳು, ತವರು ಮನೆಗಿಂತ ಗಂಡನ ಮನೆಯ ಭಾಗ್ಯವೃದ್ಧಿ ಮಾಡತಕ್ಕವಳು, ಪುಣ್ಯಕ್ಷೇತ್ರ, ತೀರ್ಥಯಾತ್ರಾ ದರ್ಶನ ಮಾಡತಕ್ಕವಳು ಆಗುವಳು.

ತೃತೀಯಾಧಿಪತಿಯು ೧೦ ನೆಯ ಸ್ಥಾನದಲ್ಲಿದ್ದರೆ- ಪಿತೃವರ್ಗದವರಿಂದ ಧನ, ಸಂಪತ್ತು, ಸೌಖ್ಯಪಡೆಯತಕ್ಕವಳು, ಕಷ್ಟಪಟ್ಟು ಕೆಲಸ ಮಾಡತಕ್ಕವಳು, ಪರಿಶ್ರಮ ಜೀವಿಯು, ಸ್ವತಃ ಧನ ಸಂಪಾದನೆ ಮಾಡತಕ್ಕವಳು ಆಗುವಳು.

ತೃತೀಯಾಧಿಪತಿಯು ೧೧ ನೆಯ ಸ್ಥಾನದಲ್ಲಿದ್ದರೆ-ಸಾಹಸ ಸ್ವಭಾವದವಳು, ಪರಿಶ್ರಮ ಮಾಡತಕ್ಕವಳು, ಎಲ್ಲ ಕೆಲಸಗಳನ್ನು ದಕ್ಷತೆಯಿಂದ ಮಾಡತಕ್ಕವಳು, ಆಗುವಳು. ತೃತಿಯಾಧಿಪತಿಯು ರವಿ, ಮಂಗಳ, ಗುರು ಇವುಗಳಲ್ಲಿ ಒಂದು ಗ್ರಹವಾಗಿದ್ದು ೧೧ ನೆಯ ಸ್ಥಾನದಲ್ಲಿದ್ದರೆ-ಆಜಾತಕಳು ಅಣ್ಣ, ತಮ್ಮಂದಿರ ಸಹಾಯದಿಂದ ಜೀವಿಸುವವಳು.

ತೃತೀಯಾಧಿಪತಿಯು- ೧೨ ನೆಯ ಸ್ಥಾನದಲ್ಲಿದ್ದರೆ-ಆಪ್ತೇಷ್ಟರಲ್ಲಿ ವಿರೋಧಿಯು ಆಲಸಿಯು ನಿರ್ಧನಳು, ದರಿದ್ರಳು, ಕಷ್ಟಜೀವಿಯು ಆಗುವಳು.

– ಚತುರ್ಥಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ –

ಜನನ ಲಗ್ನ ಕುಂಡಲಿಯಲ್ಲಿ ಚತುರ್ಥಾಧಿಪತಿಯು ೧ನೆಯ ಸ್ಥಾನದಲ್ಲಿದ್ದರೆ ಆ ಜಾತಕಳು ಪಿತ್ರಾರ್ಜಿತ ಆಸ್ತಿಯಿಂದ ಲಾಭ ಪಡೆಯತಕ್ಕವಳು, ಸುಖ ಭೋಗ ವಿಲಾಸಿಯು, ಸಂತೋಷಚಿತ್ತಳು, ಸದೃಢಳು, ಆರೋಗ್ಯವಂತಳು ಆಗುವಳು.

ಚತುರ್ಥಾಧಿಪತಿಯು ೧ ನೆಯ ಸ್ಥಾನದಲ್ಲಿದ್ದರೆ-ಚತುರ್ಥಾಧಿಪತಿಯು ಶುಭಗ್ರಹವಿದ್ದರೆ, ತವರು ಮನೆಯವರು ಶ್ರೀಮಂತರಿರುವದರಿಂದ ತವರು ಮನೆಯ ಆಸ್ತಿ ಉಪಯೋಗಿಸತಕ್ಕವಳು ಧನವಂತಳು, ಸುಖಿಯು, ವಿಲಾಸಿಯು ಆಗುವಳು. ಚತುರ್ಥಾಧಿಪತಿಯು ಪಾಪಗ್ರಹವಿದ್ದರೆ ತವರು ಮನೆಯವರು ಬಡವರಿರುವರು.

ಚತುರ್ಥಾಧಿಪತಿಯು ೩ ನೆಯ ಸ್ಥಾನದಲ್ಲಿದ್ದರೆ ಆಪ್ತೇಷ್ಟರೊಡನೆ ಬಂಧುಭಗಿನಿಯರೊಡನೆ ವಿರೋಧ ಕಟ್ಟಿಕೊಳ್ಳತಕ್ಕವಳು, ದ್ವೇಷಿಯು ದುಃಖಿಯು ಆಗುವಳು. ಚತುರ್ಥಾಧಿಪತಿಯು ಪಾಪಗ್ರಹವಾಗಿ ೩ ನೆಯ ಸ್ಥಾನದಲ್ಲಿದ್ದರೆ ತಾಯಿ ತಂದೆಗಳ ಸಂಗಡ ಸಹ ವಿರೋಧ ಕಟ್ಟಿಕೊಳ್ಳುವಳು.

ಚತುರ್ಥಾಧಿಪತಿಯು ೪ ನೆಯ ಸ್ಥಾನದಲ್ಲಿ ಇದ್ದರೆ-ಅನೇಕ ಪ್ರಕಾರದ ಸುಖಭೋಗವುಳ್ಳವಳು, ಶ್ರೀಮಂತಳು, ಸೌಭಾಗ್ಯಶಾಲಿಯು ಛತ್ರವು ವಾಹನವುಳ್ಳವಳು, ಗೃಹಸೌಖ್ಯವುಳ್ಳವಳು ಸರ್ವರಿಂದ ಗೌರವ ಹೊಂದತಕ್ಕವಳು, ಆಗುವಳು ಚತುರ್ಥಾಧಿಪತಿಯು ಪಾಪಗ್ರಹವಾಗಿದ್ದರೆ, ವಿವಾಹದ ನಂತರ ಪತಿಯ ಮನೆಗೆ ಭಾಗ್ಯೋದಯ ಕಾಲವು.

ಚತುರ್ಥಾಧಿಪತಿಯು ೫ ನೆಯ ಸ್ಥಾನದಲ್ಲಿದ್ದರೆ-ಜಾಣಳು ವಿದ್ಯಾವಂತಳು, ಭಾಗ್ಯಶಾಲಿಯು ಸದ್ಗುಣಿಗಳಾದ ಪುತ್ರರುಳ್ಳವಳು ಚತುರಳು ಯಶಸ್ಸುಳ್ಳವಳು ಆಗುವಳು.

ಚತುರ್ಥಾಧಿಪತಿಯು ೬ ನೆಯ ಸ್ಥಾನದಲ್ಲಿದ್ದರೆ- ಕೃಪಣಳು, ತಾಯಿ ತಂದೆಗಳ ಸೌಖ್ಯದೊರೆಯದವಳು, ಸಂಬಂಧಿಕರಲ್ಲಿ ವಿವಾಹವಾಗುವ ಯೋಗವುಳ್ಳವಳು, ಆಗುವಳು, ಚತುರ್ಥಾಧಿಪತಿಯು ಪಾಪಗ್ರಹವಾಗಿದ್ದು ೬ ನೆಯ ಸ್ಥಾನದಲ್ಲಿದ್ದರೆ, ಪತಿಗೆ ತಿಳಿಯದಂತೆ ಹಣ ಸಂಪಾದಿಸತಕ್ಕವಳು, ಪತಿದೂಷಕಳು ಆಗುವಳು.

ಚತುರ್ಥಾಧಿಪತಿಯು ಶುಭಗ್ರಹವಾಗಿದ್ದು ೭ನೆಯ ಸ್ಥಾನದಲ್ಲಿದ್ದರೆ ಪತಿಪ್ರಿಯಳು, ಸುಖಭೋಗಿಯು ವಿಲಾಸಿಯು ಧನಧಾನ್ಯಯುತಳು ಆಪ್ತೇಷ್ಟರಲ್ಲಿ ವಿವಾಹವಾಗುವ ಯೋಗದವಳು, ಶೀಘ್ರವಿವಾಹ ಯೋಗವುಳ್ಳವಳು, ಆಗುವಳು, ಚತುರ್ಥಾಧಿಪತಿಯು ಪಾಪಗ್ರಹವಾಗಿದ್ದ ೭ ನೆಯ ಸ್ಥಾನದಲ್ಲಿದ್ದರೆ ಕಷ್ಟಜೀವಿಯು ತಡವಾಗಿ ವಿವಾಹವಾಗತಕ್ಕವಳು ಆಗುವಳು.

ಚತುರ್ಥಾಧಿಪತಿಯು ೮ ನೆಯ ಸ್ಥಾನದಲ್ಲಿದ್ದರೆ-ದೇಹದಲ್ಲಿಯ ನಾನಾ ವ್ಯಾಧಿಗಳಿಂದ ಬಳಲತಕ್ಕವಳು, ಅಶಕ್ತಳು, ದುಃಖಿಯು ಅನೇಕ ಕಂಟಕವುಳ್ಳವಳು ಜೀವನದಲ್ಲಿ ನಿರಾಶೆ ಹೊಂದತಕ್ಕವಳು ಚತುರ್ಥಾಧಿಪತಿಯು ಪಾಪಗ್ರಹವಾಗಿ ಅಷ್ಟಮದಲ್ಲಿದ್ದರೆ-ಆ ಜಾತಕಳು ಜೀವನದಲ್ಲಿ ಜಿಗುಪ್ಸೆ ತಾಳಿ ಆತ್ಮಹತ್ಯೆ ಮಾಡಿಕೊಳ್ಳುವವಳು ಸಹ ಆಗುವಳು.

ಚತುರ್ಥಾಧಿಪತಿಯು ೯ ನೆಯ ಸ್ಥಾನದಲ್ಲಿದ್ದರೆ ಸಂಚಾರದಲ್ಲಿ ಪ್ರೀತಿಯುಳ್ಳವಳು, ತೀರ್ಥಯಾತ್ರಾ, ಪುಣ್ಯಕ್ಷೇತ್ರಗಳ ದರ್ಶನ ಮಾಡತಕ್ಕವಳು, ಧನವಂತಳು, ಮಾತಾಪಿತೃಗಳಿಂದ ಸೌಖ್ಯ ಹೊಂದತಕ್ಕವಳು, ಶೀಘ್ರ ವಿವಾಹವಾಗತಕ್ಕ ಯೋಗದವಳು, ವಿವಾಹವಾದ ನಂತರ ಪತಿಯ ಮನೆಗೆ ಭಾಗ್ಯೋದಯವನ್ನುಂಟು ಮಾಡತಕ್ಕವಳು ಆಗುವಳು.

ಚತುರ್ಥಾಧಿಪತಿಯು ೧೦ ನೆಯ ಸ್ಥಾನದಲ್ಲಿದ್ದರೆ-ತವರು ಮನೆಗೆ ಬಹಳ ಒಳ್ಳೇದು. ಪಿತೃ ವರ್ಗದವರಿಗೆ ಸೌಖ್ಯವು, ಈ ಜಾತಕರು ಪರಿಶ್ರಮಿಯು, ಸ್ವಾವಲಂಬನದಿಂದ ಧನ ಸಂಪಾದಿಸುವವಳು, ನೌಕರಿ ಮಾಡುವಯೋಗವುಳ್ಳವಳು ಆಗುವಳು. ಚತುರ್ಥಾಧಿಪತಿಯು ಪಾಪಗ್ರಹವಾಗಿದ್ದರೆ ಮಾತೃವರ್ಗದವರಿಂದ ಸೌಖ್ಯದೊರೆಯಲಾರದು.

ಚತುರ್ಥಾಧಿಪತಿಯು ೧೧ ನೆಯ ಸ್ಥಾನದಲ್ಲಿದ್ದರೆ ಸೌಭಾಗ್ಯವಂತಳು ಧನಧಾನ್ಯ ಸಂಪತ್ತುಳ್ಳವಳು, ಶ್ರೀಮಂತಳು ಸುಖಭೋಗಿಯು ಆಗುವಳು.

ಚತುರ್ಥಾಧಿಪತಿಯು ೧೨ ನೆಯ ಸ್ಥಾನದಲ್ಲಿದ್ದರೆ-ಅಧಿಕ ಖರ್ಚುಮಾಡತಕ್ಕವಳು, ದುಂದುಗಾರಳು, ಅಪವಾದ ಹೊಂದತಕ್ಕವಳು, ಆಗುವಳು.

— ಪಂಚಮಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ —

ಜನನ ಲಗ್ನ ಕುಂಡಲಿಯಲ್ಲಿ ಪಂಚಮಾಧಿಪತಿಯು ೧ ನೆಯ ಸ್ಥಾನದಲ್ಲಿದ್ದರೆ-ಆ ಜಾತಕಳು ವಿದ್ಯಾವಂತಳು, ವ್ಯವಹಾರ ಚತುರಳು, ಪುತ್ರವತಿಯು, ಸುಖವಂತೆಯು ಆಗುವಳು.

ಪಂಚಮಾಧಿಪತಿಯು ೨ ನೆಯ ಸ್ಥಾನದಲ್ಲಿದ್ದರೆ- ಐಶ್ವರ್ಯವಂತಳು, ಸುಖಭೋಗಿಯು ವಸ್ತ್ರವಾಹನವುಳ್ಳವಳು, ಉತ್ತಮರಾದ ಸೇವಕರುಳ್ಳ

ಪಂಚಮಾಧಿಪತಿಯು ೩ ನೆಯ ಸ್ಥಾನದಲ್ಲಿದ್ದರೆ-ಜಾಣಳು, ಚತುರಳು, ವಿದ್ಯಾಭ್ಯಾಸಕ್ಕೆ ಪ್ರತಿಕೂಲರೋಗವುಳ್ಳವಳು, ಸಂತಾನವುಳ್ಳವಳು ಸುಖಿಯು, ಆಗುವಳು.

ಪಂಚಮಾಧಿಪತಿಯು ಪಾಪಗ್ರಹವಾಗಿದ್ದು ೪ ನೆಯ ಸ್ಥಾನದಲ್ಲಿದ್ದರೆ ತಾಯಿಮಕ್ಕಳಲ್ಲಿ ವಿರೋಧವಿರುವದು. ಶುಭಗ್ರಹವಾಗಿದ್ದು ೪ ನೆಯ ಸ್ಥಾನದಲ್ಲಿದ್ದರೆ-ಮಾತೃ ಸೌಖ್ಯವುಳ್ಳವಳು, ಹರ್ಷಚಿತ್ತಳು ಆಗುವಳು.

ಪಂಚಮಾಧಿಪತಿಯು ೫ ನೆಯ ಸ್ಥಾನದಲ್ಲಿದ್ದರೆ, ವಿದ್ಯಾವಂತಳು, ಜಾಣಳು, ಪುತ್ರವತಿಯು, ಸುಖಭೋಗಿಯು, ಆಗುವಳು.

ಪಂಚಮಾಧಿಪತಿಯು ೬ ನೆಯ ಸ್ಥಾನದಲ್ಲಿದ್ದರೆ- ಸಂತತಿಗೆ ಅಪಾಯವು, ನಷ್ಟ ಸಂತತಿಯುಳ್ಳವಳು. ರೋಗಪೀಡಿತಳು, ಮಾಸಿಕ ದೋಷವುಳ್ಳವಳು ಆಗುವಳು. ಪಂಚಮಾಧಿಪತಿಯು ಶುಕ್ರ ಅಥವಾ ಚಂದ್ರನಾಗಿದ್ದರೆ–ಆ ಜಾತಕಳು ಗರ್ಭಾಶಯದ ರೋಗದಿಂದ ಬಳಲುವಳು.

ಪಂಚಮಾಧಿಪತಿಯು ೭ ನೆಯ ಸ್ಥಾನದಲ್ಲಿದ್ದರೆ-ಶೀಘ್ರ ವಿವಾಹವಾಗುವ ಯೋಗದವಳು, ವಿಲಾಸಪ್ರಿಯಳು. ಕಾಮುಕಳು, ಸುಖಭೋಗಿಯು ಆಗುವಳು, ಪಂಚಮಾಧಿಪತಿಯು ಶುಕ್ರ ಅಥವಾ ಚಂದ್ರನಾಗಿದ್ದರೆ ಸಪ್ತಮದಲ್ಲಿದ್ದರೆ ಆಜಾತಕಳು ಪ್ರೇಮ ವಿವಾಹ ಮಾಡಿಕೊಳ್ಳುವಳು.

ಪಂಚಮಾಧಿಪತಿಯು ೮ ನೆಯ ಸ್ಥಾನದಲ್ಲಿದ್ದರೆ-ಮಂದಬುದ್ಧಿಯುಳ್ಳವಳು, ಪುತ್ರಹೀನಳು, ದುಃಖಿಯು, ಆಗುವಳು. ಪಂಚಮಾಧಿಪತಿಯು ಗುರು ಅಥವಾ ಶುಕ್ರರಾಗಿದ್ದು ಅಷ್ಟಮಸ್ಥಾನದಲ್ಲಿದ್ದರೆ, ಸಂತಾನಕ್ಕೆ ಪ್ರತಿಕೂಲವು, ಮಕ್ಕಳಿಲ್ಲದವಳು, ರೋಗಪೀಡಿತಳು ಆಗುವಳು. ಗುರು ಶುಕ್ರರಲ್ಲದೆ ಬೇರೆ ಶುಭಗ್ರಹಗಳಾಗಿದ್ದರೆ ಆ ಜಾತಕಳು, ಅಶಕ್ತಳು, ಹೊಟ್ಟೆನೋವು, ಅಜ ರೋಗ ಇತ್ಯಾದಿ ವ್ಯಾಧಿಪೀಡಿತಳು ಆಗುವಳು.

ಪಂಚಮಾಧಿಪತಿಯು ೯ ನೆಯ ಸ್ಥಾನದಲ್ಲಿದ್ದರೆ–ವಿದ್ಯಾವಂತಳು, ಜಾಣಳು, ಚತುರತನದಿಂದ ಮಾತಾಡತಕ್ಕವಳು, ಪುತ್ರವತಿಯು, ತೀರ್ಥಯಾತ್ರಾ, ಪುಣ್ಯಕ್ಷೇತ್ರಗಳ ದರ್ಶನ ಮಾಡತಕ್ಕವಳು, ಶೀಘ್ರ ವಿವಾಹವಾಗುವ ಯೋಗದವಳು ಆಗುವಳು.

ಪಂಚಮಾಧಿಪತಿಯು ೧೦ ನೆಯ ಸ್ಥಾನದಲ್ಲಿ ಇದ್ದರೆ—ಆ ಸ್ತ್ರೀಯಳು ದೊಡ್ಡ ಅಧಿಕಾರಿಯು ಪತ್ನಿ ಅಥವಾ ತಾಯಿಯಾಗುವಳು, ಭಾಗ್ಯಶಾಲಿಯು ಸುಪುತ್ರವತಿಯು ಐಶ್ವರ್ಯವಂತಳು ಆಗುವಳು

ಪಂಚಮಾಧಿಪತಿಯು ೧೧ ನೆಯ ಸ್ಥಾನದಲ್ಲಿದ್ದರೆ—ವಿದ್ಯಾವಂತಳು, ವಿನಯಶೀಲಳು, ಸುಶೀಲಳು, ಧರ್ಮಶಾಸ್ತ್ರಗಳನ್ನು ಬಲ್ಲವಳು ಸತ್ಪುತ್ರರುಳ್ಳವಳು, ಆಗುವಳು.

ಪಂಚಮಾಧಿಪತಿಯು ೧೨ ನೆಯ ಸ್ಥಾನದಲ್ಲಿದ್ದರೆ- ಕ್ರೂರ ಪುತ್ರರುಳ್ಳವಳು, ದುಃಖಿಯು, ಕಷ್ಟಜೀವಿಯು, ಮಕ್ಕಳಿಂದ ಕ್ಲೇಶಹೊಂದತಕ್ಕವಳು, ಮೂರ್ಖಳು ಆಗುವಳು.

— ಷಷ್ಠಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ —

ಜನನ ಲಗ್ನ ಕುಂಡಲಿಯೊಳು, ಷಷ್ಠಾಧಿಪತಿಯು ೧ ನೆಯ ಸ್ಥಾನದಲ್ಲಿದ್ದರೆ ಆ ಜಾತಕಳು, ಸದೃಢಳು, ಆರೋಗ್ಯವಂತಳು ಜವಾಬ್ದಾರಿಯಿಂದ ಮನೆತನವನ್ನು ನಡೆಯಿಸತಕ್ಕವಳು, ತಾರತಮ್ಯ ಭಾವ ತಿಳಿದವಳು ಆಗುವಳು ಷಷ್ಠಾಧಿಪತಿಯು ಚಂದ್ರ, ಬುಧ, ಶುಕ್ರರಾಗಿದ್ದರೆ—ಆ ಸ್ತ್ರೀಯಳು, ಬಹು ಬುದ್ಧಿವಂತಳು, ಕುಶಲಳು, ರಾಜಕಾರಣಿಯು, ಕೀರ್ತಿವಂತಳು ಕುಟುಂಬದ ಯಜಮಾನತಿಯಾಗುವ ಯೋಗ್ಯತೆಯುವಳು, ಆಗುವಳು.

ಷಷ್ಠಾಧಿಪತಿಯು ೨ ನೆಯ ಸ್ಥಾನದಲ್ಲಿದ್ದರೆ ಶ್ರೀಮಂತಳು, ಧನಧಾನ್ಯ ಸಮೃದ್ಧಿಯುಳ್ಳವಳು, ತನ್ನ ಸ್ವಾರ್ಥಕ್ಕಾಗಿ ಪರಿಶ್ರಮ ಪಡತಕ್ಕವಳು, ಕೃಪಣಳು, ಅಶಕ್ತಳು, ದುರ್ಬಲಳು, ಆಗುವಳು.

ಷಷ್ಠಾಧಿಪತಿಯು ೩ ನೆಯ ಸ್ಥಾನದಲ್ಲಿದ್ದರೆ-ಸಾಹಸಿ ಸ್ವಭಾವದವಳು, ಬಂಧು ಬಳಗದವರೊಂದಿಗೆ ಪ್ರೀತಿಯಿಂದ ನಡೆದುಕೊಳ್ಳದವಳು, ಜನ ವಿರೋಧಿಯು, ಆಗುವದು.

ಷಷ್ಠಾಧಿಪತಿಯು ೪ನೆಯ ಸ್ಥಾನದಲ್ಲಿದ್ದರೆ - ತಾಯಿಯ ಸೌಖ್ಯ ಹೊಂದದವಳು, ದುಃಖಿಯು ಆಗುವಳು.

ಷಷ್ಠಾಧಿಪತಿಯು ೫ ನೆಯ ಸ್ಥಾನದಲ್ಲಿದ್ದರೆ-ಸಾಧಾರಣ ಬುದ್ಧಿವಂತಳು, ಮಕ್ಕಳಿಂದ ದುಃಖ ಹೊಂದತಕ್ಕವಳು. ದುರಾಚಾರಿಗಳಾದ ಮಕ್ಕಳುಳ್ಳವಳು ಆಗುವಳು.

ಷಷ್ಠಾಧಿಪತಿಯು ೬ ನೆಯ ಸ್ಥಾನದಲ್ಲಿದ್ದರೆ- ಧನವಂತಳು ಭಾಗ್ಯಶಾಲಿಯು, ಸದೃಢಳು, ಆರೋಗ್ಯವಂತೆಯು, ಕೃಪಣಳು, ವಿರೋಧಿಗಳನ್ನು ಮಾತಿನಿಂದ ಜಯಿಸತಕ್ಕವಳು, ಸಾಹಸಿ ಸ್ವಭಾವಿಯು ಆಗುವಳು.

ಷಷ್ಠಾಧಿಪತಿಯು ಶುಭಗ್ರಹವಾಗಿದ್ದು ೭ ನೆಯ ಸ್ಥಾನದಲ್ಲಿದ್ದರೆ–ಆ ಸ್ತ್ರೀಯಳು ಪತಿಪ್ರಿಯಳು, ಆಪ್ತೇಷ್ಟರಲ್ಲಿ ವಿವಾಹವಾಗತಕ್ಕವಳು, ಶೀಘ್ರವಿವಾಹವಾಗುವವಳು ಆಗುವಳು.

ಷಷ್ಠಾಧಿಪತಿಯು ೮ ನೆಯ ಸ್ಥಾನದಲ್ಲಿದ್ದರೆ–ಸ್ವಲ್ಪ ಆಯುಷ್ಯವುಳ್ಳವಳು, ಅಶಕ್ತಳು, ಅಕಸ್ಮಾತ್ ಧನಲಾಭ ಹೊಂದತಕ್ಕವಳು ಆಗುವಳು. ಷಷ್ಠಾಧಿಪತಿಯು ಬಲಿಷ್ಠನಾಗಿದ್ದು ಅಷ್ಟಮದಲ್ಲಿದ್ದರೆ ಸಟ್ಟಾ ಲಾಟರಿ, ಕುದುರೆ ರೇಸು, ಭೂಗತ ಸಂಪತ್ತು ಮುಂತಾದ ಆಕಸ್ಮಿಕ ದ್ರವ್ಯಲಾಭ ಹೊಂದತಕ್ಕವಳು, ಆಗುವಳು.

ಷಷ್ಠಾಧಿಪತಿಯು ೯ ನೆಯ ಸ್ಥಾನದಲ್ಲಿದ್ದರೆ–ಗುರುಹಿರಿಯರನ್ನು ದೂಷಿಸತಕ್ಕವಳು, ದುರಾಚಾರಿಯು, ಅವಿಧೇಯಳು ವಿಚಾರಹೀನಳು, ಧರ್ಮಬಾಹಿರಳು, ಆಗುವಳು.

ಷಷ್ಠಾಧಿಪತಿಯು ೧೦ ನೆಯ ಸ್ಥಾನದಲ್ಲಿದ್ದರೆ– ಪರಿಶ್ರಮಪಟ್ಟು ಉಪಜೀವನ ಸಾಗಿಸತಕ್ಕವಳು, ನೌಕರಿ ಮೊದಲಾದವನ್ನು ಮಾಡತಕ್ಕವಳು ಸಾಹಸಿಯು, ಸುಖಿಯು ಆಗುವಳು.

ಷಷ್ಠಾಧಿಪತಿಯು ೧೧ ನೆಯ ಸ್ಥಾನದಲ್ಲಿದ್ದರೆ –ನಷ್ಟ ಸಂತತಿಯುಳ್ಳವಳು, ಸಂತತಿಗೆ ಮಾರಕಯೋಗದವಳು, ಅಕಸ್ಮಾತ್ ಚೋರಭಯದಿಂದ ದುಃಖ ಪಡತಕ್ಕವಳು.

ಷಷ್ಠಾಧಿಪತಿಯು ಪಾಪಗ್ರಹವಾಗಿ ಬಲಿಷ್ಠನಾಗಿ ೧೨ ನೆಯ ಸ್ಥಾನದಲ್ಲಿದ್ದರೆ–ಕೃಪಣಳು, ಸುಖಿಯು, ಶುಭಕರಳು ಆಗುವಳು.

– ಸಪ್ತಮಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ –

ಜನಲಗ್ನ ಕುಂಡಲಿಯೊಳು ಸಪ್ತಮಾಧಿಪತಿಯು ೧ ನೆಯ ಸ್ಥಾನದಲ್ಲಿ ಇದ್ದರೆ- ಚಿಕ್ಕ ವಯಸ್ಸಿನಲ್ಲಿಯೇ ವಿವಾಹವಾಗತಕ್ಕವಳು, ಪತಿಪ್ರಿಯಳು ಸುಖಜೀವನ ಕಳೆಯ ತಕ್ಕವಳು ಪತಿಪತ್ನಿಯರು ಪ್ರೀತಿಯಿಂದ ಇರತಕ್ಕವರು ಆಗುವರು.

ಸಪ್ತಮಾಧಿಪತಿಯು ೨ ನೆಯ ಸ್ಥಾನದಲ್ಲಿದ್ದರೆ- ಐಶ್ವರ್ಯವಂತಳು ಧನಧಾನ್ಯ ಸಂಪತ್ ಸಮೃದ್ಧಿಯುಳ್ಳವಳು, ಉತ್ತಮ ವಾಹನ, ಸೇವಕರುಳ್ಳವಳು, ಸುಖಭೋಗಿಯು ಆಗುವಳು

ಸಪ್ತಮಾಧಿಪತಿಯು ೩ ನೆಯ ಸ್ಥಾನದಲ್ಲಿದ್ದರೆ- ಪತಿಯೊಡನೆ ಮನಸ್ತಾಪ ಮಾಡಿಕೊಳ್ಳತಕ್ಕವಳು, ಕಷ್ಟ ಜೀವಿಯು, ಸುಖಹೀನಳು, ದರಿದ್ರಳು, ವೈವಾಹಿಕ ಜೀವನವು ತೊಂದರೆಯುಳ್ಳವಳು ಆಗುವಳು.

ಸಪ್ತಮಾಧಿಪತಿಯು ಶುಭಗ್ರಹವಾಗಿದ್ದು ೪ ನೆಯ ಸ್ಥಾನದಲ್ಲಿದ್ದರೆ- ಬಹುಸುಖಭೋಗಿಯು, ಪತಿಪ್ರಿಯಳು, ವಿಲಾಸಿಯು, ವಸ್ತ್ರಾಭರಣ ಅಲಂಕಾರಯುತಳು ಆಗುವಳು ಪಾಪಗ್ರಹವಾಗಿದ್ದರೆ ದುಃಖಿಯಾಗುವಳು.

ಸಪ್ತಮಾಧಿಪತಿಯು ೫ ನೆಯ ಸ್ಥಾನದಲ್ಲಿದ್ದರೆ- ಪತಿಯೊಡನೆ ಸುಖ ಜೀವನ ಕಳೆಯತಕ್ಕವಳು, ಸುಖಭೋ ವಿಲಾಸಿಯು, ಶೀಘ್ರವಾಗಿ ವಿವಾಹವಾಗತಕ್ಕ ಯೋಗವುಳ್ಳವಳು, ಪುತ್ರವತಿಯು ಪುತ್ರರಿಂದ ಸುಖ ಸಂತೋಷ ಪಡೆಯತಕ್ಕವಳು ಐಶ್ವರ್ಯವಂತಳು ಸೌಭಾಗ್ಯಶಾಲಿಯು ಆಗುವಳು.

ಸಪ್ತಮಾಧಿಪತಿಯು ಶುಭಗ್ರಹವಾಗಿದ್ದು ೬ ನೆಯ ಸ್ಥಾನದಲ್ಲಿದ್ದರೆ- ಸೋದರಮಾವನ ಸಹಾಯದಿಂದ ಜೀವನದಲ್ಲಿ ಸುಖಪಡೆಯತಕ್ಕವಳಾಗುವಳು. ಪಾಪಗ್ರಹವಾಗಿದ್ದರೆ, ವಿವಾಹವು ತಡವಾಗಿ ಆಗುವುದು.

ಸಪ್ತಮಾಧಿಪತಿಯು ೭ ನೆಯ ಸ್ಥಾನದಲ್ಲಿದ್ದರೆ- ಸುಖ, ಸಂತೋಷವುಳ್ಳವಳು, ಪತಿಯಲ್ಲಿ ಅನುರಾಗವು. ಭೋಗ ವಿಷಯಗಳಲ್ಲಿ ಆಸಕ್ತಳು, ಧನ ಧಾನ್ಯ ಸಮೃದ್ಧಿಯುಳ್ಳವಳು ಆಗುವಳು.

ಸಪ್ತಮಾಧಿಪತಿಯು ೮ ನೆಯ ಸ್ಥಾನದಲ್ಲಿದ್ದರೆ- ದುಃಖಿಯು ಜಗಳಗಂಟಿಯು, ಚಿಂತಾಯುಕ್ತಳು, ಭಗ್ನಮನಸ್ಕಳು, ಪತಿಯೊಡನೆ ಮನಸ್ತಾಪ ಮಾಡಿಕೊಳ್ಳತಕ್ಕವಳು, ವೈವಾಹಿಕ ಜೀವನದಲ್ಲಿ ಕಷ್ಟವನ್ನು ಅನುಭವಿಸತಕ್ಕವಳು ಆಗುವಳು.

ಸಪ್ತಮಾಧಿಪತಿಯು ೯ ನೆಯ ಸ್ಥಾನದಲ್ಲಿದ್ದರೆ-ಭಾಗ್ಯವಂತಳು, ವಿವಾಹವಾದನಂತರ ಪತಿಗೆ ಭಾಗ್ಯೋದಯವನ್ನುಂಟುಮಾಡುವ ಯೋಗದವಳು ಸುಖಭೋಗಿಯು, ನಾನಾರೀತಿಯಲಾಭ ಹೊಂದತಕ್ಕವಳು ಆಗುವಳು.

ಸಪ್ತಮಾಧಿಪತಿಯು ೧೦ ನೆಯ ಸ್ಥಾನದಲ್ಲಿದ್ದರೆ-ಐಶ್ವರ್ಯವಂತಳು, ಭಾಗ್ಯಶಾಲಿಯು ಧನಧಾನ್ಯ ಸಮೃದ್ಧಿಯುಳ್ಳವಳು ಆಗುವಳು.

ಸಪ್ತಮಾಧಿಪತಿಯು ೧೧ ನೆಯ ಸ್ಥಾನದಲ್ಲಿದ್ದರೆ-ಸೌಭಾಗ್ಯವಂತಳು, ಬಹುಸುಖಭೋಗಿಯು ನಾನಾ ವಿಧ ಲಾಭ ಪಡೆಯತಕ್ಕವಳು. ಪತಿಪ್ರಿಯಳು ಪುತ್ರವತಿಯು ಆಗುವಳು.

ಸಪ್ತಮಾಧಿಪತಿಯು ೧೨ ನೆಯ ಸ್ಥಾನದಲ್ಲಿದ್ದರೆ- ದುರಾಚಾರಿಯು ದೌರ್ಭಾಗ್ಯವುಳ್ಳವಳು, ಕಷ್ಟ ಜೀವಿಯು, ದರಿದ್ರಳು, ಅಧಿಕಖರ್ಚು ಮಾಡತಕ್ಕವಳು, ಚಿಂತಾಯುಕ್ತಳು ಆಗುವಳು.

— ಅಷ್ಟಮಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ —

ಜನನಲಗ್ನ ಕುಂಡಲಿಯೊಳು ಅಷ್ಟಮಾಧಿಪತಿಯು ದುರ್ಬಲವಾಗಿದ್ದು ೧ ನೆಯ ಸ್ಥಾನದಲ್ಲಿದ್ದರೆ-ಆ ಜಾತಕಳು, ರೋಗಪೀಡೆಯುಳ್ಳವಳು, ಅಶಕ್ತಳು ಆಗುವಳು. ಅಷ್ಟಮಾಧಿಪತಿಯು ಲಗ್ನದಲ್ಲಿದ್ದು, ಬಲಾಢ್ಯನಿದ್ದರೆ-ಸದೃಢಳು ಆರೋಗ್ಯವಂತಳು ಆಗುವಳು.

ಅಷ್ಟಮಾಧಿಪತಿಯು ೨ ನೆಯ ಸ್ಥಾನದಲ್ಲಿದ್ದರೆ-ಸಾಂಪತ್ತಿಕ ಸ್ಥಿತಿಯನ್ನು ನಾಶಮಾಡತಕ್ಕವಳು, ದರಿದ್ರಳು ದುಃಖಿಯು ಆಗುವಳು. ಅಷ್ಟಮಾಧಿಪತಿಯು ಬಲಹೀನನಾಗಿದ್ದರೆ-ಕಳವು, ದರೋಡೆಗಳಿಂದ ಧನ ನಾಶಮಾಡಿಕೊಳ್ಳತಕ್ಕವಳು ದುರ್ಮರಣದ ಭೀತಿಯುಳ್ಳವಳು ಆಗುವಳು.

ಅಷ್ಟಮಾಧಿಪತಿಯು ಪಾಪಗ್ರಹವಾಗಿದ್ದು ೩ ನೆಯ ಸ್ಥಾನದಲ್ಲಿದ್ದರೆ-ಆಪ್ತೇಷ್ಟರೊಡನೆ ವಿರೋಧ ಸಾಗಿಸುವವಳು, ಅಕ್ಕ ತಂಗಿಯರೊಂದಿಗೆ ದ್ವೇಷ ಕಟ್ಟಿಕೊಳ್ಳತಕ್ಕವಳು, ದುಃಖಿಯು ಕಲಹ ಪ್ರಿಯಳು ಆಗುವಳು. ಅಷ್ಟಮ ಸ್ಥಾನವು ಕನ್ಯಾಲಗ್ನವಾಗಿದ್ದರೆ-ಆಜಾತಕಳು ಬಂಧುಜನಮಾನ್ಯಳು ಸಮಾಧಾನಿಯು ಆಗುವಳು.

ಅಷ್ಟಮಾಧಿಪತಿಯು ೪ ನೆಯ ಸ್ಥಾನದಲ್ಲಿದ್ದರೆ-ಸುಖಹೀನಳು, ದರಿದ್ರಳು ಪಾಪಿಷ್ಟಳು. ದುರಾಚಾರಿಯು ಆಗುವಳು. ಅಷ್ಟಮಾಧಿಪತಿಯು ರವಿಯು ಆಗಿದ್ದು ೪ನೆಯ ಸ್ಥಾನದಲ್ಲಿದ್ದರೆ–ಹೊಲ ಮನೆ, ಪ್ಲಾಟು ಮುಂತಾದ ಸ್ಥಾವರ ಆಸ್ತಿ ಸಂಪಾದಿಸತಕ್ಕವಳು. ಉತ್ತಮ ವಸ್ತುವಾಹನಗಳ ಸಂಗ್ರಹ ಮಾಡತಕ್ಕವಳು ಆಗುವಳು.

ಅಷ್ಟಮಾಧಿಪತಿಯು ೫ ನೆಯ ಸ್ಥಾನದಲ್ಲಿದ್ದರೆ—ಮಂದಬುದ್ಧಿಯುಳ್ಳವಳು, ಹೆಚ್ಚು ವಿದ್ಯಾಭ್ಯಾಸ ಮಾಡದವಳು, ನಷ್ಟ ಸಂತತಿಯುಳ್ಳವಳು ದುಃಖಿಯು ಆಗುವಳು ಅಷ್ಟಮಸ್ಥಾನವು ಸಿಂಹ, ಕನ್ಯಾ, ಕುಂಭ ರಾಶಿಗಳಾಗಿದ್ದರೆ—ಆ ಸ್ತ್ರೀಯಳು ಬುದ್ಧಿವಂತಳು, ವಿದ್ಯಾಭ್ಯಾಸ ಮಾಡತಕ್ಕವಳು ಆಗುವಳು.

ಅಷ್ಟಮಾಧಿಪತಿಯು ೬ ನೆಯ ಸ್ಥಾನದಲ್ಲಿದ್ದರೆ ಅಶಕ್ತಳು, ದೇಹಪೀಡೆಯುಳ್ಳವಳು, ದರಿದ್ರಳು, ದುಃಖಿಯು ಆಗುವಳು, ಅಷ್ಟಮಾಧಿಪತಿಯು ರವಿ ಆಗಿದ್ದು ೬ ನೆಯ ಸ್ಥಾನದಲ್ಲಿದ್ದರೆ ಪಿತ್ತ, ಉಷ್ಣವಿಕಾರ ಪೀಡೆಯುಳ್ಳವಳು, ಚಂದ್ರನಾಗಿದ್ದರೆ-ಕೆಮ್ಮು, ದಮ್ಮು, ಮುಂತಾದ ಕಫ ವಿಕಾರದ ರೋಗವುಳ್ಳವಳು, ಮಂಗಳನಿದ್ದರೆ-ಶಸ್ತ್ರಕ್ರಿಯೆಯಿಂದ ಗುಣವಾಗತಕ್ಕ ರೋಗಪೀಡಿತಳು ಬುಧನಿದ್ದರೆ-ಹಾವು, ಚೇಳು, ಇಲಿ ಮುಂತಾದ ವಿಷ ಜಂತುಗಳ ಭಯವುಳ್ಳವಳು, ಗುರು ಇದ್ದರೆ-ಅನ ರೋಗ್ಯಳು. ಶುಕ್ರನಿದ್ದರೆ-ರಜಸ್ವಲಾ (ಮಾಸಿಕ) ದೋಷವುಳ್ಳವಳು, ಪ್ರಸೂತಿ ರೋಗಪಿಡಿತಳು, ಶನಿ ಇದ್ದರೆ—ವಾತರೋಗ ವಿಕಾರವುಳ್ಳವಳು ಆಗುವಳು.

ಅಷ್ಟಮಾಧಿಪತಿಯು ೭ ನೆಯ ಸ್ಥಾನದಲ್ಲಿದ್ದರೆ-ಗುರುಹಿರಿಯರಲ್ಲಿ ಭಕ್ತಿಯುಳ್ಳವಳು, ಪುರಾಣ, ಪುಣ್ಯಕಥಾಶ್ರವಣ ಮಾಡುವ ಅಭಿರುಚಿಯುಳ್ಳವಳು ಧಾರ್ಮಿಕ ಕಾರ್ಯಗಳಲ್ಲಿ ಶ್ರದ್ಧೆಯುಳ್ಳವಳು ಆಗುವಳು.

ಅಷ್ಟಮಾಧಿಪತಿಯು ೮ ನೆಯ ಸ್ಥಾನದಲ್ಲಿದ್ದರೆ-ಆರೋಗ್ಯವಂತಳು ವೃದ್ಧಳು, ಸಾಧಾರಣ ಧನವಂತಳು, ಪಶುವಾಹನ ಸಂಪತ್ತುಳ್ಳವಳು ಆಗುವಳು.

ಅಷ್ಟಮಾಧಿಪತಿಯು ೯ ನೆಯ ಸ್ಥಾನದಲ್ಲಿದ್ದರೆ-ಧಾರ್ಮಿಕ ಪುಣ್ಯಕ್ಷೇತ್ರಗಳನ್ನು ನೋಡತಕ್ಕವಳು. ಸಾಧುಸತ್ಪುರುಷರಲ್ಲಿ ಭಕ್ತಿಯುಳ್ಳವಳು. ಪರೋಪಕಾರಿಯು ಆಗುವಳು.

ಅಷ್ಟಮಾಧಿಪತಿಯು ೧೦ ನೆಯ ಸ್ಥಾನದಲ್ಲಿದ್ದರೆ-ದರಿದ್ರಳು, ಪರಿಶ್ರಮ ವಹಿಸಿ ಕೆಲಸ ಮಾಡತಕ್ಕವಳು, ಸ್ವತಃ ಸಾಹಸದಿಂದ ಧನ ಸಂಪಾದನೆ ಮಾಡುವ ವಿಚಾರವುಳ್ಳವಳು ಆಗುವಳು. ಅಷ್ಟಮಾಧಿಪತಿಯು ಮಂಗಳ, ಬುಧ, ಶನಿ ಆಗಿದ್ದರೆ-ಸ್ತ್ರೀಯರು ನೌಕರಿಯಿಂದ ಉಪಜೀವನ ಸಾಗಿಸುವರು.

ಅಷ್ಟಮಾಧಿಪತಿಯು ೧೧ ನೆಯ ಸ್ಥಾನದಲ್ಲಿದ್ದರೆ-ಧನ, ಕನಕ, ಸಂಪತ ಸಮೃದ್ಧಿಯುಳ್ಳವಳು. ಸಾಧಾರಣ ಸುಖಭೋಗಿಯು ಪತಿಪ್ರಿಯಳು ಆಗುವಳು

ಅಷ್ಟಮಾಧಿಪತಿಯು ೧೨ ನೆಯ ಸ್ಥಾನದಲ್ಲಿದ್ದರೆ ದರಿದ್ರಳು, ನೀಚಳು ಪಾಪಿಷ್ಠಳು ದುರಾಚಾರಿಯು, ದುಃಖಿಯು ಸುಖಹೀನಳು, ಜಗಳಗಂಟಿಯು ಧನನಾಶ ಹೊಂದತಕ್ಕವಳು.

ನವಮಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ

ಜನನ ಲಗ್ನ ಕುಂಡಲಿಯೊಳು ನವಮಾಧಿಪತಿಯು ೧ನೆಯ ಸ್ಥಾನದಲ್ಲಿದ್ದರೆ–ಅಜಾತಕಳು ಸದ್ಗುಣಿಯು, ಸುಶೀಲಳು, ಬಂಧುಜನಮಾನ್ಯಳು ಪ್ರಾಮಾಣಿಕಳು, ಸತ್ಯವಂತಳು, ಧನ, ಧಾನ್ಯ ಕನಕ, ಪಶು ಸಂಪತ್ತಿಯುಳ್ಳವಳು ಭಾಗ್ಯವಂತಳು, ಕೀರ್ತಿವಂತಳು, ಐಶ್ವರ್ಯವಂತಳು, ಸುಖಭೋಗಿಯು ಸದೃಢಳು ಆಗುವಳು.

ನವಮಾಧಿಪತಿಯು ೨ ನೆಯ ಸ್ಥಾನದಲ್ಲಿದ್ದರೆ–ಸಿರಿ ಸಂಪತ್ತುಳ್ಳವಳು ದಾನ ಧರ್ಮ, ಪರೋಪಕಾರ ಮಾಡತಕ್ಕವಳು, ಕೀರ್ತಿಶಾಲಿಯು, ಗಂಭೀರಳು, ಮಿತವಾಗಿಯೂ, ಹಿತವಾಗಿಯೂ ಮಾತಾಡತಕ್ಕವಳು ಅಂತಃಕರಣಿಯು ಆಗುವಳು.

ನವಮಾಧಿಪತಿಯು ೩ ನೆಯ ಸ್ಥಾನದಲ್ಲಿದ್ದರೆ ತೀರ್ಥಯಾತ್ರಾ ಮಾಡಬೇಕೆಂಬ ಲವಲವಿಕೆಯುಳ್ಳವಳು, ಅಪ್ತೇಷ್ಟರೊಡನೆ ಪ್ರೀತಿಯಿಂದ ಇರುತಕ್ಕವಳು ಸ್ವಜನರಲ್ಲಿ ಶ್ರೇಷ್ಠಳು ಆಗುವಳು.

ನವಮಾಧಿಪತಿಯು ಶುಭಗ್ರಹವಾಗಿದ್ದು ೪ ನೆಯ ಸ್ಥಾನದಲ್ಲಿದ್ದರೆ–ತಾಯಿ ತಂದೆಗಳಿಂದ ಸೌಖ್ಯ ಲಾಭ ಪಡೆಯುತಕ್ಕವಳಾಗುವಳು ಪಾಪಗ್ರಹವಾಗಿದ್ದರೆ–ಮಾತಾ ಪಿತೃಗಳಿಂದ ಸುಖ ಸಂತೋಷ ದೊರೆಯಲಾರದು.

ನವಮಾಧಿಪತಿಯು ೫ ನೆಯ ಸ್ಥಾನದಲ್ಲಿದ್ದರೆ ವಿದ್ಯಾವಂತಳು ಧರ್ಮಶಾಸ್ತ್ರಗಳನ್ನು ಬಲ್ಲವಳು, ಸುಶೀಲಳು, ಪುತ್ರವತಿಯು, ಪುಣ್ಯಶೀಲಳು, ತೇಜಸ್ವಿಯು ಆಗುವಳು.

ನವಮಾಧಿ ಪತಿಯು ೬ ನೆಯ ಸ್ಥಾನದಲ್ಲಿದ್ದರೆ–ವಿದ್ಯಾರಹಿತಳು ಮೂರ್ಖಳು, ವಿರೋಧಿಗಳ ಪೀಡೆಗೊಳಗಾಗತಕ್ಕವಳು, ದುಃಖಿಯು ಧನನಾಶ ಹೊಂದತಕ್ಕವಳು ಆಗುವಳು.

ನವಮಾಧಿಪತಿಯು ೭ ನೇಯ ಸ್ಥಾನದಲ್ಲಿದ್ದರೆ–ತೀವ್ರ ವಿವಾಹವಾಗುವ ಯೋಗವುಳ್ಳವಳು ಪತಿಪ್ರಿಯಳು, ಬಹು ಸುಖಭೋಗಿಯು, ವಿವಾಹನಂತರ ಪತಿಗೆ ಭಾಗ್ಯೋದಯ ವನ್ನುಂಟು ಮಾಡತಕ್ಕವಳು, ವಿಲಾಸಿಯು ಧನವಂತಳು ವಸ್ತ್ರಾಲಂಕಾರ ಮಣಿಭೂಷಿತಳು ಆಗುವಳು.

ನವಮಾಧಿಪತಿಯು ೮ ನೇಯ ಸ್ಥಾನದಲ್ಲಿದ್ದರೆ–ದರಿದ್ರಳು, ದುಃಖಿಯು ಕಷ್ಟದಿಂದ ಜೀವನ ಸಾಗಿಸತಕ್ಕವಳು ಆಗುವಳು, ನವಮಾಧಿಪತಿಯು ಪಾಪ ಗ್ರಹಗಳಾಗಿದ್ದರೆ–ಪರಿಶ್ರಮ ಪಟ್ಟು ಜೀವನ ಸಾಗಿಸತಕ್ಕವಳು ಸ್ವಾವಲಂಬ ನದಿಂದ ಜೀವಿಸುವವಳು ಆಗುವಳು.

ನವಮಾಧಿಪತಿಯು ೯ ನೇಯ ಸ್ಥಾನದಲ್ಲಿದ್ದರೆ ಪುತ್ರವತಿಯು ಧನ, ಧಾನ್ಯ, ಕನಕ ವಸ್ತ್ರ, ವಾಹನ ಸಂಪತ್ ಸಮೃದ್ಧಿಯುಳ್ಳವಳು, ಬಹು ಸುಖ ಭೋಗಿಯು, ಪುತ್ರವತಿಯು, ಪರೋಪಕಾರಿಯು, ಕೀರ್ತಿವಂತಳು, ಪುಣ್ಯಾತ್ಮಳು, ಧಾರ್ಮಿಕಳು. ಗುರುಹಿರಿಯರಲ್ಲಿ ಭಕ್ತಿಯುಳ್ಳವಳು ಆಗುವಳು.

ನವಮಾಧಿಪತಿಯು ೧೦ ನೇಯ ಸ್ಥಾನದಲ್ಲಿದ್ದರೆ–ಸಾರ್ವಜನಿಕ ಕೆಲಸ ಗಳಲ್ಲಿ ಪ್ರತಿಷ್ಠೆಪಡೆಯ ತಕ್ಕವಳು ಉತ್ತಮ ಭಾಷಣಕಾರಳು, ಬುದ್ಧಿವಂತಳು, ಧನಧಾನ್ಯ ಸಂಪತ್ತುಳ್ಳವಳು, ಪುತ್ರವತಿಯು, ಸುಖವಂತಳು, ಸರ್ವಜನಮಾನ್ಯಳು, ಹೆಸರುವಾಸಿಯಾಗತಕ್ಕವಳು ಆಗುವಳು

ನವಮಾಧಿಪತಿಯು ೧೧ ನೇಯ ಸ್ಥಾನದಲ್ಲಿದ್ದರೆ—ನಾನಾರೀತಿಯಿಂದ ಧನಲಾಭ ಹೊಂದತಕ್ಕವಳು ಸುಖಭೋಗಿಯು, ಸೌಭಾಗ್ಯವಂತಳು, ಆಯುಷ್ಯವಂತಳು ಆಗುವಳು.

ನವಮಾಧಿಪತಿಯು ೧೨ ನೆಯ ಸ್ಥಾನದಲ್ಲಿದ್ದರೆ ಬಹಳ ಖರ್ಚು ಮಾಡ ತಕ್ಕವಳು ಪ್ರವಾಸದಲ್ಲಿ ಪ್ರೀತಿಯುಳ್ಳವಳು, ತೀರ್ಥಯಾತ್ರಾ ಮಾಡತಕ್ಕವಳು ಧನನಾಶ ಮಾಡತಕ್ಕವಳು ಆಗುವಳು.

ದಶಮಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ

ಜನನ ಲಗ್ನ ಕುಂಡಲಿಯೊಳು ದಶಮಾಧಿಪತಿಯು ೧ ನೇಯ ಸ್ಥಾನದಲ್ಲಿದ್ದರೆ– ಆ ಜಾತಕಳು ಭಾಗ್ಯವಂತಳು, ಸುಖಭೋಗಿಯು ಪುತ್ರವತಿಯು ಧನ ಧಾನ್ಯ ಪಶು, ವಾಹನ ಸಂಪತ್ತುಳ್ಳವಳು ಆಗುವಳು.

ದಶಮಾಧಿಪತಿಯು ೨ನೆಯ ಸ್ಥಾನದಲ್ಲಿದ್ದರೆ—ಶ್ರೀಮಂತಳು, ಧ
ಧಾನ್ಯ ಸಮೃದ್ಧಿಯುಳ್ಳವಳು, ವಸ್ತ್ರಾಲಂಕಾರ ವಣಿವಿಭೂಷಿತಳು, ದೊಡ
ಕುಟುಂಬಸ್ಥಳು, ಪೌತ್ರರುಳ್ಳವಳು ಆಗುವಳು.

ದಶಮಾಧಿಪತಿಯು ೩ನೆಯ ಸ್ಥಾನದಲ್ಲಿದ್ದರೆ – ಮನೆಯ ಕೆಲಸಗಳ
ಜಾಣಳು, ಚತುರಳು, ಪತಿಪ್ರಿಯಳು, ಪುತ್ರವತಿಯು, ಅಡಿಗೆಯ ಕೆಲಸ
ಮಕ್ಕಳ ಪಾಲನೆಗಳಲ್ಲಿ ಕುಶಲಳು ಆಗುವಳು.

ದಶಮಾಧಿಪತಿಯು ೪ ನೆಯ ಸ್ಥಾನದಲ್ಲಿದ್ದರೆ – ಸುಖಹೀನಳು, ದುಃಖಿ
ಯು, ಬಂಧುಜನ ವಿರೋಧಿಯು ಆಗುವಳು.

ದಶಮಾಧಿಪತಿಯು ೫ ನೆಯ ಸ್ಥಾನದಲ್ಲಿದ್ದರೆ-ವಿದ್ಯಾವಂತಳು, ಜಾಣಳ
ಧರ್ಮ ಶಾಸ್ತ್ರಗಳ ರಹಸ್ಯವನ್ನು ತಿಳಿದವಳು, ಸದಾಚಾರಿಯು, ಸುಶೀಲಳು
ಸೂಕ್ಷ್ಮಬುದ್ಧಿಯುಳ್ಳವಳು ಆಗುವಳು.

ದಶಮಾಧಿಪತಿಯು ೬ ನೆಯ ಸ್ಥಾನದಲ್ಲಿದ್ದರೆ – ಪಿತೃಸೌಖ್ಯ ಪಡೆಯು
ವಳು ದುಃಖಿಯು ಶತ್ರುಗಳನ್ನು ಜಯಿಸತಕ್ಕವಳು ಆಗುವಳು.

ದಶಮಾಧಿಪತಿಯು ೭ ನೆಯ ಸ್ಥಾನದಲ್ಲಿದ್ದರೆ—ಪತಿಪ್ರಿಯಳು, ಗುರ
ಹಿರಿಯರಲ್ಲಿ ಭಕ್ತಿಯುಳ್ಳವಳ, ಬಹುಸುಖಭೋಗಿಯು, ಪುತ್ರ ಪೌತ್ರರು
ವಳು, ಮಾನವಂತಳು, ಜಾಣಳು ಆಗುವಳು.

ದಶಮಾಧಿಪತಿಯು ೮ ನೆಯ ಸ್ಥಾನದಲ್ಲಿದ್ದರೆ – ದುಃಖಿಯು, ದರಿದ್ರಳು
ಕಷ್ಟದಿಂದ ಜೀವನ ಸಾಗಿಸತಕ್ಕವಳು. ಆಪ್ತೇಷ್ಟರಲ್ಲಿ ವಿರೋಧವುಳ್ಳವಳು, ಅ
ಶುಭಯೋಗದವಳು ಆಗುವಳು, ಅಷ್ಟಮಸ್ಥಾನವು ಸಿಂಹ, ತುಲಾ, ರಾಶಿಗಳ
ಗಿದ್ದರೆ-ಸಾಧಾರಣ ಸುಖಿಯು ಶುಭಯೋಗದವಳು ಆಗುವಳು.

ದಶಮಾಧಿಪತಿಯು ೯ ನೆಯ ಸ್ಥಾನದಲ್ಲಿದ್ದರೆ ಸೌಭಾಗ್ಯವಂತಳು
ರಾಜ ಸುಖಭೋಗಿಯು ಪುತ್ರ ಪೌತ್ರರುಳ್ಳವಳು, ಧನ ಕನಕ, ವಸ್ತುವಾಹನ
ಸಂಪತ್ತುಳ್ಳವಳು, ಗುರುಹಿರಿಯರಲ್ಲಿ ಭಕ್ತಿಯುಳ್ಳವಳು, ಧಾರ್ಮಿಕ ಕಾರ್ಯ
ಗಳಲ್ಲಿ ಶ್ರದ್ಧೆಯುಳ್ಳವಳು, ಪರೋಪಕಾರಿಯು, ಪುಣ್ಯಶೀಲಳು ಆಗುವಳು.

ದಶಮಾಧಿಪತಿಯು ೧೦ ನೆಯ ಸ್ಥಾನದಲ್ಲಿದ್ದರೆ ರಾಜರಿಗೆ ಸಮಾನ
ವಾದ ಸುಖಭೋಗ ಪಡೆಯತಕ್ಕವಳು, ಐಶ್ವರ್ಯವಂತಳು, ಅನೇಕ ಜನ
ಸೇವಕರುಳ್ಳವಳು, ಪುತ್ರವತಿಯು ಆಗುವಳು.

ದಶಮಾಧಿಪತಿಯು ೧೧ನೆಯ ಸ್ಥಾನದಲ್ಲಿದ್ದರೆ-ನಾನಾ ರೀತಿಯಿಂದ ಧನಲಾಭ ಹೊಂದತಕ್ಕವಳು ಸುಖವಂತಳು, ಮಾನವಂತಳು, ಪುತ್ರವತಿಯು, ದೀರ್ಘಾಯುಃಷ್ಯವುಳ್ಳವಳು ಆಗುವಳು.

ದಶಮಾಧಿಪತಿಯು ೧೨ನೆಯ ಸ್ಥಾನದಲ್ಲಿದ್ದರೆ-ತವರುಮನೆಯ ಸುಖ ಪಡೆಯುದವಳು ಪಿತ್ರಾರ್ಜಿತ ಆಸ್ತಿಯ ಲಾಭ ಒಗದವಳು ಧನನಾಶ ಮಾಡಿಕೊಳ್ಳತಕ್ಕವಳು ಆಗುವಳು.

– ಏಕಾದಶ ಸ್ಥಾನಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ –

ಜನನ ಲಗ್ನಕುಂಡಲಿಯೊಳು ಏಕಾದಶಾಧಿಪತಿಯು ೧ನೆಯ ಸ್ಥಾನದಲ್ಲಿದ್ದರೆ-ಸ್ತ್ರೀಯುಳು ಆರೋಗ್ಯವಂತಳು, ಸದೃಢಳು ಬುದ್ಧಿವಂತಳು, ವಿದ್ಯಾವಂತಳು ಪುತ್ರ ಪೌತ್ರರಿಂದ ಸೌಖ್ಯ ಹೊಂದತಕ್ಕವಳು ದೀರ್ಘಾಯುಷಿಯು ಸುಖಭೋಗಿಯು ಆಗುವಳು.

ಏಕಾದಶಾಧಿಪತಿಯು ೨ನೆಯ ಸ್ಥಾನದಲ್ಲಿದ್ದರೆ-ಶ್ರೀಮಂತನಾದ ಪತಿಯನ್ನು ಪಡೆಯತಕ್ಕವಳು, ಕೃಪಣಳು, ಪತಿಪ್ರಿಯಳು, ಆರೋಗ್ಯಶಾಲಿಯು, ಧನಧಾನ್ಯ ಸಮೃದ್ಧಿಯುಳ್ಳವಳು, ಸತ್ಯವಂತಳು ಆಗುವಳು.

ಏಕಾದಶಾಧಿಪತಿಯು ೩ನೆಯ ಸ್ಥಾನದಲ್ಲಿದ್ದರೆ-ಸಾಧಾರಣ ಧನವಂತಳು, ಸುಖವಂತಳು ಆಗುವಳು. ಏಕಾದಶಾಧಿಪತಿಯು ಪಾಪಗ್ರಹವಾಗಿದ್ದರೆ-ಆಪ್ತೇಷ್ಟರಲ್ಲಿ ವಿರೋಧಿಯು, ದುಃಖಿಯು ಆಗುವಳು.

ಏಕಾದಶಾಧಿಪತಿಯು ೪ನೆಯ ಸ್ಥಾನದಲ್ಲಿದ್ದರೆ-ಹೊಲ, ಮನೆ, ಸ್ಥಾವರ ಆಸ್ತಿಗಳಿಂದ ಧನಲಾಭ ಹೊಂದತಕ್ಕವಳು, ಪುತ್ರವತಿಯು ಸುಖಭೋಗಿಯು ಆಗುವಳು. ಏಕಾದಶಾಧಿಪತಿಯು ಶನಿಯಾಗಿದ್ದರೆ—ಗಂಡು ಸಂತಾನ ಕಡಿಮೆಯಾಗುವವು.

ಏಕಾದಶಾಧಿಪತಿಯು ೫ನೆಯ ಸ್ಥಾನದಲ್ಲಿದ್ದರೆ-ವಿದ್ಯಾವಂತಳು, ಜಾಣಳು, ಜ್ಞಾನ ಸಂಪನ್ನಳು ಧರ್ಮಶಾಸ್ತ್ರಗಳ ವಿಚಾರಬಲ್ಲವಳು, ಪುತ್ರವತಿಯು, ಧನಧಾನ್ಯ ಸಮೃದ್ಧಿಯುಳ್ಳವಳು, ಸುಖಭೋಗಿಯು ಆಗುವಳು.

ಏಕಾದಶಾಧಿಪತಿಯು ೬ನೆಯ ಸ್ಥಾನದಲ್ಲಿದ್ದರೆ-ರೋಗಪೀಡಿತಳು, ಧನನಾಶಮಾಡಿಕೊಳ್ಳತಕ್ಕವಳು, ದುಃಖಿಯು. ಕಳವು ದರೋಡೆಗಳಿಂದ ಸಂಪತ್ತು

ಹಾನಿಯಾಗುವ ಯೋಗದವಳು, ಹೈನದ ಉದ್ಯೋಗದಿಂದ ಧನ ಸಂಪಾದನೆ ಮಾಡತಕ್ಕವಳು ಆಗುವಳು.

ಏಕಾದಶಾಧಿಪತಿಯು ೭ ನೆಯ ಸ್ಥಾನದಲ್ಲಿದ್ದರೆ— ಪತಿಪ್ರಿಯಳು, ಸುಖ ಭೋಗಿಯು, ಧನವಂತಳು, ಪುತ್ರವತಿಯು, ಸದಾಚಾರಿಯು, ನಾನಾ ಪ್ರಕಾರ ದಿಂದ ಲಾಭ ಹೊಂದತಕ್ಕವಳು ಆಗುವಳು.

ಏಕಾದಶಾಧಿಪತಿಯು ೮ ನೆಯ ಸ್ಥಾನದಲ್ಲಿದ್ದರೆ ನಾನಾರೀತಿಯ ಅಪ ಘಾತಗಳು, ಕಂಟಕ, ಗಂಡಾಂತರಗಳನ್ನು ಅನುಭೋಗಿಸತಕ್ಕವಳು, ಕೋರ್ಟು, ಕಚೇರಿ ಮುಂತಾದ ಸರಕಾರಿ ಕೆಲಸಗಳಿಗಾಗಿ ಧನ ಹಾನಿ ಮಾಡಿಕೊಳ್ಳತಕ್ಕ ವಳು, ಪರರಿಗೆ ಜಾಮೀನ ಆಗಿ ಕಷ್ಟಕ್ಕೀಡಾಗತಕ್ಕವಳು ಆಗುವಳು.

ಏಕಾದಶಾಧಿಪತಿಯು ೯ನೆಯ ಸ್ಥಾನದಲ್ಲಿದ್ದರೆ-ತೀರ್ಥಯಾತ್ರೆ,ಸಂದರ್ಶನ ಮಾಡತಕ್ಕವಳು ಗುರುಗಳು ಶಿವಯೋಗಿಗಳು,ಸತ್ಪುರುಷರಲ್ಲಿ ಭಕ್ತಿಯುಳ್ಳವಳು, ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿಯುಳ್ಳವಳು, ದಾನ, ಧರ್ಮ, ಪರೋಪಕಾರಗಳನ್ನು ಮಾಡತಕ್ಕವಳು, ಕೀರ್ತಿವಂತಳು, ಪುಣ್ಯಾತ್ಮಳು, ಪತಿ- ವ್ರತೆಯು, ಧರ್ಮಶಾಸ್ತ್ರಗಳನ್ನು ಬಲ್ಲವಳು ಆಗುವಳು.

ಏಕಾದಶಾಧಿಪತಿಯು ೧೦ನೆಯ ಸ್ಥಾನದಲ್ಲಿದ್ದರೆ— ಸಮಾಜದ ಮುಖಂ- ಡಳು, ಬುದ್ಧಿವಂತಳು, ಸಮಾಧಾನ ಚಿತ್ತಳು, ಅಕಸ್ಮಾತ್ ರಾಜಕಾರಣದಲ್ಲಿ ಹೆಸರುವಾಸಿಯಾಗತಕ್ಕವಳು, ರಾಜಕೀಯ ಮುಂದಾಳುವು ಆಗುವಳು.

ಏಕಾದಶಾಧಿಪತಿಯು ೧೧ ನೆಯ ಸ್ಥಾನದಲ್ಲಿದ್ದರೆ— ಸುಖ ಸಮೃದ್ಧಿಯು ಳ್ಳವಳು, ಧನ, ಧಾನ್ಯ, ವಸ್ತ್ರಾಲಂಕಾರ, ಮಣಿ, ಕನಕ, ಇತ್ಯಾದಿ ಸಂಪತ್ತುಳ್ಳ ವಳು, ಪುತ್ರ ಪೌತ್ರರುಳ್ಳವಳು, ಐಶ್ವರ್ಯವಂತಳು, ದೊಡ್ಡ ಕುಟುಂಬಸ್ಥಳು.

ನಾನಾ ರೀತಿಯಾಗಿ ೧೨ ನೆಯ ಸ್ಥಾನದಲ್ಲಿದ್ದರೆ-ವ್ಯರ್ಥವಾಗಿ ಧನ ನಾಶ ಮಾಡತಕ್ಕವಳು, ಕಳವು, ದರೋಡೆ, ಸೆರೆಮನೆವಾಸ, ಕೋರ್ಟು. ಕಚೇರಿ, ಕೆಲಸಗಳು, ಅನ್ಯರಿಗೆ ಜಾಮೀನು ಆಗುವದು ಇತ್ಯಾದಿ ಕಾರಣಗಳಿಂದ ಧನ ಅಪವ್ಯಯದ ಯೋಗವುಳ್ಳವಳು, ದುಃಖಿಯೂ ಆಗುವಳು.

— ದ್ವಾದಶಾಧಿಪತಿಯು ೧೨ ಸ್ಥಾನಗಳಲ್ಲಿ ಇರುವ ಫಲ—

ದ್ವಾದಶಾಧಿಪತಿಯು ೧ ನೆಯ ಸ್ಥಾನದಲ್ಲಿದ್ದರೆ— ಪ್ರವಾಹದ ಜೀವನದ ಬಹುದಿವಸಗಳಲ್ಲಿ ಕಳೆಯತಕ್ಕವಳು, ಗಂಭೀರಳು, ಮಿತವಾಗಿ ಮಾತಾಡತಕ್ಕವಳು, ಜನ್ಮಸ್ಥಳದಿಂದ ಬಹುದೂರದಲ್ಲಿ ವಾಸವಾಗಿರತಕ್ಕವಳು ಆಗುವಳು.

ದ್ವಾದಶಾಧಿಪತಿಯು ೨ ನೆಯ ಸ್ಥಾನದಲ್ಲಿದ್ದರೆ— ವಿಶೇಷ ಖರ್ಚು ಮಾಡತಕ್ಕವಳು, ಸಾಧಾರಣ ಧನವಂತಳು, ಸುಖಿಯು ಆಗುವಳು.

ದ್ವಾದಶಾಧಿಪತಿಯು ಪಾಪಗ್ರಹವಾಗಿದ್ದು ೩ ನೆಯ ಸ್ಥಾನದಲ್ಲಿದ್ದರೆ— ಆಪ್ತೇಷ್ಟರನ್ನು ದ್ವೇಷಿಸುವವಳು, ಬಂಧು ಭಗಿನಿಯರಿಂದ ದೂರ ಇರತಕ್ಕವಳು, ಪಾಪಿಯು, ಕಷ್ಟಜೀವಿಯು ಆಗುವಳು, ಶುಭಗ್ರಹವಾಗಿದ್ದರೆ— ಸರ್ವರೊಡನೆ ಪ್ರೀತಿಯಿಂದ ವರ್ತಿಸತಕ್ಕವಳು, ಸುಖಿಯು ಆಗುವಳು.

ದ್ವಾದಶಾಧಿಪತಿಯು ೪ ನೆಯ ಸ್ಥಾನದಲ್ಲಿದ್ದರೆ—ಹೊಲ, ಮನೆ ಮುಂತಾದ ಸ್ಥಾವರ ಆಸ್ತಿ ಕಳೆದುಕೊಳ್ಳತಕ್ಕವಳು ಹಾಗೂ ಸ್ಥಾವರ ಆಸ್ತಿ ನಿರುಪಯೋಗಿ ಆಗಿ ಲಾಭ ದೊರೆಯದಿರಬಹುದು, ಸುಖಹೀನಳು ಆಗುವಳು.

ದ್ವಾದಶಾಧಿಪತಿಯು ೫ ನೆಯ ಸ್ಥಾನದಲ್ಲಿದ್ದರೆ— ಸುಖಹೀನಳು, ನಷ್ಟಸಂತತಿಯುವಳು, ಮಕ್ಕಳಿಂದ ದುಃಖಹೊಂದತಕ್ಕವಳು ಆಗುವಳು.

ದ್ವಾದಶಾಧಿಪತಿಯು ೬ ನೆಯ ಸ್ಥಾನದಲ್ಲಿದ್ದರೆ ಚೋರಭಯವುಳ್ಳವಳು, ವಿರೋಧಿಗಳಿಂದ ದುಃಖ ಹೊಂದತಕ್ಕವಳು, ರೋಗ ಪೀಡೆಯುಳ್ಳವಳು, ಅನೇಕ ಬಗೆಯ ವಿಪತ್ತುಗಳನ್ನು ಅನುಭವಿಸತಕ್ಕವಳು, ಅಶಕ್ತಳು ಆಗುವಳು.

ದ್ವಾದಶಾಧಿಪತಿಯು ೭ ನೆಯ ಸ್ಥಾನದಲ್ಲಿದ್ದರೆ— ತೀರ್ಥಯಾತ್ರಾ, ಪುಣ್ಯಕ್ಷೇತ್ರಗಳನ್ನು ನೋಡಲು ಧನ ಖರ್ಚು ಮಾಡತಕ್ಕವಳು, ಬಹುದೂರದ ಪ್ರವಾಸ ಮಾಡತಕ್ಕವಳು, ಕಾಮುಕಳು, ವಿಲಾಸಿಯು ವಿಶೇಷವಾದ ವಿಷಯವಾಸನೆಯುಳ್ಳವಳು ಆಗುವಳು.

ದ್ವಾದಶಾಧಿಪತಿಯು ೮ ನೆಯ ಸ್ಥಾನದಲ್ಲಿದ್ದರೆ— ಸಾಹಸಿ ಸ್ವಭಾವದವಳು, ಎಲ್ಲ ಕೆಲಸಗಳನ್ನು ದಕ್ಷತೆಯಿಂದ ಮಾಡತಕ್ಕವಳು, ಅಶಕ್ತಳು, ಪರಿ

ಶ್ರಮವಹಿಸಿ ಕೆಲಸ ಮಾಡತಕ್ಕವಳು, ದುರಾಚಾರಿಯು, ಪಾಪಿಷ್ಠಳು ಆಗು ವಳು.

ದ್ವಾದಶಾಧಿಪತಿಯು ೯ ನೆಯ ಸ್ಥಾನದಲ್ಲಿದ್ದರೆ-ಜೀವನದ ಬಹಳ ದಿವಸ ಗಳನ್ನು ಪ್ರವಾಸದಲ್ಲಿ ಕಳೆಯುತಕ್ಕವಳು, ಪ್ರೇಕ್ಷಣೀಯ ಸ್ಥಳ ತೀರ್ಥಕ್ಷೇತ್ರಗಳನ್ನು ನೋಡತಕ್ಕವಳು, ಸಂತೋಷ ಚಿತ್ತಳು, ಬುದ್ಧಿವಂತಳು.

ದ್ವಾದಶಾದಿಪತಿಯು ೧೦ನೆಯ ಸ್ಥಾನದಲ್ಲಿದ್ದರೆ ಸಮಾಜದಲ್ಲಿ ಮುಂದಾ ಳುವ ಸ್ತ್ರೀ ಕುಲಶ್ರೇಷ್ಠಳು, ಬುದ್ಧಿವಂತಳು, ಸಾಮಾಜಿಕ, ಧಾರ್ಮಿಕ ಕೆಲಸ ಗಳನ್ನು ಆಸ್ಥೆಯಿಂದ ಮಾಡತಕ್ಕವಳು, ಕೀರ್ತಿವಂತಳು ಆಗುವಳು.

ದ್ವಾದಶಾಧಿಪತಿಯು ೧೧ನೆಯ ಸ್ಥಾನದಲ್ಲಿದ್ದರೆ- ಕೃಪಣಳು ಆದಾಗ್ಯೂ ಧನನಾಶ ಹೊಂದತಕ್ಕವಳು, ಸಾಧಾರಣ ಧನವಂತಳು, ಚಿಂತಾಯುಕ್ತ ಮನ ಸ್ಕಳು ಆಗುವಳು.

ದ್ವಾದಶಾಧಿಪತಿಯು ೧೨ನೆಯ ಸ್ಥಾನದಲ್ಲಿದ್ದರೆ—ಸಾಧಾರಣ ಧನ ವಂತಳು, ಸುಖಿಯು, ಕೃಪಣಳು, ಪಾಪಿಷ್ಠಳು, ಮಂದಬುದ್ಧಿಯುಳ್ಳವಳು ಆಗುವಳು.

—ತ್ರಿಂಶಾಂಶ ಫಲ ವಿಚಾರವು—

ಮೇಷ, ವೃಶ್ಚಿಕ ಲಗ್ನ–ಈ ಕುಜಕ್ಷೇತ್ರಗಳು ಲಗ್ನ ಮತ್ತು ಚಂದ್ರ ರಾಶಿಗಳಾಗಿ ಕುಜ ತ್ರಿಂಶಾಂಶದಲ್ಲಿದ್ದರೆ ವ್ಯಭಿಚಾರಿಯೂ, ಪಾಪಾಚರಣೆ ಯುವಳೆಂದೂ, ಶನಿ ತ್ರಿಂಶಾಂಶದಲ್ಲಿದ್ದರೆ ದೂತಿಯೂ, ಚಾಡಿಖೋರಳೂ, ಗುರುತ್ರಿಂಶಾಶದಲ್ಲಿದ್ದರೆ - ಸಾಧ್ವಿಯೂ, ಗುಣವತಿಯೂ, ಬುಧತ್ರಿಂಶಾಂಶ ವಾದರೆ ಪಾಪಿಯೂ, ಶುಕ್ರ ತ್ರಿಂಶಾಂಶವಾದರೆ ಜಾರಿಣಿಯೂ, ಕುಲ ಕಳಂಕಳೂ ಆಗುವಳು.

ವೃಷಭ, ತುಲಾ ಲಗ್ನ-ಈ ಶುಕ್ರಕ್ಷೇತ್ರಗಳು ಲಗ್ನವಾಗಿ ಕುಜ ತ್ರಿಂಶಾಂಶವಾದರೆ–ಜಗಳಗಂಟಿಯೂ, ದುಷ್ಟೆಯೂ, ಗುರುತ್ರಿಂಶಾಂಶವಾದರೆ- ಪುತ್ರವತಿಯೂ, ಸಾಧ್ವಿಯೂ, ಬುಧತ್ರಿಂಶಾಂಶವಾದರೆ- ಸಂಗೀತಕಲಾದಿ ವಿನೋದಚತುರಳೂ, ಶುಕ್ರತ್ರಿಂಶಾಂಶವಾದರೆ-ಅವಳ ಪತಿಯು ಅನೇಕ ವಿಷ ಯುಗಳನ್ನು ತಿಳಿದವನೂ, ಭಾಗ್ಯವಂತನೂ, ಗುಣವಂತನೂ, ಲೋಕಮಾನ್ಯನೂ ಆಗುವಳು.

ಮಿಥುನ ಕನ್ಯಾಲಗ್ನ-ಈ ಬುಧಕ್ಷೇತ್ರಗಳು ಲಗ್ನವಾಗಿ ಕುಜ ತ್ರಿಂಶಾಂಶವಾದರೆ-ಪುತ್ರಹೀನಳು, ಶನಿತ್ರಿಂಶಾಂಶವಾದರೆ-ವಿಧವೆಯಾಗಲಿ ವಂಧ್ಯೆಯಾಗಲಿ, ಮಕ್ಕಳು ಹುಟ್ಟಿ ಸಾಯುವವಳಾಗಲಿ ಆಗುವಳು. ಗುರು ತ್ರಿಂಶಾಂಶವಾದರೆ-ವ್ರತನಿಷ್ಠಳೂ ಪತಿಪ್ರೇಮವುಳ್ಳವಳೂ, ಬುಧ ತ್ರಿಂಶಾಂಶ ವಾದರೆ-ಉತ್ತಮ ವಸ್ತ್ರಾಲಂಕಾರ ಭೂಷಿತೆಯೂ ಗೋಪಶ್ವಾದಿಗಳ ಸಂಪದ್ಯುಕ್ತಳೂ ಆಗುವಳು.

ಕರ್ಕಲಗ್ನ-ಈ ಲಗ್ನವು ಚಂದ್ರರಾಶಿಯಾಗಿ ಕುಜತ್ರಿಂಶಾಂಶದಲ್ಲಿದ್ದರೆ, ಅಥವಾ ಚಂದ್ರನು ಪಾಪಯುತನಾಗಿಯಾಗಲಿ, ಪಾಪದೃಷ್ಟನಾಗಿಯಾಗಲಿ ಇದ್ದರೆ ವ್ಯಭಿಚಾರಿಣಿಯೂ, ಶನಿತ್ರಿಂಶಾಂಶದಲ್ಲಿದ್ದರೆ-ವಿಧವೆಯೂ ಗುರು ತ್ರಿಂಶಾಂಶಯಲ್ಲಿದ್ದರೆ-ಅಲ್ಪ ಮಕ್ಕಳು ಮತ್ತು ಅಲ್ಪ ಆಯುಷ್ಯಯೂ, ಶುಕ್ರ ತ್ರಿಂಶಾಂಶವಾದರೆ- ವಿಷಯಾಸಕ್ತಳೂ, ಬುಧತ್ರಿಂಶಾಂಶವಾದರೆ- ವಿದ್ಯಾವಂತಳೂ ಆಗುವಳು.

ಸಿಂಹಲಗ್ನ-ಈ ರವಿಕ್ಷೇತ್ರವು ಲಗ್ನವಾಗಿ ಕುಜತ್ರಿಂಶಾಂಶವಾದರೆ-ಪುರುಷಸ್ವಭಾವದಳೂ, ಶನಿತ್ರಿಂಶಾಂಶವಾದರೆ- ದೀನಳೂ, ದುಃಖಿಯೂ, ಗುರುತ್ರಿಂಶಾಂಶವಾದರೆ- ಅನೇಕ ಭೋಗಯುಕ್ತಳೂ, ಬುಧತ್ರಿಂಶಾಂಶೆಯಾದರೆ— ಪರಿಹಾಸ್ಯಾದಿಗಳಲ್ಲಿ ಚತುರೆಯೂ, ಶುಕ್ರತ್ರಿಂಶಾಂಶವಾದರೆ— ಆರೋಗ್ಯವಂತನಾದ ಪತಿಯುಳ್ಳವಳೂ, ರೋಗಿಯೂ ಆಗುವಳು.

ಧನು, ಮೀನ ಲಗ್ನ— ಈ ಗುರುಕ್ಷೇತ್ರಗಳು ಲಗ್ನವಾಗಿ, ಕುಜ ತ್ರಿಂಶಾಂಶವಾದರೆ— ಪ್ರಖ್ಯಾತಿ ಪಡೆಯುವವಳೂ, ಶನಿತ್ರಿಂಶಾಂಶವಾದರೆ— ದರಿದ್ರಳೂ, ಗುರುತ್ರಿಂಶಾಂಶವಾದರೆ— ವಸ್ತ್ರಾಭರಣಾದಿ ಅಲಂಕಾರಯುಕ್ತಳೂ, ಬುಧತ್ರಿಂಶಾಂಶವಾದರೆ— ಸಾಧ್ವಿಯೂ, ಶುಕ್ರತ್ರಿಂಶಾಂಶವಾದರೆ— ಪುತ್ರವತಿಯೂ, ಸೌಭಾಗ್ಯವತಿಯೂ ಆಗುವಳು.

ಮಕರ, ಕುಂಭ ಲಗ್ನ— ಈ ಶನಿಕ್ಷೇತ್ರಗಳು ಲಗ್ನವಾಗಿ ಶನಿತ್ರಿಂಶಾಂಶ ವಾದರೆ— ಅಭಾಗಿನಿಯೂ, ಕುಜತ್ರಿಂಶಾಂಶವಾದರೆ— ದುಃಖಿನಿಯೂ, ಬುಧ ತ್ರಿಂಶಾಂಶವಾದರೆ— ಬುದ್ಧಿವಂತೆಯೂ, ಗುರುತ್ರಿಂಶಾಂಶಯಾದರೆ— ಕುಲ ಧರ್ಮಾಚರಣೆಯಂತೆ ನಡೆಯುವವಳೂ, ಶುಕ್ರತ್ರಿಂಶಾಂಶಯಾದರೆ— ಸಾಧ್ವಿಯೂ ಅಥವಾ ವಂಧ್ಯೆಯೂ ಆಗುವಳು.

ಸ್ತ್ರೀಜಾತಕದಲ್ಲಿ ಸ್ತ್ರೀಯಳ ಜನನ ಲಗ್ನದಲ್ಲಿ ಆಕೆಯ ವಯಸ್ಸಿ ಯಶಸ್ಸು ಸಂಪತ್ತುಗಳನ್ನೂ, ೭ನೆಯ ಸ್ಥಾನದಿಂದ ಆಕೆಯ ಮಾಂಗಲ್ಯ ವಿಚಾರ ಅಂದರೆ ವಿವಾಹಯೋಗವನ್ನೂ, ೫ ನೆಯ ಸ್ಥಾನದಿಂದ ಪುತ್ರ ಸಂತಾನ) ವಿಚಾರವನ್ನೂ, ೭ ನೆಯ ಸ್ಥಾನದಿಂದ ಪತಿಯ ಸುಖದ ವಿಷಯವನ್ನೂ, ೮ ನೆಯ ಸ್ಥಾನದಿಂದ ಯುಷ್ಯ ವೈಧವ್ಯ ಆಯೋಗವನ್ನೂ, ೯ನೆಯ ಸ್ಥಾನದಿಂದ ಯೋಗ, ಭಾಗ್ಯ ಮತ್ತು ಮಾಂಗಲ್ಯ ವಿಚಾರವನ್ನೂ ಆಯಾಯ ಸ್ಥಾನಗಳಲ್ಲಿ ರುವ ಅಥವಾ ನಿರೀಕ್ಷಿಸುತ್ತಿರುವ ಗ್ರಹಗಳ ಬಲಾಬಲದಿಂದ ನಿರ್ಣಯ ಮಾಡಿ ನೋಡಬೇಕು. ಸ್ತ್ರೀ ಜಾತಕದಲ್ಲಿ ಲಗ್ನ ದ್ವಿತೀಯ ಪಂಚಮ, ಸಪ್ತಮ, ಅಷ್ಟಮ, ನವಮ ಸ್ಥಾನಗಳೇ ಬಹು ಮಹತ್ವವಾದವುಗಳು ಮತ್ತು ಮಾಂಗ ಲ್ಯಕ್ಕೆ ಶುಕ್ರ, ಪತಿಗೆ ೭ ನೆಯ ಸ್ಥಾನಾಧಿಪತಿ, ಪುತ್ರರಿಗೆ ಗುರು, ಆಯುಷ್ಯಕ್ಕೆ ಶನಿ, ಹೀಗೆ ಗ್ರಹಗಳು ಕಾರಕರಿರುವರು, ವಿಶೇಷವಾಗಿ ಶುಕ್ರನು ಶುದ್ಧನಿದ್ದರೆ ಪತಿವ್ರತೆಯೆಂದೂ, ನವಮದಲ್ಲಿ ಶುಭಗ್ರಹಗಳು ಅಥವಾ ಶುಭಗ್ರಹಗಳ ದೃಷ್ಟಿ ಇದ್ದರೆ ಸುಮಂಗಲಿಯೆಂದೂ ತಿಳಿಯಬೇಕು.

ಮುಂದೆ ವಿವರಿಸಿದ ಸಾಮಾನ್ಯ ನಿಯಮಗಳಿಂದ ಸ್ತ್ರೀಯರ ಕುಂಡಲಿ ಯಲ್ಲಿ ಅವರ ಸಾಂಪತ್ತಿಕ ಪರಿಸ್ಥಿತಿಯ ಬಗ್ಗೆ ವಿಚಾರಿಸಬೇಕು. ಸ್ತ್ರೀಯಳ ಕುಂಡಲಿಯು ಬಲಿಷ್ಠವಾಗಿದ್ದು ಪತಿಯ ಕುಂಡಲಿಯಲ್ಲಿ ಏನಾದರೂ ಅನಿಷ್ಟ ಪ್ರಸಂಗಗಳ ಯೋಗಗಳಿದ್ದರೆ ಆಯೋಗಗಳಿಂದ ಉಂಟಾಗುವ ಅನಿಷ್ಟ ಫಲವು ಅಲ್ಪಪ್ರಮಾಣದಲ್ಲಾಗುವದು. ಪತಿಯ ಕುಂಡಲಿಗೆ ಸತಿಯಳ ಕುಂಡಲಿಯು ಪೂರಕವಾಗುವದು.

ಜನನ ಕುಂಡಲಿಯಲ್ಲಿ ಚಂದ್ರನು ಬಲಿಷ್ಠನಾಗಿ ಯಾವದೇ ಪಾಪಗ್ರಹ ಗಳಿಂದ ಕೂಡಿರದೆ ಅಥವಾ ನೋಡಿಸಿಕೊಳ್ಳದಿದ್ದರೆ ಅತ್ಯಂತ ಶುಭಫಲದಾಯ ಕಳು. ಪ್ರಯುಕ್ತ ಆವಳ ಆಯುಷ್ಯವು ಸುಖದಲ್ಲಿಯೇ ಹೋಗುವದು.

೩-೬.೧೧ ಈ ಸ್ಥಾನಗಳಲ್ಲಿ ರವಿ ಮಂಗಳರು ಬಲಿಷ್ಠರಾಗಿದ್ದರೆ ಪತಿಗೆ ಉತ್ಕರ್ಷಯು ಪತಿಯು ಜನ್ಮದಿಂದ ಕೀಳು ಪರಿಸ್ಥಿತಿಯಲ್ಲಿದ್ದರೂ ಐಶ್ವರ್ಯ ವಂತನಾಗಿ ಸುಖಿಯೋಗುವನು.

೩-೬-೭-೯-೧೦-೧೧ ಸ್ಥಾನಗಳಲ್ಲಿ ಯಾವದೇ ಒಂದು ಸ್ಥಾನದಲ್ಲಿ ಗುರು, ಶುಕ್ರ ಅಥವಾ ಚಂದ್ರ ಬಲಿಷ್ಠರಾಗಿದ್ದು, ಆ ಗ್ರಹಗಳ ಮೇಲೆ ಗೋಚಾರದಿಂದ ಗುರು, ಶುಕ್ರ, ಬುಧರು ಭ್ರಮಣ ಮಾಡುವ ಕಾಲಕ್ಕೆ ಅನುಕೂಲ ಪರಿಸ್ಥಿತಿ ಪ್ರಾಪ್ತವಾಗುತ್ತದೆ.

೭ನೆಯ ಸ್ಥಾನದಲ್ಲಿ ಇಲ್ಲವೆ ಲಗ್ನದಲ್ಲಿ ಬಲಿಷ್ಠ ಶುಭಗ್ರಹಗಳಿದ್ದರೆ ಅಥವಾ ಆ ಸ್ಥಾನಗಳ ಅಧಿಪತಿಯು ಶುಭಗ್ರಹಯುಕ್ತನಾಗಿದ್ದರೆ - ಆ ಜಾತಕಳ ಆಯುಷ್ಯವು ಸುಖದಲ್ಲಿ ಹೋಗುವದು.

೩-೫-೯-೧೧ ಸ್ಥಾನಗಳಲ್ಲಿ ಶುಭಗ್ರಹಗಳಿದ್ದು ಆ ಸ್ಥಾನಗಳಲ್ಲಿ ಬಲಿಷ್ಠರಾದ ಬುಧ, ಗುರು, ಶುಕ್ರ, ಚಂದ್ರ ಇರಬೇಕು. ಹೀಗೆ ಇದ್ದರೆ - ಆ ಜಾತಕಳು ಬಹಳ ತೀಕ್ಷ್ಣ ಬುದ್ಧಿಯುಳ್ಳವಳು, ಲಗ್ನ ಇಲ್ಲವೆ ಸಪ್ತಮ ಸ್ಥಾನದಲ್ಲಿ ಈ ಪ್ರಕಾರ ಇದ್ದರೆ - ಅವಳು ವಿದ್ಯಾ ಪ್ರವೀಣಳಾಗುವಳು ಈ ಸ್ಥಾನಗಳಲ್ಲಿ ಶನಿ, ಮಂಗಳ, ರಾಹು, ಕೇತು ಇವುಗಳಲ್ಲಿ ಯಾವ ಗ್ರಹವಿದ್ದರೂ ಸಾಧಾರಣ ಬುದ್ಧಿವಂತಳಾಗುವಳು.

೨-೬-೮-೧೨ ಸ್ಥಾನಗಳಲ್ಲಿ ಪಾಪಗ್ರಹಗಳಿದ್ದರೆ-ಇಲ್ಲವೆ ಲಗ್ನ, ಸಪ್ತಮಗಳಲ್ಲಿ ಪಾಪಗ್ರಹಗಳಿದ್ದರೆ— ಅವಳಿಗೆ ಶರೀರದಲ್ಲಿ ಕಷ್ಟವಾಗುವದು.

೧-೪-೯ ಈ ಸ್ಥಾನಗಳ ಅಧಿಪತಿಗಳಲ್ಲಿ ಮತ್ತು ರವಿ, ಚಂದ್ರ ಇವರಲ್ಲಿ ಹೆಚ್ಚಾದ ಗ್ರಹಗಳು ಪಾಪಗ್ರಹಗಳಿಂದ ಪೀಡಿತವಾಗಿದ್ದರೆ— ಆ ಜಾತಕಳ ಆಶಾಭಂಗವಾಗುವ ಘಟನೆಗಳು ಜರುಗುವವು.

೧-೨-೪-೫-೭-೧೦-೧೧ ಈ ಸ್ಥಾನಗಳಲ್ಲಿ ಹೆಚ್ಚು ಸ್ಥಾನಗಳೊಳು ಶುಭಗ್ರಹವಿದ್ದರೆ-- ಅವಳು ಭಾಗ್ಯವಂತಳು.

ವಿವಾಹಯೋಗ

ಸ್ತ್ರೀಯಳು ಜನನಲಗ್ನ ಕುಂಡಲಿಯಲ್ಲಿ ೭ ನೆಯ ಸ್ಥಾನಾಧಿಪತಿಯು ಶುಭ ಗ್ರಹವಾಗಿದ್ದರೆ, ಶುಕ್ರನು ಸ್ವಕ್ಷೇತ್ರದಲ್ಲಿ ಅಥವಾ ಉಚ್ಚಕ್ಷೇತ್ರದಲ್ಲಿ ಇದ್ದರೆ— ಆ ಜಾತಕಗಳ ವಿವಾಹವು ೧೪ ನೆಯ ವರ್ಷದಲ್ಲಿಯೂ, ೭ ನೆಯ ಸ್ಥಾನದಲ್ಲಿ ರವಿ ಇದ್ದು, ೭ ನೆಯ ಸ್ಥಾನಾಧಿಪತಿಯು ಶುಕ್ರನೊಡನೆ ಕೂಡಿದ್ದರೆ— ೧೩

ಇಲ್ಲವೆ ೧೬ ನೆಯ ವರ್ಷದಲ್ಲಿಯೂ, ೨ ಹಾಗೂ ೭ ನೆಯ ಸ್ಥಾನಗಳಲ್ಲಿ ಉಚ್ಚ
ಗ್ರಹವಿದ್ದರೆ-ವೈವಾಹಿಕ ಜೀವನವು ಸುಖಕರವಾಗಿ ಸಾಗುವದೆಂದೂ, ೨ ನೆಯ
ಸ್ಥಾನದಲ್ಲಿ ಶುಕ್ರ ಅಥವಾ ಗುರು ಇದ್ದು ೭ನೆಯ ಸ್ಥಾನಾಧಿಪತಿಯು ಏಕಾದ
ಸ್ಥಾನದಲ್ಲಿದ್ದರೆ-ಹಾಗೂ ಶುಕ್ರನು ಮತ್ತು ಏಕಾದಶ ಸ್ಥಾನದಲ್ಲಿರುವ ಸಪ್ತಮಾ
ಧಿಪತಿಯು ಶುಭದಾಯಕರಿದ್ದರೆ-೧೫ನೇ ವರ್ಷದಲ್ಲಿಯೂ ವಿವಾಹವಾಗು
ದೆಂದು ತಿಳಿಯಬೇಕು, ಆದರೆ ಅವರು ನೀಚ ರಾಶಿಯಲ್ಲಿ ಅಥವಾ ನೀಚ ಗ್ರಹ
ಗಳ ಸಂಗಡ ಇದ್ದರೆ ವಿವಾಹವು ಕಷ್ಟದಿಂದ ತಡವಾಗಿಯೂ ಆಗುವದು. ಬಹು
ಆ ಕನ್ಯೆಯು ಆಜನ್ಮ ಬ್ರಹ್ಮಚಾರಿಣಿಯಾಗಿಯೂ ಉಳಿಯಬೇಕಾಗುವದು

ಶುಕ್ರನು ಕೇಂದ್ರಸ್ಥಾನಗಳಲ್ಲಿದ್ದು ಲಗ್ನಾಧಿಪತಿಯು ಕುಂಭ ಇಲ್ಲ
ಮಕರರಾಶಿಯಲ್ಲಿದ್ದರೆ ೧೬ ನೆಯ ವರ್ಷದಲ್ಲಿಯೂ, ಕೇಂದ್ರಸ್ಥಾನಗಳಲ್ಲಿ ಶುಕ್ರ
ನಿದ್ದು ಇವನಿಂದ ೭ ನೆಯ ಸ್ಥಾನದಲ್ಲಿ ಶನಿ ಇದ್ದರೆ, ೧೭ ನೇ ವರ್ಷದಲ್ಲಿಯೂ
ಚಂದ್ರ ಶುಕ್ರರಿಂದ ೭ ನೇ ಸ್ಥಾನದಲ್ಲಿ ಶನಿ ಇದ್ದರೆ, ಆ ಜಾತಕಳ ವಿವಾಹವು
೨೧ ನೇ ವರ್ಷದಲ್ಲಾಗುವದು. ೨ ನೆಯ ಸ್ಥಾನಾಧಿಪತಿಯು ೧೧ ನೇ ಸ್ಥಾನ
ದಲ್ಲಿಯೂ ಲಗ್ನಾಧಿಪತಿಯು ೧೦ ನೇ ಸ್ಥಾನದಲ್ಲಿಯೂ ಇದ್ದರೆ ೧೯ ನೇ ವರ್ಷ
ದಲ್ಲಿಯೂ, ೨ ನೇ ಸ್ಥಾನಾಧಿಪತಿಯು ೧೧ ನೇ ಸ್ಥಾನದಲ್ಲಿಯೂ, ೧೧ ನೇ
ಸ್ಥಾನಾಧಿಪತಿಯು ೨ನೇ ಸ್ಥಾನದಲ್ಲಿಯೂ ಇದ್ದರೆ. ೧೭ ನೇ ವರ್ಷದಲ್ಲಿಯೂ,
೮ ನೆಯ ಸ್ಥಾನದಲ್ಲಿ ಶುಕ್ರನು ೮ ನೇ ಸ್ಥಾನಾಧಿಪತಿಯು ಮಂಗಳನೊಡನೆ
ಕೂಡಿದ್ದರೆ. ೨೧ನೇ ವರ್ಷದಲ್ಲಿಯೂ, ೭ನೇ ಸ್ಥಾನದಲ್ಲಿದ್ದ ರಾಶಿಯು ನವಾಂಶ
ದಲ್ಲಿ ಲಗ್ನವಿದ್ದು ಸಪ್ತಮಾಧಿಪತಿಯು ೧೨ ನೇ ಸ್ಥಾನದಲ್ಲಿದ್ದರೆ ೨೪ ನೇ
ವಯಸ್ಸಿನಲ್ಲಿಯೂ ವಿವಾಹವಾಗುವದು. ೫ ನೆ ಸ್ಥಾನದಲ್ಲಿ ಶುಕ್ರ ೧೨ ನೇ
ಸ್ಥಾನದಲ್ಲಿ ರಾಹು ಇದ್ದರೆ. ವಿವಾಹವು ಸ್ವಲ್ಪ ತಡೆದು ಆಗುವದು.

ವಿವಾಹಯೋಗ ಮತ್ತೊಂದು ವಿಧ

ಯಾವ ವರ್ಷ ಲಗ್ನಮಾಸಗಳಲ್ಲಿ ಕೆಳಗೆ ವಿವರಿಸಿದಂತೆ ಲಗ್ನ ಕುಂಡ
ಯಲ್ಲಿ ಗ್ರಹಗಳ ಸ್ಥಿತಿ ಇದ್ದರೆ, ವಿವಾಹವು ಕೂಡಿಬರುವನೆಂದು ನಿಶ್ಚಿತವಾಗಿ
ಹೇಳಬಹದು.

(೧) ಜನನ ಲಗ್ನ ಕುಂಡಲಿಯಲ್ಲಿ ಶುಕ್ರನಿದ್ದ ರಾಶಿಯಿಂದ ಸಪ್ತಮ
ರಾಶಿಯಲ್ಲಿ ಶುಕ್ರನಿರಬೇಕು. (೨) ಜನನ ಕುಂಡಲಿಯಲ್ಲಿ ಶುಕ್ರನಿರುವ ರಾಶಿ

ಯಲ್ಲಿ ಇಲ್ಲವೆ ಆರಾಶಿಗೆ ೨ ನೇ ಸ್ಥಾನದಲ್ಲಿ ಶುಕ್ರವಿರಬೇಕು. (೩) ಜನನ ಕಾಲದಲ್ಲಿ ಚಂದ್ರನಿದ್ದ ರಾಶಿಯಿಂದ ಸಪ್ತಮ ಇಲ್ಲವೆ ೨ ನೇ ರಾಶಿಯಲ್ಲಿ ಶುಕ್ರನಿರಬೇಕು. (೪) ಇಲ್ಲವೆ ಚಂದ್ರನಿದ್ದ ರಾಶಿಯಲ್ಲಿಯೇ ಶುಕ್ರನಿರಬೇಕು. (೫) ಜನನ ಕುಂಡಲಿಯಲ್ಲಿ ಸಪ್ತಮೇಶನಿದ್ದ ರಾಶಿಯಿಂದ ಸಪ್ತಮಸ್ಥಾನದಲ್ಲಿ ಶುಕ್ರನಿರಬೇಕು. (೬) ಜನನಕಾಲದಲ್ಲಿ ಶುಕ್ರನಿದ್ದ ರಾಶಿಯಲ್ಲಿ ಇಲ್ಲವೆ ಆ ರಾಶಿಯಿಂದ ೭ ನೇ ಸ್ಥಾನದಲ್ಲಿ ಜನನಕುಂಡಲಿಯಲ್ಲಿಯ ಸಪ್ತಮೇಶನಿರಬೇಕು. (೭) ಜನನ ಕಾಲದಲ್ಲಿಯ ಚಂದ್ರನಿಂದ ಸಪ್ತಮಸ್ಥಾನದಲ್ಲಿ ಜನನ ಲಗ್ನ ಕುಂಡಲಿಯಲ್ಲಿಯ ಸಪ್ತಮಾಧಿಪತಿಯು ಬರಬೇಕು. ಇಲ್ಲವೆ ಚಂದ್ರನೊಡನೆ ಜನನಲಗ್ನ ಕುಂಡಲಿಯಲ್ಲಿಯ ಸಪ್ತಮಾಧಿಪತಿಯು ಬರಬೇಕು. (೮) ಸಪ್ತಮಾಧಿಪತಿಯು ಸಪ್ತಮಸ್ಥಾನದಲ್ಲಿ ಲಗ್ನದಲ್ಲಿ ಅಥವಾ ದ್ವಿತೀಯ ಸ್ಥಾನದಲ್ಲಿ ಬರಬೇಕು. (೯) ಧನಾಧಿಪತಿಯು ಲಗ್ನ, ದ್ವಿತೀಯ ಇಲ್ಲವೆ ಸಪ್ತಮಸ್ಥಾನದಲ್ಲಿ ಬರಬೇಕು. (೧೦) ಶುಕ್ರನು ೭ ನೇ ಸ್ಥಾನದಲ್ಲಿ ಇಲ್ಲವೆ ಲಗ್ನದಲ್ಲಿರಬೇಕು. (೧೧) ಸಪ್ತಮಾಧಿಪತಿ, ಧನಾಧಿಪತಿಗಳು ೧-೨-೪-೭-೧೧ ಈ ಸ್ಥಾನಗಳಲ್ಲಿ ಕೂಡಬೇಕು. (೧೨) ೭ನೇ ಸ್ಥಾನಾಧಿಪತಿಯು ಲಗ್ನಾಧಿಪತಿಯು ೧-೨-೪-೫-೭-೯-೧೧ ಸ್ಥಾನಗಳಲ್ಲಿ ಕೂಡಬೇಕು. (೧೩) ದ್ವಿತೀಯಾಧಿಪತಿಯು ಲಗ್ನಾಧಿಪತಿಯು ಕೂಡಬೇಕು. (೧೪) ಸಪ್ತಮಾಧಿಪತಿಯು, ಶುಕ್ರನು ಇಲ್ಲವೆ ಧನಾಧಿಪತಿಯು ಶುಕ್ರನು ಇವರ ಯುತಿಯಾಗಬೇಕು. (೧೫) ಲಗ್ನ ಕುಂಡಲಿಯಲ್ಲಿಯ ೭ ನೇ ಸ್ಥಾನದಲ್ಲಿ ಇಲ್ಲವೆ ೨ ನೇ ಸ್ಥಾನದಲ್ಲಿದ್ದ ಗ್ರಹಗಳು ೭ ನೇ ಸ್ಥಾನದಲ್ಲಿ ಬರಬೇಕು. (೧೬) ೭ ಹಾಗೂ ೨ ನೇ ಸ್ಥಾನಗಳಲ್ಲಿ ಪಾಪ ಗ್ರಹಗಳಿರಬಾರದು. (೧೭) ೭ ನೇ ಸ್ಥಾನದಲ್ಲಿ ಇಲ್ಲವೆ ಲಗ್ನದಲ್ಲಿ ಗುರು ಇರಬೇಕು. (೧೮) ಜನ್ಮಸ್ಥ ಗುರು, ಜನ್ಮಸ್ಥ ಶುಕ್ರ ಇಲ್ಲವೆ ಜನ್ಮಸ್ಥ ಚಂದ್ರ ಈ ಗ್ರಹಗಳೊಡನೆ ಗುರು ಭ್ರಮಣಮಾಡಬೇಕು. ಇಲ್ಲವೆ ಗುರು, ಶುಕ್ರ, ಚಂದ್ರ ಈ ಗ್ರಹಗಳಿಂದ ೭ ನೇ ಸ್ಥಾನದಲ್ಲಿ ಗುರುವು ಭ್ರಮಣ ಮಾಡಬೇಕು. (೧೯) ಲಗ್ನಾಧಿಪತಿ, ದ್ವಿತಿಯಾಧಿಪತಿ, ಸಪ್ತಮಾಧಿಪತಿ ಇವರಿದ್ದ ಸ್ಥಾನದಲ್ಲಿ ಗುರುವು ಭ್ರಮಣ ಮಾಡಬೇಕು. ಇಲ್ಲವೆ ಮೇಲೆ ಹೇಳಿದ ಸ್ಥಾನಗಳಿಂದ ಸಪ್ತಮದಲ್ಲಿ ಗುರು ಭ್ರಮಣ ಮಾಡಬೇಕು.

ಜನನ ಕುಂಡಲಿಯಲ್ಲಿಯು ಗ್ರಹಗಳ ಸ್ಥಿತಿಯು ಮೇಲಿಂದೇಲಿ ಹಾಗೂ ವಿವಾಹ ಮಾಸಗಳಲ್ಲಿಯು ಗ್ರಹಗಳ ಸ್ಥಿತಿಯು ಮೇಲಿಂದಲೂ ಮೇಲೆ ಹೇಳಿದ ಯೋಗಗಳಿಂದ ಕಾಲನಿರ್ಣಯವನ್ನು ಮಾಡಬೇಕು.

ವಿವಾಹದ ಕಾಲಕ್ಕೆ ವಧೂವರರ ಕುಂಡಲಿಯಲ್ಲಿ ಗೋಚಾರಗ್ರಹಗಳ ಈ ಸ್ಥಿತಿಯನ್ನು ಕಾಣಬಹುದು.

(೧) ಕನ್ಯೆಯ ಜನನ ಲಗ್ನಕುಂಡಲಿಯಲ್ಲಿ ಚಂದ್ರನು ಯಾವ ರಾಶಿಯ ಲ್ಲಿರುವನೋ ಅದೇ ರಾಶಿಯಲ್ಲಾಗಲಿ ಇಲ್ಲವೆ ಆ ರಾಶಿಯಿಂದ ಸಪ್ತಮಸ್ಥಾನದ ಲ್ಲಾಗಲಿ ವರನ ಜನ್ಮಸ್ಥ ಚಂದ್ರ ಇಲ್ಲವೆ ಶುಕ್ರನಿರುವನು.

(೨) ಕನ್ಯೆಯ ಜನನ ಕುಂಡಲಿಯಲ್ಲಿ ಶುಕ್ರನು ಯಾವ ರಾಶಿಯಲ್ಲಿರುವ ನೋ ಅದೇ ರಾಶಿಯಲ್ಲಾಗಲಿ ಇಲ್ಲವೆ ಆ ರಾಶಿಯಿಂದ ಸಪ್ತಮಸ್ಥಾನದಲ್ಲಾ ಗಲಿ ಶುಕ್ರ ಇಲ್ಲವೆ ಚಂದ್ರನಿರುವನು.

(೩) ಕನ್ಯೆಯ ಲಗ್ನದಲ್ಲಿ ಇಲ್ಲವೆ ಸಪ್ತಮಸ್ಥಾನದಲ್ಲಿರುವ ರಾಶಿಯಲ್ಲಿ ಇಲ್ಲವೆ ಆ ರಾಶಿಯಿಂದ ಸಪ್ತಮರಾಶಿಯಲ್ಲಿ ವರನ ಶುಕ್ರ ಇಲ್ಲವೆ ಚಂದ್ರನಿರು ವನು.

(೪) ವಧುವಿನ ಜನನ ಕುಂಡಲಿಯಲ್ಲಿ ಸಪ್ತಮಾಧಿಪತಿ ಲಗ್ನಾಧಿಪತಿ ಇಲ್ಲವೆ ದ್ವಿತೀಯಾಧಿಪತಿ ಯಾವ ರಾಶಿಯಲ್ಲಿರುವರೋ ಆ ರಾಶಿಯಲ್ಲಿ ಇಲ್ಲವೇ ಆ ರಾಶಿಯಿಂದ ಸಪ್ತಮ ರಾಶಿಯ ವರನ ಶುಕ್ರ, ಚಂದ್ರ, ಸಪ್ತಮೇಶ, ಲಗ್ನಾಧಿಪತಿ ಇಲ್ಲವೆ ದ್ವಿತೀಯಾಧಿಪತಿ ಇವರಲ್ಲಿ ಯಾರಾದರೂ ಇರುವರು.

(೫) ವಧುವಿನ ಜನನ ಕುಂಡಲಿಯಲ್ಲಿ ದ್ವಿತೀಯಸ್ಥಾನದಲ್ಲಿ ಇಲ್ಲವೆ ಸಪ್ತಮಸ್ಥಾನದಲ್ಲಿ ಯಾವದಾದರೂ ಗ್ರಹವಿದ್ದರೆ, ಆಗ್ರಹವು ವರನ ಲಗ್ನದ ಲ್ಲಾಗಲಿ, ದ್ವಿತೀಯ ಸ್ಥಾನದಲ್ಲಾಗಲಿ ಇಲ್ಲವೆ ಸಪ್ತಮಸ್ಥಾನದಲ್ಲಾಗಲಿ ಬರುವದು.

ಈ ಯೋಗಗಳು ವಧೂವರರ ಜನರ ಕುಂಡಲಿಗಳನ್ನು ನೋಡಿದರೆ ಕಂಡುಬರುವವು. ಮೇಲೆ ವಿವರಿಸಿದ ನಿಯಮಗಳನ್ನು ಪರೀಕ್ಷಿಸದೆ ಅಸತ್ಯ ವೆಂದು ತಿಳಿಯಬಾರದು.

ವಿವಾಹವು ತಡವಾಗಿ ಆಗುವಯೋಗಗಳು

ಜನನ ಲಗ್ನ ಕುಂಡಲಿಯಲ್ಲಿ ೭ ನೆಯ ಸ್ಥಾನಾಧಿಪತಿಯು ೮-೬-೧೨ ನೆಯ ಸ್ಥಾನಗಳಲ್ಲಿ ಶನಿಯೊಡನೆ ಕೂಡಿದ್ದರೆ ಆ ಜಾತಕಳ ವಿವಾಹವು ತಡವಾಗಿ ಪ್ರಯಾಸದಿಂದ ಆಗುವದು, ಜನನಲಗ್ನವನ್ನು ರಾಹು, ಮಂಗಳರು ನೋಡುತ್ತಿದ್ದ ಲಗ್ನಾಧಿಪತಿಯು ಹಾಗೂ ಸಪ್ತಮಾಧಿಪತಿಯು ಬಲಹೀನರಾಗಿದ್ದರೆ, ಅಡ್ಡಿ ಆತಂಕಗಳ ಮೂಲಕ ಲಗ್ನವು ತಡವಾಗಿ ಆಗುವದು. ಲಗ್ನಾಧಿಪತಿಯು ಅಥವಾ ಸಪ್ತಮಾಧಿಪತಿಯು ಇಲ್ಲವೆ ಶುಕ್ರನು ಇವರಲ್ಲಿ ಯಾರಾದರೊಬ್ಬರು ವಕ್ರರಾಗಿದ್ದು ಯಾವದೋ ಒಂದು ಸ್ಥಾನದಲ್ಲಿ ಚಂದ್ರ, ಶನಿ ಅಥವಾ ಮಂಗಳ, ಶನಿ ಕೂಡಿಕೊಂಡಿದ್ದರೆ, ಕೂಡಿಬಂದ ವಿವಾಹವು ಕೆಟ್ಟು ಹೋಗುವದು. ಹಾಗೂ ತಡವಾಗಿ ಲಗ್ನವಾಗುವದು. ಜನನ ಲಗ್ನ ಕುಂಡಲಿಯಲ್ಲಿ ೫ ನೆಯ ಸ್ಥಾನವು ಮೇಷರಾಶಿಯಾಗಿದ್ದು ರವಿ ಚಂದ್ರ ಶುಕ್ರರು ಬಲಹೀನರಾಗಿಯೂ ಶನಿಯು ಬಲಾಢ್ಯನಾಗಿಯೂ ಇದ್ದುದಾದರೆ ಜಾತಕಳ ಲಗ್ನವು ಬಹುಪ್ರಯಾಸದಿಂದ ಆಗುವದು.

ಶೀಘ್ರ ವಿವಾಹವಾಗುವ ಯೋಗಗಳು

ಶುಕ್ರನು ಬಲಿಷ್ಠನಾಗಿದ್ದು ಆ ಶುಕ್ರನೊಡನೆ ರವಿಕೂಡಿದ್ದರೆ ಅಥವಾ ಚಂದ್ರನು ೫ ೭ ನೆಯ ಸ್ಥಾನಗಳನ್ನು ನೋಡುತ್ತಿದ್ದರೆ ಆ ಜಾತಕಳ ವಿವಾಹವು ಶೀಘ್ರವಾಗಿ ಆಗುತ್ತದೆ. ಲಗ್ನಾಧಿಪತಿಯು ಸಪ್ತಮಸ್ಥಾನಾಧಿಪತಿಯು ಅಥವಾ ಲಗ್ನಾಧಿಪತಿಯು ಶುಕ್ರನು ಅಥವಾ ಸಪ್ತಮಸ್ಥಾನಾಧಿಪತಿಯು ಚಂದ್ರನು ಇಲ್ಲವೆ ಚಂದ್ರ, ಗುರು; ಶುಕ್ರರು ಅಥವಾ ರವಿ ಚಂದ್ರ ಶುಕ್ರರು ಈ ಪ್ರಕಾರ ಗ್ರಹಗಳು ಕೂಡಿದ್ದರೆ-ಆಜಾತಕಳ ವಿವಾಹವು ಬಹು ಶೀಘ್ರವಾಗಿ ಆಗುವದು ಆದರೆ ಮೇಲೆ ತಿಳಿಸಿದ ಪ್ರಕಾರ ಗ್ರಹಗಳಿರುವಾಗ ಜನನಲಗ್ನ ಕುಂಡಲಿಯಲ್ಲಿ ೧-೪-೫-೭-೮-೧೦-೧೧ ಸ್ಥಾನಗಳಲ್ಲಿ ಪಾಪಗ್ರಹಗಳಿರಬಾರದು. ಹಾಗೂ ಪಾಪ ಗ್ರಹಗಳ ದೃಷ್ಟಿಯೂ ಇರಕೂಡದು. ೯ ನೆಯ ಸ್ಥಾನದಲ್ಲಿರುವ ಶುಕ್ರನು ಉಚ್ಚನಾಗಿದ್ದರೆ, ಅಥವಾ ಸ್ವಕ್ಷೇತ್ರದಲ್ಲಿದ್ದರೆ. ಆ ಜಾತಕಳಿಗೆ ಭಾಗ್ಯೋದಯ ಕಾಲವೆಂದು ತಿಳಿಯಬೇಕು. ಲಗ್ನಾಧಿಪತಿ, ಸಪ್ತಮಸ್ಥಾನಾಧಿಪತಿಗಳು ಪರಸ್ಪರ ೭-೭ ಸ್ಥಾನಗಳಲ್ಲಿದ್ದರೆ-ಮತ್ತು ಗುರು ಚಂದ್ರನು ಪರಸ್ಪರ ೭-೭ ಸ್ಥಾನಗಳಿದ್ದರೆ, ಇಲ್ಲವೆ ಗುರು ಚಂದ್ರರು ಶುಕ್ರನಿಗೆ ಪರಸ್ಪರ ೭-೭ ಸ್ಥಾನಗಳಲ್ಲಿ

ದ್ದರೆ, ಇಲ್ಲವೆ ೫-೯ ಸ್ಥಾನಗಳಲ್ಲಿದ್ದರೆ, ಅಥವಾ ಪರಸ್ಪರ ೬-೧೧ ಸ್ಥಾನಗಳಲ್ಲಿ ದ್ದರೆ, ಆ ಜಾತಕಳ ವಿವಾಹವು ಅತಿ ತ್ವರಿತವಾಗಿ ಆಗುವದು.

ಲಗ್ನವಾಗುವ ವರ್ಷ ತಿಳಿಯುವದು

ಗೋಚಾರದಿಂದ ಜನ್ಮ ನಕ್ಷತ್ರದಿಂದಾಗಲಿ ಅಥವಾ ನಾಮ ನಕ್ಷತ್ರ ದಿಂದಾಗಲಿ ಶನಿಯು ಸಾಡೇಸಾತ (೭||) ಇಲ್ಲದಿರುವಾಗ ಗುರು, ಶುಕ್ರ, ರವಿ ಗಳು ಯಾವ ವರ್ಷ ತಿಂಗಳುಗಳಲ್ಲಿ ಶುಭಪ್ರದರಿರುವರೋ ಆ ವರ್ಷ ಮಾಸ ಗಳಲ್ಲಿ ಆ ಜಾತಕಳ ವಿವಾಹವಾಗುವದೆಂದು ತಿಳಿಯಬೇಕು. ಅಥವಾ ಜನನ ಲಗ್ನ ಕುಂಡಲಿಯಲ್ಲಿ ರವಿ, ಶುಕ್ರರೊಡನೆ ಗುರುವು ಯಾವ ಅವಧಿಯಲ್ಲಿ ಕೂಡಿ ಕೊಂಡಿರುವನೋ ಆ ವರ್ಷ ಮಾಸಗಳಲ್ಲಿ ಇಲ್ಲವೆ ಲಗ್ನ ಸಪ್ತಮಾಧಿಪತಿಗಳು ಗುರುವನ್ನು ಯಾವ ವರ್ಷ ತಿಂಗಳುಗಳಲ್ಲಿ ಕೂಡಿರುವರೋ ಆ ವರ್ಷ ತಿಂಗ ಳಲ್ಲಿ ವಿವಾಹವಾಗುವದೆಂದು ತಿಳಿಯಬೇಕು.

ವಿಷಕನ್ಯಾಯೋಗ

ಆದಿತ್ಯವಾರ, ಶನಿವಾರಗಳಲ್ಲಿ ಆಶ್ಲೇಷ ನಕ್ಷತ್ರವಿದ್ದು ಆ ದಿವಸ ಬಿದಿಗೆ ತಿಥಿ ಇದ್ದರೆ, ಆ ದಿವಸ ಜನನವಾದವಳು ವಿಷ ಕನ್ಯೆಯಾಗುವಳು.

ಶನಿವಾರ ಕೃತ್ತಿಕ ನಕ್ಷತ್ರವಿದ್ದು ಸಪ್ತಮಿ ತಿಥಿಯೂ ಸಹ ಕೂಡಿದ್ದರೆ- ಆ ದಿವಸ ಜನನವಾದವಳು ವಿಷ ಕನ್ಯೆಯಾಗುವಳು.

ಮಂಗಳವಾರ ಶತತಾರಾ ನಕ್ಷತ್ರ ಇರುವಾಗ ಸಪ್ತಮಿ ಇಲ್ಲವೆ ದ್ವಾದಶಿ ತಿಥಿ ಕೂಡಿಕೊಂಡಿರುವಾಗ ಜನಿಸಿದವಳು ವಿಷ ಕನ್ಯೆಯಾಗುವಳು.

ಆದಿತ್ಯವಾರ ವಿಶಾಖ ನಕ್ಷತ್ರ ಇದ್ದಾಗ ದ್ವಾದಶಿ ತಿಥಿಯೂ ಕೂಡಿ ದ್ದರೆ ಅಂಥ ಯೋಗದಲ್ಲಿ ಹುಟ್ಟಿದವಳು ವಿಷಕನ್ಯೆಯಾಗುವಳು.

ಜನನಲಗ್ನ ಕುಂಡಲಿಯಲ್ಲಿ ೧ನೆಯ ಸ್ಥಾನದಲ್ಲಿ ಶನಿಯು ೫ ನೆಯ ಸ್ಥಾನದಲ್ಲಿ ರವಿಯು, ೮-೯ ನೆಯ ಸ್ಥಾನಗಳಲ್ಲಿ ಕುಜನು ಈ ಪ್ರಕಾರ ಗ್ರಹಗ ಳಿದ್ದರೆ, ಅವಳು ವಿಷ ಕನ್ಯೆಯಾಗುವಳು. ಜನನ ಲಗ್ನದಲ್ಲಿ ಪಾಪಗ್ರಹವಿದ್ದು ಎರಡು ಸ್ಥಾನಗಳಲ್ಲಿರುವ ಶುಭಗ್ರಹಗಳು ಶತ್ರುಕ್ಷೇತ್ರಹೊಂದಿದ್ದರೆ, ಅಂಥ ಯೋಗದಲ್ಲಿ ಜನನವಾದವಳು ವಿಷಕನ್ಯೆಯಾಗುವಳು.

ಜನನಲಗ್ನವು ಪಾಪಗ್ರಹದ ಕ್ಷೇತ್ರವಾಗಿ ಲಗ್ನದಲ್ಲಿ ಅಶುಭಗ್ರಹವಿದ್ದರೆ ಹಾಗೂ ಎರಡು ಪಾಪಗ್ರಹಗಳು ೬ ನೆಯ ಸ್ಥಾನದಲ್ಲಿದ್ದರೆ ವಿಷಕನ್ಯಾಯೋಗ ವಾಗುವದು.

ಜನನಲಗ್ನದಿಂದ ೯ ನೆಯ ಸ್ಥಾನದಲ್ಲಿ ಮಂಗಳನು ಲಗ್ನದಲ್ಲಿ ಶನಿಯು ೫ನೆಯ ಸ್ಥಾನದಲ್ಲಿ ರವಿಯು ಇದ್ದರೆ ವಿಷಕನ್ಯಾಯೋಗವು.

ಜನನಲಗ್ನದಲ್ಲಿ ಒಂದು ಪಾಪಗ್ರಹವಿದ್ದು ಆ ಸ್ಥಾನವು ಶತ್ರುಗ್ರಹವಾಗಿ ಲಗ್ನದಲ್ಲಿ ಎರಡು ಶುಭಗ್ರಹಗಳು ಒಂದು ಪಾಪಗ್ರಹಯುಕ್ತವಾಗಿದ್ದರೆ ವಿಷಕನ್ಯಾಯೋಗವಾಗುವದು.

ಶನಿವಾರ ಬಿದಿಗೆ ತಿಥಿ ಅಶ್ಲೇಷ ನಕ್ಷತ್ರ ಕೂಡಿದರೆ, ಮತ್ತು ಮಂಗಳವಾರ ಸಪ್ತಮಿ ತಿಥಿ ಶತತಾರ ನಕ್ಷತ್ರ ಕೂಡಿದರೆ ಹಾಗೂ ರವಿವಾರ ದ್ವಾದಶಿ ತಿಥಿ ವಿಶಾಖ ನಕ್ಷತ್ರ ಕೂಡಿದರೆ ಈ ಪ್ರಕಾರ ಇದ್ದ ಸಮಯದಲ್ಲಿ ಜನನವಾದ ಸ್ತ್ರೀಯಳಿಗೆ ವಿಷಕನ್ಯಾಯೋಗವು.

— ವಿಷಕನ್ಯಾಯೋಗ ಫಲ ವಿಚಾರ —

ವಿಷಕನ್ಯಾಯೋಗದಲ್ಲಿ ಜನನವಾದ ಸ್ತ್ರೀಯಳಿಗೆ ದುಃಖವು, ಸಂತತಿ ನಷ್ಟವು ಭಾಗ್ಯಹೀನತ್ವವು ವಸ್ತ್ರಾಲಂಕಾರ ವರ್ಜ್ಯವು.

— ವಿಷಕನ್ಯಾಯೋಗಕ್ಕೆ ದೋಷ ಪರಿಹಾರ —

ಸ್ತ್ರೀಯಳ ಜನನ ಲಗ್ನದಿಂದ ಸಪ್ತಮ ಸ್ಥಾನದಲ್ಲಿ ಅಥವಾ ೧ ನೆಯ ಸ್ಥಾನದಲ್ಲಿ ಅಥವಾ ಚಂದ್ರರಾಶಿಯಿಂದ ಸಪ್ತಮ ಸ್ಥಾನದಲ್ಲಿ ಶುಭಗ್ರಹವಿದ್ದರೆ ಅಥವಾ ಸ್ವಕ್ಷೇತ್ರದಲ್ಲಿರುವ ಶುಭಗ್ರಹವಿದ್ದರೆ ವಿಷಕನ್ಯಾಯೋಗ ದೋಷ ಪರಿಹಾರವಾಗುವದು.

— ವಧೂವರರ ಜಾತಕ ಸಮ್ಮೇಳನ —

ವಿವಾಹಕ್ಕೆ ಯೋಗ್ಯರಾದ ವಧೂವರರ ಜಾತಕಗಳನ್ನು ನೋಡಿ ವಿಮರ್ಶೆ ಮಾಡಿ ಈ ಸ್ತ್ರೀ-ಪುರುಷರು ವಿವಾಹಕ್ಕೆ ಯೋಗ್ಯರಾಗಿರುವರೋ ಹೇಗೆ ಎಂಬುದನ್ನು ನಿರ್ಣಯಿಸಬೇಕು. ವಿವಾಹದ ನಂತರ ಈ ಸತಿ ಪತಿಗಳಿಗೆ ದಾಂಪತ್ಯಜೀವನವು, ಸುಖಕರವಾಗಿ ಸಾಗುವದೋ ? ಸಂತಾನ, ಸೌಭಾಗ್ಯಗಳುಂಟಾಗುವದೋ ಆಯುಷ್ಯ, ಆರೋಗ್ಯಗಳು ಇವೆಯೋ ? ಇತ್ಯಾದಿ ಸಂಗತಿ

ಗಳನ್ನು ಅವರಿಬ್ಬರ ಜಾತಕಗಳನ್ನು ನೋಡಿ ವಿಚಾರ ಮಾಡುವದು ಶಾಸ್ತ್ರ ಸಮ್ಮತವಾಗಿದೆ ಮತ್ತು ಇದು ರೂಢಿಯೂ ಬಹುಕಾಲದಿಂದ ಬಂದಿದೆ. ಇದಕ್ಕೆ ಮೇಳಾಮೇಳಿ ನೋಡುವದು, ಸಮ್ಮೇಳನ ನೋಡುವದು. ಅಥವಾ ಸಾಲಾವಳಿ ನೋಡುವದು ಎಂದು ಹೇಳುತ್ತಾರೆ. ಈ ಸಾಲಾವಳಿಯನ್ನು (೧) ದಶಾಸಂಧಿ (೨) ಗ್ರಹಗಳ ಬಲಾಬಲ (೩)ಕೂಟ ಸಾಲಾವಳಿ ಎಂಬುದಾಗಿ ೩ ವಿಧವಾಗಿ ನೋಡುತ್ತಾರೆ.

೧) ದಶಾಸಂಧಿ ಸಾಲಾವಳಿ ಇದನ್ನು ಮಲಬಾರ (ಕೇರಳರಾಜ್ಯ) ದಲ್ಲಿ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೆಲವರು ನೋಡುತ್ತಿದ್ದಾರೆ. ಈ ಸಾಲಾವಳಿಯನ್ನು ಉಳಿದ ಕಡೆಗಳಲ್ಲಿ ನೋಡುವದಿಲ್ಲ. ಒಂದು ಮಹಾದಶೆಯನ್ನು ಬಿಟ್ಟು ಇನ್ನೊಂದು ಮಹಾದಶೆ ಬರುವ ಕಾಲವನ್ನು ಸಂಧಿಕಾಲನೆನ್ನುವರು. ಈ ಸಂಧಿ ವಧೂವರರಿಗೆ ಯಾವ ಕಾಲಕ್ಕೆ ಬರುವವು ಎಂಬುದನ್ನು ಜಾತಕಗಳ ಸಹಾಯ ಕಾಲವು ಪ್ರತಿಯೊಬ್ಬರಿಗೂ ಉಂಟಾಗುವದು. ಇಂಥದಶಾ ಸಂಧಿ ಕಾಲಗಳು ಒಂದ ನಿಶ್ಚಯ ಮಾಡಿಕೊಳ್ಳಬೇಕು. ಈ ಸಂಧಿಕಾಲಗಳು ಕೂಡಬಾರದು. ಅಂದರೆ ವಧೂವರರ ಸಂಧಿಕಾಲಗಳು ೬ ತಿಂಗಳು ಮ ಗೂ ಅದಕ್ಕಿಂತ ಹೆಚ್ಚು ಅವಧಿ ಅಂತರವಿರಬೇಕು. ಹಾಗಿದ್ದರೆ ಶುಭಪ್ರದ ಇಲ್ಲದಿದ್ದರೆ ಅದು ದಶಾ ಸಂಧಿಯಾಗ ವದರಿಂದ ಸಾಲಾವಳಿ ಬರುವದಿಲ್ಲವೆಂದು ತಿಳಿಯ ತ್ತಾರೆ.

೨) ಗ್ರಹಗಳ ಬಲಾಬಲ–ವಧೂವರರ ಜನಸಲಗ್ನ ಕುಂಡಲಿಗಳಲ್ಲಿ ಯಾವ ದೋಷಗಳೂ ಇರದಿದ್ದರೆ, ಬಹಳ ಉತ್ತಮ. ಸಾಲಾವಳಿ ಬರುವದೆಂದು ಹೇಳಬೇಕು. ಹಾಗೆ ಇರದೆ ಪಾಪಗ್ರಹಗಳಾದ ಕುಜ, ಶನಿ, ರಾಹು, ಕೇತು ಇವರು ಜನಲಗ್ನದಿಂದ ಮತ್ತು ಚಂದ್ರನಿಂದ ೧–೨–೪–೭–೮–೧೨ ಈ ಸ್ಥಾನಗಳಲ್ಲಿ ಇದ್ದರೆ ದೋಷಕರವು. ಈ ದೋಷಗಳು ಎರಡೂ ಜಾತಕಗಳಲ್ಲಿ ಸಮಾನವಾಗಿದ್ದರೆ ಸರಿ ಎಂತಲೂ, ಸ್ತ್ರೀ ಕುಂಡಲಿಗಿಂತ ಪುರುಷ ಕುಂಡಲಿಯಲ್ಲಿ ೧ ದೋಷ ಹೆಚ್ಚಿಗಿದ್ದರೂ ಸಾಲಾವಳಿ ಬರುವದೆಂದು ಹೇಳಬೇಕು ಹಾಗಿರದೆ ಸ್ತ್ರೀಯಳ ಕುಂಡಲಿಯಲ್ಲಿ ಪುರುಷನ ಕುಂಡಲಿಗಿಂತ ಹೆಚ್ಚು ದೋಷ ಗಳಿದ್ದರೆ ಸಾಲಾವಳಿ ಬರುವದಿಲ್ಲವೆಂದು ತಿಳಿಯಬೇಕು. ಇದರಲ್ಲಿ ವಿಶೇಷ ವೇನೆಂದರೆ ಕುಜ, ಶನಿ, ರಾಹು, ಕೇತುಗಳಲ್ಲಿ ಮೊದಲು ಹೇಳಿದ ಗ್ರಹವು ನಂತರ

ರದ ಗ್ರಹಕ್ಕಿಂತ ಬಲಿಷ್ಠವಾದದ್ದು ಅಂದರೆ ಕೇತುವಿಗಿಂತ ರಾಹುವು ಹೆಚ್ಚು ದೋಷವುಳ್ಳವನು. ರಾಹುಗಿಂತ ಶನಿಯು ಹೆಚ್ಚು ದೋಷಕರನು. ಮತ್ತು ಶನಿಗಿಂತ ಕುಜನು ಹೆಚ್ಚು ದೋಷದಾಯಕನು. ಇರುವದರಿಂದ ಎಲ್ಲ ಗ್ರಹಗಳನ್ನೂ ಬಿಟ್ಟು ಹೆಚ್ಚು ದೋಷಕರನಾದ ಕುಜನನ್ನೇ ನೋಡುವದು ವಾಡಿಕೆಯಾಗಿದೆ ಆದಾಗ್ಯೂ ಕುಜನೊಡನೆ ಶನಿ, ರಾಹು, ಕೇತುಗಳ ದೋಷವನ್ನೂ ನೋಡಬೇಕು, ಹಾಗೂ ಈ ಗ್ರಹಗಳಿಗೆ ಜನನ ಕುಂಡಲಿಯಲ್ಲಿ ೪–೨–೧೨-೧-೮ ೭ ಈ ಸ್ಥಾನಗಳು ಕ್ರಮವಾಗಿ ಹಿಂದಿನದಕ್ಕಿಂತ ಮುಂದಿನದು ಹೆಚ್ಚು ಬಲವುಳ್ಳದ್ದೆಂದು ತಿಳಿಯಬೇಕು ಅಂದರೆ ೪ ನೆಯ ಸ್ಥಾನಕ್ಕಿಂತ ೨ ನೆಯದು ೨ ನೆಯದಕ್ಕಿಂತ ೧೨ ನೆಯದು, ಇವೆಲ್ಲವುಗಳಿಗಿಂತ ೭ ನೆಯ ೧ ಹೆಚ್ಚು ಬಲಾಢ್ಯವಾದ ಸ್ಥಾನವೆಂದು ತಿಳಿಯಬೇಕು. ಈ ಸ್ಥಾನಗಳು ಹೆಚ್ಚು ಬಲಾಢ್ಯವಾದಂತೆ ದೋಷವೂ ಹೆಚ್ಚು ಹೆಚ್ಚು ಬಲವುಳ್ಳದ್ದಾಗುವದು.

ಮಂಗಳ ದೋಷ ವಿಚಾರ

ಜನನ ಲಗ್ನದಿಂದಾಗಲಿ ಚಂದ್ರಲಗ್ನದಿಂದಾಗಲಿ ಇಲ್ಲವೆ ಶುಕ್ರನಿಂದಾಗಲಿ ೨–೪-೭-೮-೧೨ ಸ್ಥಾನಗಳಲ್ಲಿ ಕುಜನಿದ್ದರೆ ಆ ಸ್ತ್ರೀಯಳು ವಿಧವೆಯಾಗುವಳು ಲಗ್ನದಿಂದ ೮ನೇ ಸ್ಥಾನದಲ್ಲಿ ಇಲ್ಲವೆ ರಾಶಿ ಕುಂಡಲಿಯಲ್ಲಿ ೮ನೇ ಸ್ಥಾನದಲ್ಲಿ ಅಶುಭಗ್ರಹವಿದ್ದರೆ ವೈಧವ್ಯ ಪ್ರಾಪ್ತಿ ಎಂದು ವರಾಹ ಮಿಹಿರನ ಅಭಿಪ್ರಾಯ ಇವೆರಡೂ ಅಷ್ಟಮ ಸ್ಥಾನಗಳಲ್ಲಿ ಯಾವ ಅಷ್ಟಮ ಸ್ಥಾನದಲ್ಲಿ ಬಲಿಷ್ಠವಾದ ಪಾಪಗ್ರಹ ಇರುವದೋ ಆ ಗ್ರಹವು ವೈಧವ್ಯವನ್ನುಂಟು ಮಾಡುವದು ಈ ಪಾಪಗ್ರಹವು ನವಾಂಶ ಕುಂಡಲಿಯಲ್ಲಿ ಯಾವ ಗ್ರಹದ ರಾಶಿಯಲ್ಲಿರುವದೋ ಆ ರಾಶಿಯ ಅಧಿಪತಿಯ ದಶಾ ಕಾಲದಲ್ಲಿ ಈ ಗ್ರಹದ ಅಂತರದಶೆಯಲ್ಲಿ ವೈಧವ್ಯ ಪ್ರಾಪ್ತಿಯು ಆದರೆ ದ್ವಿತೀಯ ಸ್ಥಾನದಲ್ಲಿ ಶುಭಗ್ರಹವಿದ್ದರೆ ಆ ಸ್ತ್ರೀಯಳೇ ತನ್ನ ಪತಿಯ ಮುಂದೆ ಮರಣ ಹೊಂದುವಳು. ಅಷ್ಟಮ ಸ್ಥಾನದಲ್ಲಿದ್ದ ಅಶುಭವನ್ನು ದ್ವಿತೀಯ ಸ್ಥಾನದಲ್ಲಿದ್ದ ಶುಭಗ್ರಹವು ದೂರ ಮಾಡುವದು. ೨ನೇ ಸ್ಥಾನವು ಕೌಟುಂಬಿಕ ಸುಖವನ್ನು ತೋರಿಸುವದು. ೧೨ನೇ ಸ್ಥಾನದಲ್ಲಿದ್ದ ಕುಜನು ೭ನೇ ಸ್ಥಾನವನ್ನು ನೋಡುವದರಿಂದ ಆ ಕನ್ಯೆಯ ದಾಂಪತ್ಯ ಸುಖವು ಹಾಳಾಗುವದು. ೭ನೇ ಸ್ಥಾನದಲ್ಲಿರುವ ಕುಜನು ೭ನೇ

ಸ್ಥಾನವನ್ನು ನೋಡುವದರಿಂದ ಮಾಂಗಲ್ಯ ಯೋಗಕ್ಕೆ ಧಕ್ಕೆ ತಗಲುವದು. ಕುಜನು ಚತುರ್ಥ ಸ್ಥಾನದಲ್ಲಿದ್ದರೆ ಸಪ್ತಮ ಸ್ಥಾನವು ಅವನ ದೃಷ್ಟಿಯಲ್ಲಿ ಬರುವದು. ಸಪ್ತಮ ಸ್ಥಾನದಿಂದ ಇಲ್ಲವೆ ಅಷ್ಟಮ ಸ್ಥಾನದಿಂದ ಕುಜನು ದ್ವಿತೀಯ ಸ್ಥಾನವನ್ನು ನೋಡುವನು.

ಕರ್ಕ ಇಲ್ಲವೆ ಸಿಂಹ ಲಗ್ನದಲ್ಲಿ ಜನಿಸಿದವರಿಗೆ ಅಥವಾ ಕುಂಡಲಿಯಲಿ ಕರ್ಕ ೧೦ಹ ರಾಶಿಯಲ್ಲಿ ಕುಜನಿದ್ದರೂ ದೋಷವಿಲ್ಲೆಂದು ಕೆಲವರ ಅಭಿಪ್ರಾಯ. ಇವೆರಡೂ ಲಗ್ನಗಳಿಗೆ, ಕುಜನು ಯೋಗಕಾರಕನಾಗುವನು. ಆದ್ದರಿಂದ ಕುಜ ದೋಷವಿಲ್ಲ ಕುಜದೋಷದಿಂದ ಮಾಂಗಲ್ಯಕ್ಕೆ ಪೆಟ್ಟು ಬೀಳದಿದ್ದರೂ ದಾಂಪತ್ಯ ಜೀವನದಲ್ಲಿ ಕೆಲವು ಕಾಲ ಪತಿಪತಿಗಳು ಅಗಲಿಕೊಂಡಿದ್ದು ಜೀವನ ಸಾಗಿಸ ಬೇಕಾಗುವದು ಲಗ್ನದಲ್ಲಿ ಇಲ್ಲವೆ ಪಂಚಮ ಸ್ಥಾನದಲ್ಲಿ ಕುಜನಿದ್ದರೆ ದಂಪತಿ ಗಳು ಪರಸ್ಪರ ಕಲುಷಿತ ಮನಸ್ಸುಳ್ಳವರಾಗಿ ಕೆಲಕಾಲವಾದರೂ ಅಗಲಿರಬೇಕಾ ಗುವದು. ಈ ರೀತಿಯಿಂದ ದಾಂಪತ್ಯ ಸುಖಕ್ಕೆ ಅಡ್ಡಿಯು, ಸಪ್ತಮ ಸ್ಥಾನ ದಲ್ಲಿದ್ದ ಕುಜನು ಬುಧ ಗುರು, ಶುಕ್ರದಿಂದ ನೋಡಲ್ಪಟ್ಟರೆ ಕುಜದೋಷ ಹೋಗುವದೆಂದು ಕೆಲವರ ಅಭಿಪ್ರಾಯ, ಲಗ್ನದಿಂದ ಇಲ್ಲವೆ ಚಂದ್ರನಿಂದ ಸಪ್ತಮ ಸ್ಥಾನದಲ್ಲಿ ಶುಕ್ರಗ್ರಹವಿದ್ದರೆ ಸೌಖ್ಯವು. ಸಪ್ತಮ ಸ್ಥಾನದಲ್ಲಿ ಶುಭ ಗ್ರಹವಿದ್ದರೆ ಕುಜ ದೋಷದ ಬಗ್ಗೆ ವಿಚಾರ ಮಾಡಬೇಕು.

ಶುಕ್ರನಿದ್ದ ರಾಶಿಯಿಂದ ೪ ೮-೧೨ ಸ್ಥಾನಗಳಲ್ಲಿ ಅಶುಭ ಗ್ರಹಗಳಿದ್ದರೆ ಇಲ್ಲವೆ ಶುಕ್ರನು ಅಶುಭ ಗ್ರಹಗಳಿಂದ ನೋಡಲ್ಪಟ್ಟರೆ ಗಂಡನು ಗಂಡಾಂತರ ದಲ್ಲಿ ಬೀಳುವನು. ಶನಿ ಮಂಗಳರಲ್ಲಿ ದಾಂಪತ್ಯ ಸುಖವನ್ನು ಕೆಡಿಸಲು ಮಂಗ ಳನೇ ಬಹು ಕ್ರೂರನು, ಈ ಕುಜದೋಷ ಪರಿಹಾರಕ್ಕೆ ಪತಿಯ ಕುಂಡಲಿ ಯಲ್ಲಿಯೂ ಇದೇ ಪ್ರಕಾರ ದೋಷವಿರಬೇಕು

ಯಾವ ಸ್ತ್ರೀಯಳ ಜನನ ಕುಂಡಲಿಯಲ್ಲಿ ೭ ನೇ ಸ್ಥಾನವು ದುರ್ಬಲ ವಿದ್ದು ಆ ಸ್ಥಾನವನ್ನು ಶುಭಗ್ರಹಗಳು ನೋಡದಿದ್ದರೆ ಇಲ್ಲವೆ ೭ ನೇ ಸ್ಥಾನ ದಲ್ಲಿ ಶನಿ ಬುಧ ಕೂಡಿಕೊಂಡಿದ್ದು ಅಶುಭ ಗ್ರಹಗಳ ದೃಷ್ಟಿಯುಳ್ಳವರಾಗಿದ್ದರೆ ಆ ಕನ್ಯೆಯನ್ನು ತೆಗೆದುಕೊಳ್ಳಬಾರದು, ೭ನೇ ಸ್ಥಾನದಲ್ಲಿ ಚಂದ್ರನು ಶುಕ್ರ, ಮಂಗಳರೊಡನೆ ಕೂಡಿ ಇರಬಾರದು. ಹೀಗಿದ್ದರೆ ದೋಷವುಂಟಾಗುವದು.

ಜನನ ಕುಂಡಲಿಯು ಮಂಗಳ ದೋಷವನ್ನು ನೋಡುವಾಗ ಕೆಲವರು ೨ನೆಯ ಸ್ಥಾನವನ್ನು ಬಿಟ್ಟು ಕೇವಲ ೧-೪-೭-೮-೧೨ ಸ್ಥಾನಗಳಲ್ಲಿ ಕುಜನಿದ್ದರೆ ಮಂಗಳ ದೋಷ ಇರುವದೆಂದು ಹೇಳುತ್ತಾರೆ. ಈ ಸ್ಥಾನಗಳಲ್ಲಿ ಕುಜನಿರದಿದ್ದರೂ ಪಾಪಗ್ರಹಗಳೊಡನೆ ಕೂಡಿಕೊಂಡು ಈ ಸ್ಥಾನಗಳನ್ನು ನೋಡುತ್ತಿದ್ದರೂ ಅನಿಷ್ಟ ಫಲ ಉಂಟಾಗುವದು. ಕುಜನು ಈ ಸ್ಥಾನಗಳಲ್ಲಿ ಇದ್ದರೂ ರವಿ ಚಂದ್ರರ ಕ್ಷೇತ್ರಗಳಾದ ಕರ್ಕ, ಸಿಂಹ ರಾಶಿಗಳಲ್ಲಾಗಲಿ, ಉಚ್ಚ ಸ್ವಕ್ಷೇತ್ರಗಳಾದ ಮಕರ, ಮೇಷ, ವೃಶ್ಚಿಕ ರಾಶಿಗಳಲ್ಲಾಗಲಿ ಇದ್ದರೆ ಕುಜನು ದೋಷಕರನಾಗದೆ ಶುಭ ಫಲವನ್ನುಂಟು ಮಾಡುವನು. ವಧೂವರರ ಜನನ ಕುಂಡಲಿಯಲ್ಲಿ ೧ ೪-೭ ೮-೧೨ ಈ ಸ್ಥಾನಗಳಲ್ಲಿ ಕುಜನಿದ್ದು ಉಚ್ಚ, ಮಿತ್ರ ಸ್ವಕ್ಷೇತ್ರನಾಗಿದ್ದರೂ ಚಂದ್ರ ಶುಕ್ರರಿಂದ ಕೂಡಿದ್ದರೆ ದೋಷ ಉಂಟಾಗದೆ, ದಂಪತಿಗಳಿಗೆ ಆಯು, ಆರೋಗ್ಯ, ಸತ್ಪುತ್ರಪ್ರಾಪ್ತಿಯುಂಟಾಗುವವು. ಹೀಗಿರದೆ ಕುಜನೊಬ್ಬನೇ ಇದ್ದರೆ ದುಷ್ಟ ಫಲ ಕೊಡದೆ ಬಿಡಲಾರನು.

ಕುಜದೋಷವು ವಧುವಿನ ಕುಂಡಲಿಯಲ್ಲಿ ಇದ್ದರೆ ವರನಿಗೆ ಅನಿಷ್ಟವು ವರನ ಕುಂಡಲಿಯಲ್ಲಿ ಇದ್ದರೆ ವಧುವಿಗೆ ಅರಿಷ್ಟವು. ವಧೂವರರಲ್ಲಿ ಒಬ್ಬರಿಗೆ ಕುಜದೋಷವಿದ್ದರೆ, ಆ ವಿವಾಹವನ್ನು ಮಾಡಬಾರದು. ಆದರೆ ಕುಜ ದೋಷವು ಇಬ್ಬರ ಕುಂಡಲಿಯಲ್ಲಿಯೂ ಇದ್ದದ್ದಾದರೆ ಅವರ ವಿವಾಹವನ್ನು ಅವಶ್ಯವಾಗಿ ಮಾಡಬೇಕು.

ಕುಜನು ತಾನು ಇರುವ ಸ್ಥಾನದಿಂದ ೪-೭-೮ ಈ ಸ್ಥಾನಗಳನ್ನು ಸಂಪೂರ್ಣ ದೃಷ್ಟಿಯಿಂದ ನೋಡುತ್ತಾನೆ. ವಧೂವರರ ಕುಂಡಲಿಯಲ್ಲಿ ಸಪ್ತಮ ಸ್ಥಾನವು ಬಹು ಮುಖ್ಯವಾದದ್ದು ಯಾಕಂದರೆ ವರನ ಕುಂಡಲಿಯಲ್ಲಿ ಸಪ್ತಮ ಸ್ಥಾನವು ಪತ್ನಿಯ ಸ್ಥಾನವು. ವಧುವಿನ ಕುಂಡಲಿಯಲ್ಲಿ ಸಪ್ತಮಸ್ಥಾನವು ಪತಿಯ ಸ್ಥಾನವು. ಆ ಸ್ಥಾನದಲ್ಲಿ ಕುಜನಿದ್ದರೆ ಪತಿ ಪತ್ನಿಯರಿಗೆ ಸೌಖ್ಯಸಿಗಲಾರದು. ಯಾಕಂದರೆ ಸಪ್ತಮದಲ್ಲಿ ಕುಜನಿರುವದರಿಂದ ಅವನಿಗೆ ಲಗ್ನದಲ್ಲಿ ಸಂಪೂರ್ಣ ದೃಷ್ಟಿ ಉಂಟಾಗುವದು. ಕುಂಡಲಿಯಲ್ಲಿ ಲಗ್ನ (೧ನೆಯಸ್ಥಾನ)ವು ತನು (ದೇಹ) ಸ್ಥಾನವು ಅದು ದೋಷಯುಕ್ತವಾದರೆ ಅದರ ಪರಿಣಾಮವು ದೇಹದ ಮೇಲೆ ಆಗುವದು.

ಲಗ್ನದಲ್ಲಿ ಕುಜನಿದ್ದರೆ—ಅವನ ಸಂಪೂರ್ಣ ದೃಷ್ಟಿಯು ಸಪ್ತಮ ಸ್ಥಾನದ ಮೇಲೆ ಬೀಳುವದರಿಂದ ಪತಿಗೆ ಅಥವಾ ಪತ್ನಿಗೆ ಕುಜನು ಮಾರಕನಾಗುವನು. ಲಗ್ನದಲ್ಲಿ ಕುಜನಿದ್ದರೆ, ಅವನ ದೃಷ್ಟಿಯು ಚತುರ್ಥ (೪ನೆಯ) ಸ್ಥಾನದ ಮೇಲೆಯೂ, ಬೀಳುವದರಿಂದ ಲಗ್ನದಲ್ಲಿರುವ ಕುಜನು ಮಾತೃ (ತಾಯಿ) ಗೆ ಮಾರಕನಾಗುವನು. ಮತ್ತು ಲಗ್ನದಲ್ಲಿರುವ ಕುಜನ ದೃಷ್ಟಿಯು ಅಷ್ಟಮ (೮ ನೆಯ) ಸ್ಥಾನದಲ್ಲಿಯೂ ಇರುವದು. ಅಷ್ಟಮಸ್ಥಾನವು ರೋಗೋತ್ಪತ್ತಿಗೆ ಮೂಲಸ್ಥಾನವು. ಈ ಸ್ಥಾನದಲ್ಲಿ ಕುಜನ ದೃಷ್ಟಿ ಇದ್ದುದಾದರೆ ಸ್ವಂತಕ್ಕೆ ಅಂದರೆ-ಸ್ವತಃ ಜಾತಕನಿಗೆ ಅಥವಾ ಜಾತಕಳಿಗೆ ಮಾರಕವಾಗುವದು. ಆದ್ದರಿಂದ ಲಗ್ನದಲ್ಲಿ ದೋಷವಿದ್ದರೆ ಪತಿಗೆ ಅಥವಾ ಪತ್ನಿಗೆ ಮಾರಕ ತಾಯಿಗೆ ಮಾರಕ ಮತ್ತು ಸ್ವತಃಕ್ಕೆ ಮಾರಕವು.

ವ್ಯಯ (೧೨ ನೆಯ) ಸ್ಥಾನಕ್ಕೆ ಕುಜದೋಷ:—ವಿದ್ದುದಾದರೆ ಅಂದರೆ ೧೨ ನೆಯ ಸ್ಥಾನದಲ್ಲಿ ಕುಜನಿದ್ದರೆ ಅನೇಕ ರೀತಿಯ ಗಂಡಾಂತರ, ಆಪತ್ತು, ಸಂಕಟ, ಅಪಘಾತ, ಅಪಮೃತ್ಯುಗಳಿಗೆ ಗುರಿಯಾಗಬೇಕಾಗುವದು. ವ್ಯಯಸ್ಥಾನದಲ್ಲಿ ಕುಜನಿದ್ದರೆ ಅವನ ದೃಷ್ಟಿಯು ತೃತೀಯ (೩ನೆಯ) ಸ್ಥಾನದಲ್ಲಿ ಬೀಳುವದರಿಂದ ಅಣ್ಣ-ತಮ್ಮಂದಿರರಿಗೆ ಪೀಡೆಯು ಮತ್ತು ೬ ನೆಯ ಸ್ಥಾನದಲ್ಲಿ ದೃಷ್ಟಿ ಬೀಳುವದರಿಂದ ತಾಯಿಯ ಕಡೆಯವರಿಗೆ ಪೀಡಾಕರವು.

ಚತುರ್ಥ (೪ನೆಯ) ಸ್ಥಾನದಲ್ಲಿ ಕುಜನಿದ್ದರೆ—ಆ ಕುಜನು ತಾಯಿಗೆ ಮಾರಕನಾಗುವನು. ಸಪ್ತಮದಲ್ಲಿ ದೃಷ್ಟಿ ಇರುವದರಿಂದ ಪತಿ ಅಥವಾ ಪತ್ನಿಗೆ ಮಾರಕನು. ದಶಮ ಸ್ಥಾನವು ಅವನ ದೃಷ್ಟಿಯಲ್ಲಿ ಬರುವದರಿಂದ ಉದ್ಯೋಗ ಹಾನಿಯು, ಅಪಮಾನವು, ಏಕಾದಶ ಸ್ಥಾನವು ದೃಷ್ಟಿಗೆ ಒಳಪಡುವದರಿಂದ ಅನೇಕ ವಿಧವಾಗಿ ಧನನಾಶವು, ಅಪಜಯವು.

ಅಷ್ಟಮ (೮ ನೆಯ) ಸ್ಥಾನದಲ್ಲಿ ಕುಜನಿದ್ದರೆ—ಇದು ಮೃತ್ಯುಸ್ಥಾನವು ಈ ಸ್ಥಾನದಲ್ಲಿರುವ ಕುಜನಿಗೆ ಏಕಾದಶಸ್ಥಾನ, ದ್ವಿತೀಯಸ್ಥಾನ, ತೃತೀಯ ಸ್ಥಾನಗಳು ಅವನ ದೃಷ್ಟಿಯಲ್ಲಿ ಬರುವದರಿಂದ ಧನಹಾನಿ, ಸಂಪತ್ತು ನಾಶ, ಬಂಧುಗಳಿಗೆ ಪೀಡೆ ಈ ಪ್ರಕಾರ ಕ್ರಮವಾಗಿ ದುಷ್ಟ ಫಲಗಳು ಜರುಗುವವು.

ವಧುವಿನ ಅಥವಾ ವರನ ಜನನ ಕುಂಡಲಿಯಲ್ಲಿ ಕುಜದೋಷವಿ... ಇದು ತಿಳಿದಬಳಿಕ ಇನ್ನೊಂದು ಕುಂಡಲಿಯಲ್ಲಿ ೧-೪-೭-೮-೧೨ ಈ ಸ್ಥಾ...

ಗಳಲ್ಲಿ ಶನಿ, ರಾಹು, ರವಿ ಇವರಲ್ಲಿ ಒಂದು ಗ್ರಹವಿದ್ದರೆ ಕುಜದೋಷವು ಸ್ವಲ್ಪ ಕಡಿಮೆಯಾಗುವದು. ಮತ್ತು ದೋಷಿಯಾದ ಕುಜನು ಶನಿ, ರಾಹು, ರವಿಗಳೊಂದಿಗೆ ಕೂಡಿದ್ದರೆ ಅವನ ದೋಷದಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗುವದು. ಅಂದರೆ ವಧೂವರರ ಕುಂಡಲಿಯಲ್ಲಿ ಒಬ್ಬರಿಗೆ ಕುಜದೋಷವಿದ್ದರೆ ಇನ್ನೊಬ್ಬರ ಕುಂಡಲಿಯಲ್ಲಿ ಬಲವಂತನಾದ ಶನಿ ಅಥವಾ ರಾಹು ಇದ್ದರೆ ಮಂಗಳನ ಕ್ರೂರ ದೋಷವು ಕಡಿಮೆ ಆಗುವದು.

ಕುಜ ದೋಷಕ್ಕೆ ಅಪವಾದ— ಜನನ ಕುಂಡಲಿಯಲ್ಲಿ ಕುಜನು ೧-೪-೭-೮-೧೨ ಈ ಸ್ಥಾನಗಳಲ್ಲಿ ಇದ್ದಾಗ ಆವನು ಭರಣಿ,ಕೃತ್ತಿಕ,ಆರಿದ್ರಾ,ಆಶ್ಲೇಷ, ಮಘ, ಹುಬ್ಬ, ವಿಶಾಖ, ಜ್ಯೇಷ್ಠ, ಮೂಲ ಪೂರ್ವಾಷಾಢ, ಧನಿಷ್ಠ, ಪೂರ್ವ. ಭಾದ್ರ ಈ ನಕ್ಷತ್ರಗಳಲ್ಲಿ ಇದ್ದರೆ ಅಧಿಕ ದುಷ್ಟ ಫಲವು. ಇವುಗಳನ್ನು ಬಿಟ್ಟು ಉಳಿದ ಅಶ್ವಿನಿ, ರೋಹಿಣಿ, ಮೃಗಶಿರ, ಪುನರ್ವಸು, ಪುಷ್ಯ, ಉತ್ತರ, ಹಸ್ತ, ಚಿತ್ತ, ಸ್ವಾತಿ, ಅನುರಾಧ, ಉತ್ತರಾಷಾಢ, ಶ್ರವಣ. ಶತತಾರ, ಉತ್ತರಾ, ಭಾದ್ರ, ರೇವತಿ ಈ ನಕ್ಷತ್ರಗಳಲ್ಲಿದ್ದರೆ ಅಷ್ಟೊಂದು ದೋಷಿ ಆಗಲಾರನು.

ಜನನ ಕುಂಡಲಿಯಲ್ಲಿ ಗುರು ಅಥವಾ ಶುಕ್ರರು ಬಲಿಷ್ಠರಿದ್ದು ಲಗ್ನ ಅಥವಾ ಸಪ್ತಮ ಸ್ಥಾನದಲ್ಲಿದ್ದರೆ ಕುಜದೋಷ ಉಂಟಾಗುವದಿಲ್ಲ.

ಜನನ ಕುಂಡಲಿಯಲ್ಲಿ ಕುಜನು ವಕ್ರೀ, ಅಸ್ತಂಗತ, ನೀಚರಾಶಿ ಅಥವಾ ಶತ್ರುಕ್ಷೇತ್ರಗಳಲ್ಲಿ ಇದ್ದರೆ ಕುಜದೋಷ ತಗಲುವದಿಲ್ಲ.ಜನನ ಲಗ್ನದಲ್ಲಿ ಅಥವಾ ಸಪ್ತಮ ಸ್ಥಾನದಲ್ಲಿ ಬಲಿಷ್ಠರಾದ ಗುರು ಚಂದ್ರರು ಕೂಡಿದ್ದರೆ ಕುಜದೋಷವಾಗುವದಿಲ್ಲ.

ವಧೂವರರ ಜನ್ಮ ರಾಶಿಗಳ ಅಧಿಪತಿಗಳು ಪರಸ್ಪರ ಮಿತ್ರರಿದ್ದರೆ ಅಥವಾ ಜನ್ಮ ನಕ್ಷತ್ರಗಳು ಒಂದೇ ಗುಣದವರಾಗಿದ್ದರೆ ಇಲ್ಲವೆ ಸಾಲಾವಳಿಯಿಂದ ವಧೂವರರಿಗೆ ೨೭ ಕ್ಕಿಂತ ಹೆಚ್ಚು ಗುಣ ಬಂದಿದ್ದರೆ ಕುಜದೋಷವು ಕಡಿಮೆಯಾಗುವದು.

ಒಬ್ಬರ ಕುಂಡಲಿಯಲ್ಲಿ ಕುಜದೋಷವಿದ್ದಾಗ ಇನ್ನೊಬ್ಬರ ಕುಂಡಲಿಯಲ್ಲಿ ೧-೪-೭-೮-೧೨ ಸ್ಥಾನಗಳಲ್ಲಿ ಬಲಾಢ್ಯನಾದ ಶನಿ ಇದ್ದರೆ ಕುಜದೋಷ ಬರುವದಿಲ್ಲ.

ಜನನ ಕುಂಡಲಿಯಲ್ಲಿ ಕುಜನು ೧-೪-೭-೮-೧೨ ಸ್ಥಾನಗಳಲ್ಲಿ ಇದ್ದರೂ ಕರ್ಕ, ಸಿಂಹ, ಮೇಷ, ವೃಶ್ಚಿಕ, ಮಕರ ಈ ರಾಶಿಗಳಲ್ಲಿ ಇದ್ದುದಾದರೆ ಕುಜ ದೋಷ ಉಂಟಾಗುವದಿಲ್ಲ ಆದರೆ ಕುಜನು ಕ್ರೂರ ನಕ್ಷತ್ರಗಳಲ್ಲಿದ್ದು ಪಾಪ ಗ್ರಹಗಳಿಂದ ಕೂಡಿದ್ದರೆ ಪಾಪಗ್ರಹಗಳಿಂದ ನೋಡಲ್ಪಟ್ಟರೆ ಅಶುಭ ಪ್ರದ ನಾಗುವನು.

— ಕೂಟ ಸಾಲಾವಳಿ —

ಕೂಟ ಸಾಲಾವಳಿಯನ್ನು ವಧೂವರರ ಜನ್ಮನಕ್ಷತ್ರ, ಜನ್ಮ ರಾಶಿಯಿಂದ ವಿಚಾರಿಸುವರು. ಈ ಕೂಟ ಸಾಲಾವಳಿಗೆ ಒಟ್ಟು ೩೬ ಗುಣಗಳಿದ್ದು ೧೮ ಗುಣಗಳು ಅಥವಾ ಅವಕ್ಕೂ ಹೆಚ್ಚು ಬಂದರೆ ಆ ವಿವಾಹವು ಶುಭ ಅದವು ೧೮ ಗುಣಗಳಿಗಿಂತ ಕಡಿಮೆ ಗುಣಗಳು ಬಂದರೆ—ಅಂಥ ವಿವಾಹದಿಂದ ವಧೂವರ ರಿಗೆ ಕಷ್ಟವು. ಜೀವನದಲ್ಲಿ ವಿರಸವು, ಪತಿಪತ್ನಿಯರಲ್ಲಿ ಕಲಹವು ಮನಸ್ತಾ ಪವು, ಸಂತಾನನಷ್ಟವು, ಧನ ಹಾನಿಯು, ರೋಗಪೀಡೆಯು, ಅಪಮೃತ್ಯುವು ಇತ್ಯಾದಿ ಅಶುಭ ಫಲಗಳುಂಟಾಗುವವು.

ವರ್ಣ, ವಶ್ಯ, ತಾರಾ, ಯೋನಿ, ಗ್ರಹ, ಗಣ, ರಾಶಿ, ನಾಡಿ ಹೀಗೆ ೮ ಕೂಟಗಳಿದ್ದು, ವರ್ಣಕೂಟಕ್ಕೆ ೧ ಗುಣ, ವಶ್ಯಕೂಟಕ್ಕೆ ೨ ಗುಣ, ತಾರಾ, ಕೂಟಕ್ಕೆ ೩ ಗುಣ, ಯೋನಿ ಕೂಟಕ್ಕೆ ೪ ಗುಣ. ಗ್ರಹ ಕೂಟಕ್ಕೆ ೫ ಗುಣ ಗುಣಕೂಟಕ್ಕೆ ೬ ಗುಣ, ರಾಶಿಕೂಟಕ್ಕೆ ೭ ಗುಣ, ನಾಡಿ ಕೂಟಕ್ಕೆ ೮ ಗುಣ. ಈ ಪ್ರಕಾರ ೮ ಕೂಟಗಳನ್ನು ಮುಖ್ಯವಾಗಿ ನೋಡತಕ್ಕದ್ದು. ಇವುಗಳಲ್ಲದೆ ಮಾಹೇಂದ್ರ ಕೂಟ, ಸ್ತ್ರೀ ದೀರ್ಘಕೂಟ, ವೇಧಾಕೂಟ ರಜ್ಜು ಕೂಟ, ಎಂಬು ದಾಗಿ ಇನ್ನು ೪ ಕೂಟಗಳಿದ್ದರೂ ಅವು ಅಷ್ಟೊಂದು ಪ್ರಾಮುಖ್ಯವಾ ದವುಗಳಲ್ಲವಾದ್ದರಿಂದ ಅವುಗಳನ್ನು ಬಿಟ್ಟುಕೊಟ್ಟಿದ್ದಾರೆ. ಪಂಚಾಂಗಗಳಲ್ಲಿ ಕೊಟ್ಟಿರತಕ್ಕ ವಧೂ-ವರರ ಸಾಲಾವಳಿ ನೋಡುವ ಕೋಷ್ಟಕದಲ್ಲಿ ೮ ಕೂಟ ಗಳಿಂದ ಬರುವ ಗುಣಗಳನ್ನಷ್ಟೇ ಕೊಟ್ಟಿರುತ್ತಾರೆ. ಆದರೆ ಪ್ರತ್ಯೇಕವಾಗಿ ಒಂದೊಂದು ಕೂಟಕ್ಕೆ ಎಷ್ಟು ಗುಣ ಬರುತ್ತವೆಂಬುದನ್ನು ತಿಳಿಯಬೇಕಾಗಿದ್ದರೆ ನಮ್ಮ ಗಣಾಧೀಶ್ವರ ಪಂಚಾಂಗವನ್ನು ನೋಡಬೇಕು.

— ದಾಂಪತ್ಯ ಜೀವನದ ಸುಖ ದುಃಖಗಳು —

ಸ್ತ್ರೀಯಳ ಜನನ ಕುಂಡಲಿಯಲ್ಲಿ ರವಿಯು ಪತಿಗೆ ಸುಖಕಾರಕನು ರವಿಯ

ಷರ ಕುಂಡಲಿಯ ಚಂದ್ರ ಶುಕ್ರರು ಪತ್ನಿಗೆ ಸುಖಕಾರಕ ಗ್ರಹಗಳು, ಸಪ್ತಮ ಸ್ಥಾನದಲ್ಲಿ ಗ್ರಹಗಳಿಲ್ಲದಿದ್ದರೆ ಚಂದ್ರನು ಯಾವ ರಾಶಿಯಲ್ಲಿರುವನೋ ಆ ರಾಶಿಯ ಅಧಿಪತಿಯ ಗುಣಧರ್ಮದಂತೆ ಪತ್ನಿಯು ಸಿಗುವಳು, ಸ್ತ್ರೀಯಳ ಕುಂಡಲಿಯಲ್ಲಿ ಸಪ್ತಮ ಸ್ಥಾನದಲ್ಲಿ ಗ್ರಹವಿಲ್ಲದಿದ್ದರೆ ರವಿಯಿದ್ದ ರಾಶಿಯ ಅಧಿಪತಿಯ ಗುಣಗಳ ಪ್ರಕಾರ ಪತಿಯು ಸಿಗುವನು.

ನೆಪ್‌ಚ್ಯೂನಗ್ರಹವು ದಾಂಪತ್ಯ ಜೀವನಕ್ಕೆ ಅಶುಭನು. ೭ನೇ ಸ್ಥಾನದಲ್ಲಿ ನೆಪ್‌ಚ್ಯೂನ್‌ಗ್ರಹವಿದ್ದರೆ ಬಂದ ಅಪವಾದವನ್ನು ನಿವಾರಣೆ ಮಾಡುವದಕ್ಕಾಗಿ ವಿವಾಹ ಮಾಡಿಕೊಳ್ಳಬೇಕಾಗುವದು. ವರನ ಕುಂಡಲಿಯಲ್ಲಿ ಸಪ್ತಮ ಸ್ಥಾನ ದಲ್ಲಿ ನೆಪ್‌ಚ್ಯೂನಗ್ರಹವಿದ್ದರೆ ಅವನಿಗೆ ರೂಪ ಸಂಪನ್ನಳಾದ ಹೆಂಡತಿ ಸಿಗು ವಳು. ಆದರೆ ಆವಳು ಅವನ ದಾಂಪತ್ಯ ಸುಖವನ್ನು ಹಾಳು ಮಾಡುವ ದುರ್ಗುಣವುಳ್ಳವಳು ಆದರೆ ನೆಪ್‌ಚ್ಯೂನ ಗ್ರಹವು ಕರ್ಕ, ಮಕರ, ಕುಂಭ, ಮೀನ ಈ ಜಲರಾಶಿಗಳಲ್ಲಿದ್ದರೆ ಅಥವಾ ಶುಭಗ್ರಹಗಳ ದೃಷ್ಟಿಯನ್ನು ಹೊಂದಿ ದ್ದರೆ ಅಶುಭ ಫಲವನ್ನು ಕೊಡಲಾರನು.

ಸಪ್ತಮ ಸ್ಥಾನದಲ್ಲಿ ಹರ್ಷಲ್ ಗ್ರಹವಿದ್ದರೆ ಸಾರಾಸಾರಾ ವಿಚಾರ ಮಾಡಲಾಗದ ಪ್ರೇಮ ವಿವಾಹವಾಗಬಹುದು. ಹರ್ಷಲ್ ಗ್ರಹಯೋಗದಿಂದ ಆಗುವ ವಿವಾಹಗಳು ಬಹುಶಃ ವಿಚ್ಛೇದನ ಹೊಂದುವವು. ಈ ಯೋಗವಿದ್ದವರು ಪ್ರತಿಭಾವಂತರಿರುವರು ಮತ್ತು ಹರ್ಷಲನು ಶುಭ ಗ್ರಹಗಳ ದೃಷ್ಟಿಯಲ್ಲಿದ್ದರೆ ಪತಿ ಪತ್ನಿಯರಿಗೆ ಅನುರೂಪರು ಮಾತ್ರ ದೊರಕುವರು.

೭ ನೇ ಸ್ಥಾನದಲ್ಲಿ ಶನಿಯಿದ್ದರೆ—ವಿವಾಹ ತಡವಾಗುವದು ಮತ್ತು ಸ್ತ್ರೀ ಪುರುಷರ ವಯಸ್ಸಿನಲ್ಲಿ ಬಹಳ ಅಂತರ ಇರುವದು ಕೆಲವುಸಾರೆ ಪತಿಗಿಂತ ಪತ್ನಿಯೇ ಹೆಚ್ಚು ವಯಸ್ಸಿನವಳಿರಬಹುದು. ತುಲಾ ರಾಶಿಯಲ್ಲಿ ಶನಿ ಇದ್ದರೆ ಪತ್ನಿ ಗರ್ವಿಷ್ಠಳಿದ್ದು ಪತಿಯಲ್ಲಿ ಪ್ರೇಮವುಳ್ಳವಳಿರುವಳು. ಆದರೆ ಹೊರಗೆ ತನ್ನ ಪ್ರೇಮವನ್ನು ತೋರಿಸಲಾರಳು. ಸಪ್ತಮ ಸ್ಥಾನದಲ್ಲಿ ಶನಿ, ಮಂಗಳ, ಹರ್ಷಲ ಕೂಡಿದ್ದರೆ ಆ ವಿವಾಹದಲ್ಲಿ ಎಳ್ಳಷ್ಟು ಸುಖವು ಸಿಗಲಾರದು ಮತ್ತು ಗಂಡಸಿನ ಕುಂಡಲಿಯಲ್ಲಿ ಹೀಗೆ ಇದ್ದರೆ ಇಬ್ಬರು ಹೆಂಡತಿಯರ ಯೋಗವಾಗುವದು. ಸ್ತ್ರೀಯಳು ಜನನ ಕುಂಡಲಿಯಲ್ಲಿ ಸಪ್ತಮ ಸ್ಥಾನದಲ್ಲಿ ಶನಿ ಚಂದ್ರರಿದ್ದರೆ ಸಂಸಾ

ರವು ಹದಗೆಡುವದು, ಅತೃಪ್ತ ಹೆಂಡತಿ ಸಿಗುವಳು. ಅವಳಲ್ಲಿ ಗಂಡನ ಬಗ್ಗೆ ಕೀಳು ಭಾವನೆಯು ಮತ್ತು ತನಗೆ ಸರಿಯಾದ ಗಂಡನಲ್ಲೆಂಬ ವಿಚಾರವೂ ಉಂಟಾಗುವದು. ಪುರುಷನ ಕುಂಡಲಿಯಲ್ಲಿ ೭ ನೇ ಸ್ಥಾನದಲ್ಲಿ ಶನಿ ಚಂದ್ರರಿದ್ದರೆ, ಅವನು ಸ್ತ್ರೀಜಿತನಾಗುವನು. ಅವನು ಎಷ್ಟು ಪ್ರಯತ್ನ ಪಟ್ಟರೂ ಹೆಂಡತಿಯ ಪ್ರೇಮವನ್ನು ಪಡೆಯಲಾರನು. ಸಪ್ತಮದಲ್ಲಿ ಶನಿಮಂಗಳರಿದ್ದರೆ ೩೦ ಅಥವಾ ೩೮ ನೆಯ ವರ್ಷದಲ್ಲಿ ಪತ್ನಿಗೆ ಮರಣವು. ಅದರಂತೆ ಸಪ್ತಮದಲ್ಲಿ ಶನಿ ರಾಹು ಕೂಡಿದ್ದರೂ ದ್ವಿಭಾರ್ಯಾ (ಇಬ್ಬರ ಹೆಂಡತಿಯರ) ಯೋಗವು. ಈ ಸ್ಥಾನದಲ್ಲಿ ಶನಿ ಹರ್ಷಲ್ ಕೂಡಿದ್ದರಂತೂ ಬಹಳ ಅನಿಷ್ಟ. ಈತನು ದಾಂಪತ್ಯ ಸುಖವನ್ನು ಕಾಣಲಾರನು. ಒಂದು ವೇಳೆ ವಿವಾಹನಾದರೂ ಹೆಂಡಂದಿರು ಉಳಿಯುವದು ಬಹಳ ಕಷ್ಟ.

ಸಪ್ತಮ ಸ್ಥಾನದಲ್ಲಿ ಶನಿ ನೆಪಚ್ಯೂನ ಗ್ರಹಗಳ ಯೋಗವು ಬಹು ಮಾರಕ ಸ್ತ್ರೀಯಳ ಕುಂಡಲಿಯಲ್ಲಿ ಸಪ್ತಮಸ್ಥಾನದಲ್ಲಿ ಶನಿ, ಬುಧ ಕೂಡಿದ್ದರೆ ಅವಳ ವಿವಾಹ ಆಗುವದು ಕಠಿಣ. ಒಂದು ವೇಳೆ ಆದರೂ ಕೂಡಿ ನಡೆಯಲಾರದು. ೭ ನೆಯ ಸ್ಥಾನದಲ್ಲಿ ಗುರು ಇದ್ದರೆ, ಸತ್ವಶೀಲ ಪತಿ ಸಿಗುವನು ಸಪ್ತಮದಲ್ಲಿ ಗುರು ಚಂದ್ರರು ಶುಭಕಾರಕರು, ಹೆಂಡತಿಯ ತಂದೆ ಶ್ರೀಮಂತನಿರುವನು. ಗುರು ಶುಕ್ರರು ಕೂಡಿದ್ದರೆ. ವಿಲಾಸ ಪ್ರಿಯ ಜೀವನವು. ಸ್ತ್ರೀಯಳ ಕುಂಡಲಿಯಲ್ಲಿ ೭ ನೆಯ ಸ್ಥಾನದಲ್ಲಿರುವ ಕುಜನನ್ನು ಶುಕ್ರನು ನೋಡುತ್ತಿದ್ದರೆ,ಅವಳು ಬಹು ಕಾಮುಕಳು. ಆ ಕುಜನನ್ನು ಶನಿಯು ನೋಡುತ್ತಿದ್ದರೆ ವ್ಯಭಿಚಾರಿಣಿಯು, ಆ ಕುಜನ ಮೇಲೆ ಹರ್ಷಲನ ದೃಷ್ಟಿ ಇದ್ದರೆ ವ್ಯಭಿಚಾರಿಯಾಗಿ ಪತಿಯನ್ನು ಬಿಟ್ಟು ಹೋಗುವಳು.

ಸಪ್ತಮದಲ್ಲಿರುವ ರವಿಯನ್ನು, ಶನಿ, ಹರ್ಷಲ ಇವರಲ್ಲಿ ಯಾರಾದರೊಬ್ಬರು ನೋಡುತ್ತಿದ್ದರೆ, ವಿವಾಹವು ತಡವಾಗಿ ಆಗುವದು. ಸಪ್ತಮದಲ್ಲಿ ಶುಕ್ರ ಚಂದ್ರರು ಕೂಡಿದ್ದರೆ, ಗುಣವತಿಯಾದ ಸ್ವಭಾವದವಳು. ಸಪ್ತಮದಲ್ಲಿ ಬುಧನಿದ್ದರೆ ಚತುರಳು, ಕುಶಲಳು, ಬುಧನು ಪಾಪಗ್ರಹ ಸಂಬಂಧವಾಗಿದ್ದರೆ ಸಂಸಾರದಲ್ಲಿ ಕಲುಷಿತವುಂಟಾಗುವದು. ಬುಧನ ಮೇಲೆ ಶನಿ ಮಂಗಳರ ದೃಷ್ಟಿ ಇದ್ದರೆ ಸಂಸಾರದಲ್ಲಿ ವಿರಸವು. ೭ ನೇ ಸ್ಥಾನದಲ್ಲಿ ಚಂದ್ರನಿದ್ದರೆ ಪ್ರಣಯ ಸೌಖ್ಯವು. ಚಂದ್ರನು ಹರ್ಷಲ್, ನೆಪ್ಚ್ಯೂನ ಗ್ರಹಗಳ ದೃಷ್ಟಿಯುಳ್ಳವನಾಗಿದ್ದರೆ ಅವರ ಜೀವನವು ದುಃಖದಲ್ಲಿ ಪರಿಸಮಾಪ್ತಿ ಹೊಂದುವದು.

ರವಿಯು ಕರ್ಕರಾಶಿಯೂ, ಚಂದ್ರನು ಸಿಂಹ ರಾಶಿಯಲ್ಲಿಯೂ ಇದ್ದರೆ, ದಾಂಪತ್ಯ ಜೀವನವು ಬಹು ಸುಖಕರ. ರವಿ, ಶನಿಗಳು ಪರಸ್ಪರ ೫-೯ ಸ್ಥಾನಗಳಲ್ಲಿದ್ದರೆ ಆ ಸ್ತ್ರೀಯಳು ವಿಧವೆಯಾಗಿ ಪುನರ್ವಿವಾಹ ಮಾಡಿಕೊಳ್ಳುವಳು.

ಜನನ ಲಗ್ನವು ತುಲಾ, ವೃಷಭಗಳಲ್ಲಿ ಒಂದಾಗಿ ಕುಂಭಾಂಶದಲ್ಲಿ ಹುಟ್ಟಿದವಳು ಅಥವಾ ಕುಂಡಲಿಯಲ್ಲಿ ಶನಿ ಶುಕ್ರರು ಪರಸ್ಪರ ೭ ನೇ ಸ್ಥಾನದಲ್ಲಿದ್ದರೆ, ಅಥವಾ ನವಾಂಶ ಕುಂಡಲಿಯಲ್ಲಿ ಶನಿ ಶುಕ್ರರು ಪರಸ್ಪರ ೭ ನೇ ಸ್ಥಾನದಲ್ಲಿದ್ದರೆ, ಅಥವಾ ಪರಸ್ಪರ ಕ್ಷೇತ್ರಗಳಾದ ತುಲಾ, ವೃಷಭ, ಮಕರ ಕುಂಭಗಳಲ್ಲಿದ್ದರೆ ಆ ಜಾತಕಳು ಅತ್ಯಂತ ಕಾಮಪೀಡಿತಳಾಗಿ ಪುರುಷ ವೇಷವನ್ನು ಧರಿಸಿ ಪುರುಷನಂತೆ ಕಾಮಚೇಷ್ಟಾ ವಿನೋದದಿಂದ ತೃಪ್ತಿ ಹೊಂದುವಳು.

ಲಗ್ನಾಧಿಪತಿ, ಸಪ್ತಮಾಧಿಪತಿಗಳು ಪಾಪಗ್ರಹಗಳಾಗಿದ್ದು ಲಗ್ನ ಸಪ್ತಮ ಸ್ಥಾನಗಳಲ್ಲಿ ಪಾಪಗ್ರಹಗಳಿದ್ದರೆ ಅವಳು ವ್ಯಭಿಚಾರಿಣಿಯಾಗುವಳು. ಜನನ ಲಗ್ನ, ಜನನ ರಾಶಿಗಳು ಪಾಪಗ್ರಹಗಳ ಮಧ್ಯದಲ್ಲಿದ್ದು ಶುಭಗ್ರಹಗಳ ದೃಷ್ಟಿ ಇರದಿದ್ದರೆ ಅವಳು ಕಲಂಕಿನಿಯಾಗುವಳು ೪-೭-೮-೧೨ ಈ ಸ್ಥಾನಗಳಲ್ಲಿ ಪಾಪಗ್ರಹಗಳಿಂದ ಕೂಡಿದ ಮಂಗಳನಿದ್ದರೆ ಅವಳು ಜಾರಿಣಿಯಾಗುವಳು. ಶುಕ್ರನು ಶನಿಯ ನವಾಂಶದಲ್ಲಿ, ಶನಿಯು ಶುಕ್ರನ ನವಾಂಶದಲ್ಲಿ ಇದ್ದರೆ ಅಥವಾ ಶುಕ್ರನು ಶನಿಗಳು ಪರಸ್ಪರ ನೋಡುತ್ತಿದ್ದರೆ ಅಥವಾ ಶುಕ್ರನ ನವಾಂಶದಲ್ಲಿ ಮಂಗಳ, ಮಂಗಳನ ನವಾಂಶದಲ್ಲಿ ಶುಕ್ರನಿದ್ದರೆ ಆ ಜಾತಕಳು ವ್ಯಭಿಚಾರಿಣಿಯಾಗುವಳು.

ಜನನ ಲಗ್ನವು ಮೇಷ, ವೃಶ್ಚಿಕ, ಮಕರ, ಕುಂಭ ಇವುಗಳಲ್ಲಿ ಒಂದಾಗಿದ್ದು ಅಲ್ಲಿ ಶುಕ್ರ ಚಂದ್ರರಿದ್ದು ಪಾಪ ಗ್ರಹಗಳಿಂದ ನೋಡಲ್ಪಟ್ಟರೆ ವ್ಯಭಿಚಾರ ಯೋಗವು ಜನನ ಲಗ್ನದಿಂದ ಸಪ್ತಮದಲ್ಲಿ ಬಲಿಷ್ಠ ಪಾಪಗ್ರಹ ಇದ್ದು ಅಶುಭ ಗ್ರಹಗಳಿಂದ ದೃಷ್ಟಿ ಹೊಂದಿದ್ದರೆ ಆ ಜಾತಕಳಿಗೆ ಪತಿಯ ಸುಖ ದೊರೆಯುವದಿಲ್ಲ ಸಪ್ತಮ ಸ್ಥಾನದಲ್ಲಿ ಚಂದ್ರ, ಕುಜ, ಶುಕ್ರರು ಕೂಡಿದ್ದರೆ ಜಾರಿಣಿಯಾಗುವಳು. ಮಂಗಳನ ಅಂಶದಲ್ಲಿ ಶನಿ ಇದ್ದ ಜಾತಕಳು ಜಾರಿಣಿಯು, ಜನನ ಲಗ್ನ ಅಥವಾ ಜನನ ರಾಶಿಗಳಿಂದ ೨-೧೨ನೇ ಸ್ಥಾನಗಳಲ್ಲಿ ಪಾಪಗ್ರಹವಿದ್ದರೆ ಅವಳು ಐಶ್ವರ್ಯ ನಾಶ ಮಾಡುವಳು.

ಜನನ ಕಾಲದಲ್ಲಿ ಕ್ಷೀಣಚಂದ್ರನು ಸಮರಾಶಿಗಳಲ್ಲಿ ಇದ್ದು ಪಾಪಗ್ರಹಗಳಿಂದ ನೋಡಿಕೊಳ್ಳುತ್ತಿದ್ದರೆ ಆ ಜಾತಕಗಳಿಗೆ ಆಗುವ ವಿವಾಹಕ್ಕೆ ಅಡ್ಡಿಯಂಟಾಗುವದು.

— ಸಂತಾನ ವಿಷಯ —

೫ ನೇ ಸ್ಥಾನವನ್ನು ಶುಭಗ್ರಹಗಳು ನೋಡುತ್ತಿದ್ದರೆ. ಅಥವಾ ೫ ನೇ ಸ್ಥಾನಾಧಿಪತಿಯು ಕೇಂದ್ರ ತ್ರಿಕೋಣ ಸ್ಥಾನಗಳಲ್ಲಿದ್ದರೆ, ಬಹು ಜನ ಮಕ್ಕಳಾಗುವರು.' ೫ ನೇ ಸ್ಥಾನದಲ್ಲಿ ಗುರು ಬಲಿಷ್ಠನಾಗಿದ್ದರೆ ೫ ಜನ ಮಕ್ಕಳಾಗುವರು. ೫ ನೇ ಸ್ಥಾನದಲ್ಲಿ ಬಲಿಷ್ಠರಾದಲ್ಲಿ ಶುಕ್ರ, ಚಂದ್ರರಿದ್ದರೆ, ಕನ್ಯಾ ಸಂತತಿ ಹೆಚ್ಚು. ೫ ನೇ ಸ್ಥಾನದಲ್ಲಿ ರವಿ ಒಬ್ಬನೇ ಇದ್ದರೆ ಒಬ್ಬನೇ ಮಗನಾಗುವನು ೫ ನೇ ಸ್ಥಾನದಲ್ಲಿ ಬಲಿಷ್ಠ ಚಂದ್ರನಿದ್ದರೆ ಎರಡು ಹೆಣ್ಣು ಮಕ್ಕಳು ಆಗುವರು. ೫ ನೇ ಸ್ಥಾನದಲ್ಲಿ ಬುಧನಿದ್ದರೆ ೪ ಜನ ಹೆಣ್ಣು ಮಕ್ಕಳು, ೫ ನೇ ಸ್ಥಾನದಲ್ಲಿ ಶುಕ್ರನಿದ್ದರೆ,೭ ಜನ ಹೆಣ್ಣು ಮಕ್ಕಳು.೮ ನೇ ಸ್ಥಾನದಲ್ಲಿ ಸ್ವಕ್ಷೇತ್ರದಲ್ಲಿರುವ ರವಿ, ಚಂದ್ರರಿದ್ದರೆ ಒಂದೇ ಸಂತತಿಯು ಆಗುತ್ತದೆ.

ಜನನ ಲಗ್ನದಿಂದ ೪ ನೇ ಸ್ಥಾನದಲ್ಲಿ ಪಾಪಗ್ರಹವಿದ್ದರೆ, ಬಹು ಸಂತತಿಯು, ಜನನ ಲಗ್ನವು ಕರ್ಕ ಅಥವಾ ಧನಸ್ಸು ಆಗಿದ್ದು ೪ ನೇ ಸ್ಥಾನದಲ್ಲಿ ಪಾಪಗ್ರಹಗಳಿದ್ದರೆ ಮತ್ತು ಆ ಜಾತಕಳ ಜನ್ಮರಾಶಿಯು ಕರ್ಕ ಅಥವಾ ತುಲಾ ಆಗಿದ್ದರೆ ಆ ಜಾತಕಳಿಗೆ ಬಹುಜನ ಮಕ್ಕಳಾಗುವರು. ಜನನಲಗ್ನ ಕುಂಡಲಿಯಲ್ಲಿ ೫ ನೇಯ ಸ್ಥಾನದಲ್ಲಿ ಗುರು ಇದ್ದರೆ ಮಕ್ಕಳು ಬಹಳ. ೫ ನೇ ಸ್ಥಾನದಲ್ಲಿ ಚಂದ್ರ ಶುಕ್ರರಿದ್ದರೆ, ಹೆಣ್ಣು ಸಂತಾನ ಬಹಳ, ಆದರೆ ಪಂಚಮ ಸ್ಥಾನವು ಕರ್ಕ ಇಲ್ಲವೆ ಸಿಂಹವಾಗಿದ್ದು ಅಲ್ಲಿ ಚಂದ್ರನಿದ್ದರೆ, ಅಲ್ಪ ಸಂತತಿಯುಳ್ಳವಳಾಗುವಳು. ಪಂಚಮಸ್ಥಾನವನ್ನು ಶುಭಗ್ರಹಗಳು ನೋಡುತ್ತಿದ್ದರೆ ಮತ್ತು ಪಂಚಮಾಧಿಪತಿಯು ೧-೪-೭-೧೦ ಈ ಸ್ಥಾನಗಳಲ್ಲಿ ಅಥವಾ ೫-೯ ಸ್ಥಾನಗಳಲ್ಲಿ ಇದ್ದು ಶುಭಗ್ರಹಗಳ ದೃಷ್ಟಿಯನ್ನು ಹೊಂದಿದ್ದರೆ ಬಹಳ ಮಕ್ಕಳುಳ್ಳವಳಾಗುವಳು. ೫ ನೇ ಶನಿಯ ಸ್ಥಾನದಲ್ಲಿ ಗುರು ಇದ್ದರೆ ೫ ಜನ ಗಂಡುಮಕ್ಕಳಾಗುವರು. ೫ ನೇ ಸ್ಥಾನದಲ್ಲಿ ರವಿ ಬಲಿಷ್ಠನಿದ್ದರೆ, ಸೌಭಾಗ್ಯವಂತನಾದ ಒಬ್ಬ ಗಂಡು ಮಗನಾಗುತ್ತಾನೆ. ೫ ನೇ ಸ್ಥಾನದಲ್ಲಿ ಕುಜನಿದ್ದರೆ

ಮೂರು ಜನ ಗಂಡು ಮಕ್ಕಳು ಆಗುವರು. ೫ನೆಯ ಸ್ಥಾನದಲ್ಲಿ ಚಂದ್ರನಿದ್ದರೆ ಇಬ್ಬರು ಪುತ್ರಿಯರಾಗುವರು ೫ನೇಸ್ಥಾನದಲ್ಲಿ ಬುಧನಿದ್ದರೆ ೪ ಜನ ಹೆಣ್ಣು ಮಕ್ಕಳು ಶುಕ್ರನಿದ್ದರೆ. ೭ ಜನ ಹೆಣ್ಣು ಮಕ್ಕಳು ಹುಟ್ಟುವರು. ಜನನ ಲಗ್ನ ದಿಂದ ೯ನೆಯ ಸ್ಥಾನದಲ್ಲಿ ಶುಕ್ರನಿದ್ದರೆ ೬ ಜನ ಹೆಣ್ಣುಮಕ್ಕಳು ಮತ್ತು ೭ನೆಯ ಸ್ಥಾನದಲ್ಲಿ ರಾಹು ಇದ್ದರೆ ಗಂಡು ಮಕ್ಕಳಾಗುವದು ಸಂಶಯ. ಮತ್ತು ೫ ನೆಯ ಸ್ಥಾನದಲ್ಲಿ ಗುರು ಶುಕ್ರರು ಇದ್ದರೆ ಗಂಡು ಮಕ್ಕಳು ಹೆಚ್ಚು. ಆದರೆ ೫ನೆಯ ಸ್ಥಾನವನ್ನು ಪಾಪಗ್ರಹಗಳು ಪೂರ್ಣ ದೃಷ್ಟಿಯಿಂದ ನೋಡುತಿದ್ದರೆ ಅಥವಾ ಪಾಪಗ್ರಹಗಳು ಸ್ಥಿತರಾಗಿದ್ದರೆ ಅಲ್ಪ ಸಂತತಿಯುಳ್ಳವಳಾಗುವಳು.

ಮೃತ ಸಂತಾನ, ಸಶ್ತ್ರ ಕ್ರಿಯೆಯಿಂದ ಸಂತಾನ, ಗರ್ಭಾಶಯ ದೋಷ ವಿಚಾರ

ಸ್ತ್ರೀಯಳ ಜನನ ಕುಂಡಲಿಯಲ್ಲಿ ೫ನೇ ಸ್ಥಾನದಲ್ಲಿ ಮಂಗಳನು ಶನಿ ಅಥವಾ ರಾಹುವಿನಿಂದ ಕೂಡಿದ್ದರೆ ಸಂತತಿ ನಷ್ಟವು ಮಂಗಳ ಹರ್ಷಲ್, ಈ ಗ್ರಹಗಳು ಪಂಚಮ ಸ್ಥಾನದಲ್ಲಿ ಕೂಡಿದ್ದರೆ ಶಸ್ತ್ರ ಕ್ರಿಯೆಯಿಂದ ಕೂಸನ್ನು ಹೊರಗೆ ತೆಗೆಯಬೇಕಾಗುವದು. ಸ್ತ್ರೀಯಳ ಜನನ ಕುಂಡಲಿಯಲ್ಲಿ ವಿಷಮ ಸ್ಥಾನಗಳು ತುಲಾ ಅಥವಾ ವೃಶ್ಚಿಕ ರಾಶಿಯಾಗಿ ಅಲ್ಲಿ ಶನಿಯು, ಮಂಗಳರು ಕೂಡಿದ್ದರೆ ಅವಳ ಗರ್ಭಾಶಯದಲ್ಲಿ ದೋಷವಿದೆಯೆಂದು ತಿಳಿಯಬೇಕು ಮತ್ತು ಈ ದೋಷವನ್ನು ಶಸ್ತ್ರಕ್ರಿಯೆಯಿಂದ ತೆಗೆದು ಹಾಕಬೇಕು.

ಪಂಚಮ ಸ್ಥಾನವು ವಿಷಮರಾಶಿಯಾಗಿ ಅಲ್ಲಿ ಬುಧನಿದ್ದರೆ ಪುತ್ರಸಂತತಿ ಹೆಚ್ಚು. ಆದರೆ ಅದು ಸಮರಾಶಿಯಾಗಿದ್ದರೆ ಕನ್ಯಾ ಸಂತತಿ ಹೆಚ್ಚು, ಮತ್ತು ಬುಧ ಶನಿಗಳು ಕೂಡಿದ್ದರೆ ಅನಿಷ್ಟವು. ಹೀಗಾದರೆ ಮಕ್ಕಳು ದುರ್ಮಾರ್ಗಿಗಳಾಗುವರು. ೫ ನೇ ಸ್ಥಾನದಲ್ಲಿ ರವಿ ರಾಹು ಅಥವಾ ರವಿ ಕೇತು ಕೂಡಿದ್ದರೆ ಬಹಳ ಅನಿಷ್ಟ ಈ ಯೋಗದಿಂದ ಕೂಸುಗಳು ಚಿಕ್ಕಂದಿನಲ್ಲಿಯೇ ಸಾಯುವವು. ೫ನೇ ಸ್ಥಾನದಲ್ಲಿ ರವಿ ಒಬ್ಬನಿದ್ದರೆ ಗಂಡು ಸಂತತಿಯು ಕೇತು ಒಬ್ಬನೇ ಇದ್ದರೆ ದುಷ್ಟರಾದ ಮಕ್ಕಳುಂಟು, ೫ನೇ ಸ್ಥಾನದಲ್ಲಿ ರವಿ ಇದ್ದರೆ ೧ ನೆಯದು ಪುತ್ರ ೧೦ನೇ ಸ್ಥಾನದಲ್ಲಿ ಚಂದ್ರನಿದ್ದರೆ ೧ನೆಯದು ಪುತ್ರಿ ೫ನೇ ಸ್ಥಾನದಲ್ಲಿ ಶನಿ ಮಂಗಳ ಇದ್ದರೆ ಸ್ವಚ್ಛಂದವೃತ್ತಿಯ ಮಕ್ಕಳು. ೫ನೇ ಸ್ಥಾನವು, ಮೇಷ, ಸಿಂಹ, ಧನು ಈ ರಾಶಿಗಳಾಗಿದ್ದು ಅಲ್ಲಿ ಮಂಗಳನಿದ್ದರೆ ಮಕ್ಕಳಾಗುವದಿಲ್ಲ,

ಪತಿಯ ಕುಂಡಲಿಯಲ್ಲಿ ಚಂದ್ರನು ವಿಷಮ ಸ್ಥಾನದಲ್ಲಿದ್ದಾಗ ಪತ್ನಿಗೆ ಗರ್ಭ ಧಾರಣೆಯಾಗುವದು. ೫ನೇ ಸ್ಥಾನದಲ್ಲಿ ಕೇತು ಇದ್ದರೆ ದುರ್ಗುಣಿಗಳಾದ ಮಕ್ಕಳು ಹುಟ್ಟುವರು. ಅವರಿಂದ ತಂದೆ ತಾಯಿಗಳಿಗೆ ಯಾವಾಗಲೂ ದುಃಖವು. ೫ನೇ ಸ್ಥಾನದಲ್ಲಿ ರವಿ ಇದ್ದರೆ ಗಂಡು ಸಂತತಿ ಹೆಚ್ಚು ಆದರೆ ತಂದೆಗೂ ಆ ಮಕ್ಕಳಿಗೂ ಕೂಡಿ ನಡೆಯುವದಿಲ್ಲ. ೫ ನೇ ಸ್ಥಾನವು ಮಿಥುನ, ಕನ್ಯಾ, ತುಲಾ, ಮಕರ, ರಾಶಿಯಾಗಿದ್ದು ಅಲ್ಲಿ ರಾಹು ಇದ್ದರೆ ಎಷ್ಟೋ ಸಲ ೨-೩ ಮಕ್ಕಳ ನಂತರ ಮುಂದೆ ಮಕ್ಕಳಾಗುವದಿಲ್ಲ.

೫ ನೇ ಸ್ಥಾನವು ಮಕರರಾಶಿಯಾಗಿ ಅದರ ಮಧ್ಯಭಾಗದಲ್ಲಿ ಗುರು ಇದ್ದರೆ-ಆ ಜಾತಕಳಿಗೆ ಮಕ್ಕಳ ಸಂಬಂಧ ಶೋಕವು ೫ ನೇ ಸ್ಥಾನವು ಕರ್ಕ ರಾಶಿಯಾಗಿ ಅಲ್ಲಿ ಗುರು ಇದ್ದರೆ ಕನ್ಯಾ ಸಂತತಿ ಹೆಚ್ಚು. ೫ ನೇ ಸ್ಥಾನದಲ್ಲಿ ಆ ಸ್ಥಾನಾಧಿಪತಿ ಇದ್ದು ಅವನು ಗುರುಶುಕ್ರ ಇಲ್ಲವೆ ಬುಧನಿಂದ ನೋಡಲ್ಪ ಡುತ್ತಿದ್ದರೆ ಪುತ್ರಸಂತತಿ ಹೆಚ್ಚು. ೫ ನೇ ಸ್ಥಾನಾಧಿಪತಿಯು ಬಲಿಷ್ಠನಾಗಿ ಪಂಚಮಸ್ಥಾನದಲ್ಲಿದ್ದರೆ, ಪಂಚಮಸ್ಥಾನಾಧಿಪತಿಯ ದೃಷ್ಟಿಯು ೫ನೇ ಸ್ಥಾನ ದಲ್ಲಿದ್ದು ೫ ನೇ ಸ್ಥಾನದಲ್ಲಿ ಪಾಪಗ್ರಹವಿದ್ದರೆ, ೫ ನೇ ಸ್ಥಾನವು ಮೇಷ, ಸಿಂಹ ವೃಶ್ಚಿಕ, ಅಥವಾ ಮೀನ ರಾಶಿಯಿದ್ದು ಅಲ್ಲಿ ಗುರು ಮಂಗಳರು ಕೂಡಿದ್ದರೆ ಪುತ್ರಸಂತತಿಯು.

೫ ನೇ ಸ್ಥಾನಾಧಿಪತಿಯು ೧-೫-೭ ಸ್ಥಾನಗಳಲ್ಲಿದ್ದು ಪಾಪಗ್ರಹಗಳಿಂದ ಕೂಡದೆ, ಪಾಪಗ್ರಹಗಳಿಂದ ನೋಡಲ್ಪಡದೆ ಇದ್ದರೆ ಮಕ್ಕಳಿಂದ ಸುಖವು ಸಿಗು ವದು. ೫ ನೇ ಸ್ಥಾನವು ಎರಡು ಶುಭಗ್ರಹಗಳ ಮಧ್ಯದಲ್ಲಿದ್ದು ಆ ಸ್ಥಾನವು ಕೂಡಿ ಇದ್ದರೆ ಪುತ್ರರು ಹುಟ್ಟುವರು. ಬಲಿಷ್ಠನಾದ ಗುರುವು ೧-೫-೭ ನೇ ಸ್ಥಾನದಲ್ಲಿದ್ದು ಪಾಪಗ್ರಹಗಳ ದೃಷ್ಟಿ ಇರದಿದ್ದರೆ ಪುತ್ರಸಂತಾನವು. ಶುಭಗ್ರ ಹಗಳಿಂದ ಕೂಡಿದ ಅಥವಾ ನೋಡಲ್ಪಟ್ಟ ಪಂಚಮಾಧಿಪತಿಯು ಬಲಿಷ್ಠನಾಗಿ ಎರಡು ಶುಭಗ್ರಹಗಳ ಮಧ್ಯದಲ್ಲಿದ್ದರೆ ಉತ್ತಮ ಸಂತಾನವು. ೫ ನೇ ಸ್ಥಾನಾ ಧಿಪತಿ, ರವಿ, ಮಂಗಳ, ಗುರು ಇವರು ಪುರುಷ ನವಾಂಶದಲ್ಲಿದ್ದರೆ ಪುತ್ರ, ಪುತ್ರಿ, ಮಿಶ್ರ ಸಂತಾನವು, ೫ ನೇ ಸ್ಥಾನದಲ್ಲಿ ಶುಕ್ರನಿದ್ದರೆ ಕನ್ಯಾ ಸಂತತಿ ಹೆಚ್ಚು ಮತ್ತು ಗುಣಗಳೂ ತೇಜಸ್ವಿಗಳೂ ಸುಂದರರೂ ಆದ ಮಕ್ಕಳು ಹುಟ್ಟು

ವರು ೫ ನೇಸ್ಥಾನದಲ್ಲಿ ಶುಕ್ರ ಮಂಗಳ ಕೂಡಿ ಕೊಂಡಿದ್ದರೆ ಸಂತತಿಗೆ ಅನಿಷ್ಟವು.

೫ ನೇ ಸ್ಥಾನಾಧಿಪತಿಯು ೬-೮-೧೨ ಸ್ಥಾನಗಳನ್ನು ಬಿಟ್ಟು ಉಳಿದ ಸ್ಥಾನಗಳಲ್ಲಿ ಶುಭಗ್ರಹಗಳಿಂದ ಕೂಡಿದ್ದರೆ—ಅಥವಾ ನೋಡಿಸಿಕೊಳ್ಳುತ್ತಿದ್ದರೆ ಪುತ್ರಸಂತಾನವು.

— ಸಂತತಿಗೆ ನಷ್ಟಯೋಗ —

೫ ನೇ ಸ್ಥಾನಾಧಿಪತಿಯಿಂದಾಗಲಿ ಶನಿಯಿಂದಾಗಲಿ ಕೂಡಿಕೊಂಡಿರುವ ರಾಹುವು ೫ ನೇ ಸ್ಥಾನದಲ್ಲಿದ್ದು ಶುಭಗ್ರಹಗಳ ದೃಷ್ಟಿ ಹೊಂದಿರದಿದ್ದರೆ ಪಿತೃ ಶಾಪದಿಂದ ಸಂತತಿನಷ್ಟವು. ೮ನೇ ಸ್ಥಾನದಲ್ಲಿ ಪಾಪಗ್ರಹಗಳು ೫ನೇ ಸ್ಥಾನಾಧಿಪತಿಯು ಶನಿಯಿಂದ ಕೂಡಿರಲು ೧೨ನೇ ಸ್ಥಾನದಲ್ಲಿ ಪಾಪಗ್ರಹಗಳಿದ್ದರೆ ಮಾತೃ ಶಾಪದಿಂದ ಸಂತತಿನಷ್ಟವು.

೬ನೇ ಸ್ಥಾನಾಧಿಪತಿಯು ೫ನೇ ಸ್ಥಾನದಲ್ಲಿಯೂ,೫ನೇ ಸ್ಥಾನಾಧಿಪತಿಯು ೬ನೇ ಸ್ಥಾನದಲ್ಲಿಯೂ ಇದ್ದು ಶುಭಗ್ರಹಗಳ ದೃಷ್ಟಿ ಇರದಿದ್ದರೆ ಅಥವಾ ಪಂಚಮಾಧಿಪತಿಯು ೮ನೇ ಸ್ಥಾನದಲ್ಲಿ ನೀಚನಾಗಿದ್ದರೆ ಸಂತತಿ ನಷ್ಟವು. ಎರಡು ಪಾಪಗ್ರಹಗಳ ಮಧ್ಯದಲ್ಲಿ ಗುರು ಇದ್ದು ೫ನೇ ಸ್ಥಾನಾಧಿಪದಿಯು ದುರ್ಬಲನಾಗಿ ಶುಭಗ್ರಹಗಳಿಂದ ಕೂಡದೆ ಅಥವಾ ನೋಡಲ್ಪಡದೆ ಇದ್ದರೆ ಸಂತತಿ ನಷ್ಟವು ೫ನೇ ಸ್ಥಾನವು ಶುಭಗ್ರಹಗಳಿಂದ ಕೂಡದೆ ಇದ್ದರೆ ಅಥವಾ ಶುಭಗ್ರಹಗಳ ದೃಷ್ಟಿ ಇರದಿದ್ದರೆ ೫-೨-೧೨ ಸ್ಥಾನಗಳಲ್ಲಿ, ಪಾಪಗ್ರಹಗಳು ಹಾಗೂ ೫ ನೇ ಸ್ಥಾನಾಧಿಪತಿಯು ಪಾಪಗ್ರಹಗಳಿಂದ ಕೂಡಿದ್ದರೆ, ಮಕ್ಕಳು ಸಾಯುವರು. ೫ನೇ ಸ್ಥಾನಾಧಿಪತಿಯು ನೀಚನು, ಅಸ್ತಂಗತನು ಅಥವಾ ಶತ್ರುಕ್ಷೇತ್ರದಲ್ಲಿರಲು ಹಾಗೂ ೬-೮-೧೨ ಸ್ಥಾನಗಳ ಅಧಿಪತಿಗಳಿಂದಕೂಡಿದ್ದು ೫ ನೇ ಸ್ಥಾನದ ಮೇಲೆ ಅಥವಾ ಪಂಚಮಾಧಿಪತಿಯ ಮೇಲೆ ಶುಭಗ್ರಹಗಳ ದೃಷ್ಟಿ ಇರದಿದ್ದರೆ ಹುಟ್ಟಿದ ಮಕ್ಕಳು ಬಾಲ್ಯದಲ್ಲಿಯೇ ಸತ್ತು ಹೋಗುವವು.

ಜನನ ಲಗ್ನದಿಂದ ೫ ನೇ ಸ್ಥಾನದಲ್ಲಿ ರವಿ ಇದ್ದು ಶನಿ ಅಥವಾ ರಾಹುವು ಅವನನ್ನು ನೋಡುತ್ತಿದ್ದರೆ ಆ ಸ್ತ್ರೀಯಳಿಗೆ ಹುಟ್ಟಿದ ಮಕ್ಕಳು ಬದುಕುವದಿಲ್ಲ

— ಸಂತಾನ ಪ್ರತಿಬಂಧಕ ಯೋಗಕ್ಕೆ ಶಾಪಗಳು —

ಶಾಪಗಳೆಂದರೆ ಪೂರ್ವಜನ್ಮದಲ್ಲಿ ಮಾಡಿದ ಕರ್ಮಗಳಿಂದ ಈ ಜನ್ಮದಲ್ಲಿ ಅನುಭವಿಸಬೇಕಾದ ದುಷ್ಟಯೋಗಗಳು. ಇವುಗಳನ್ನು ಜನನಕುಂಡಲಿಯಲ್ಲಿಯ ಗ್ರಹಗಳ ಸ್ಥಿತಿಯಿಂದ ತಿಳಿದುಕೊಳ್ಳಬಹುದು. ಪೂರ್ವಜನ್ಮದ ಕರ್ಮಫಲವನ್ನು ಪೂರ್ಣವಾಗಿ ಹೋಗಲಾಡಿಸುವದು ಶಕ್ಯವಾಗದಿದ್ದರೂ ಕಡಿಮೆ ಮಾಡುವದಕ್ಕೆ ಸಾಧ್ಯವಾಗಬಹುದು.

ಜನನ ಕುಂಡಲಿಯಲ್ಲಿ ಸಂತತಿಯನ್ನು ಸೂಚಿಸುವ ಸ್ಥಾನವು ಐನೇಯದು (೯ ನೆಯದು ಸಂತತಿಯ ಸ್ಥಾನವೆಂದು ಕೆಲವರು ಹೇಳುತ್ತಾರೆ) ಈ ಸ್ಥಾನದಲ್ಲಿರುವ ಅಥವಾ ಈ ಸ್ಥಾನದ ಅಧಿಪತಿಗೆ ಅಥವಾ ಸಂತತಿಗಳಿಗೆ ಕಾರಕನಾದ ಗುರುವಿನೊಡನೆ ಕೂಡಿಕೊಂಡಿರುವ ಅಥವಾ ಪೂರ್ಣ ದೃಷ್ಟಿಯಿಂದ ನಿರೀಕ್ಷಿಸುತ್ತಿರುವ ಗ್ರಹಗಳ ಆಧಾರದಿಂದ ಕೆಲವು ಶಾಪಗಳನ್ನು ತಿಳಿದುಕೊಳ್ಳಬಹುದು. ಅದು ಹೇಗೆಂದರೆ–ಬಲಹೀನನಾದ ರವಿಯಿಂದ ಪಿತೃಶಾಪವು. ಕ್ಷೀಣಚಂದ್ರನಿಂದ ಮಾತೃಶಾಪವು. ಕುಜನಿಂದ ಭಾತೃಶಾಪವು. ಪಾಪಗ್ರಹಗಳಿಂದ ಕೂಡಿದ ಪಾಪಗ್ರಹಗಳದೃಷ್ಟಿ ಹೊಂದಿದ ಅಥವಾ ನೀಚಮುಂತಾದ ದೋಷಯುಕ್ತನಾದ ಬುಧನಿಂದ ಮಾತುಲ (ಸೋದರಮಾವನ) ಶಾಪವು. ಗುರುವಿನಿಂದ ಪೂಜ್ಯರಾದ ಶಿವಯೋಗಿಗಳ ಅಥವಾ ಗುರುಗಳ ಕೋಪವು. ತಪಸ್ವಿಗಳ ಶಾಪವು. ಅಥವಾ ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರ ಶಾಪವು. ಶುಕ್ರನಿಂದ ಪತ್ನಿಯ ಶಾಪವು. ಶನಿಯಿಂದ ಪಿಶಾಚ ಶಾಪವು. ರಾಹುವಿನಿಂದ ಸರ್ಪಶಾಪವು. ಕೇತುವಿನಿಂದ ಸಣ್ಣ ಪುಟ್ಟ ದೇವತಾ ಶಾಪವು ಎಂದು ತಿಳಿಯಬೇಕು.

ಶಾಪ ಪರಿಹಾರ ಉಪಾಯ : ಪಿತೃಶಾಪ ನಿವಾರಣೆಗಾಗಿ ನದಿ ಅಥವಾ ಸಮುದ್ರದಲ್ಲಿ ಸ್ನಾನಮಾಡಿ ವಿಷ್ಣು ಪ್ರೀತಿಗಾಗಿ ವ್ಯಾಹೃತಿ ಮಂತ್ರದಿಂದ ತಿಲಹೋಮ ಮಾಡಬೇಕು. ಶಿವಪೂಜಾ, ಮಳಲಿನ ಲಿಂಗಪೂಜಾ, ಇಷ್ಟಲಿಂಗ ಪೂಜಾ ಬ್ರಾಹ್ಮಣ ಭೋಜನ, ಗಣಾರಾಧನೆ ಮಾಡಿಸಬೇಕು. ಮಾತೃಶಾಪ ನಿವಾರಣೆಗೆ. ನದಿ ಅಥವಾ ಸಮುದ್ರ ಸ್ನಾನಮಾಡಿ ೧ ಲಕ್ಷ ಗಾಯತ್ರಿ ಜಪ ಅಥವಾ ೧ ಲಕ್ಷ ಪಂಚಾಕ್ಷರಿ ಮಂತ್ರ ಜಪಮಾಡಿ ಗೃಹದಾನ ಮಾಡಬೇಕು. ಮತ್ತು ಬೆಳ್ಳಿಯ ಪಾತ್ರೆಯಲ್ಲಿ ಹಾಲುತುಂಬಿ ದಾನಮಾಡಬೇಕು.

ನಂತರ ಬ್ರಾಹ್ಮಣ ಭೋಜನ, ಗಣಾರಾಧನೆ ಮಾಡಿಸಬೇಕು. ಭ್ರಾತೃಶಾಪಕ್ಕೆ ಚಾಂದ್ರಾಯಣ ವ್ರತವನ್ನು ಮಾಡಿ ನಂತರ ಕಾವೇರಿ ನದಿಯಲ್ಲಿ ಸ್ನಾನ ಮಾಡ ಬೇಕು. ಪುರಾಣ ಶ್ರವಣ ಮಾಡಬೇಕು. ಬಳಿಕ ವಿವಾಹ ಉಪನಯನಗ ಳನ್ನು ಧರ್ಮಾರ್ಥವಾಗಿ ಮಾಡಿಸಬೇಕು. ಅಥವಾ ಪ್ರಾಜಾ ಪತ್ಯವ್ರತವನ್ನು ಮಾಡಿ ಹಣ್ಣು ಹಂಪಲ, ಬಂಗಾರ, ಧರ್ಮಗ್ರಂಥ ಭೂಮಿ ಗೋದಾನ ಮಾಡ ಬೇಕು. ಮಾತುಲ ಶಾಪಕ್ಕೆ-ಶಿವ, ವಿಷ್ಣು, ಮೂರ್ತಿಸ್ಥಾಪಿಸಬೇಕು. ಕೆರೆ ಬಾವಿ ಜಲಾಶಯ ಗಳನ್ನು ಕಟ್ಟಿಸಬೇಕು. ಶಿವಯೋಗಿಗಳ, ಗುರುಗಳ, ತಪ ಸ್ವಿಗಳ, ಬ್ರಾಹ್ಮಣರ ಶಾಪ ಪರಿಹಾರಕ್ಕಾಗಿ-ತಪಸ್ವಿಗಳಾದ ಗುರು ಪುಂಗವ ರನ್ನು ಪೂಜಿಸಿ, ಅನ್ನ, ವಸ್ತ್ರ, ದಕ್ಷಿಣೆಗಳಿಂದ ತೃಪ್ತಿ ಪಡಿಸಿ ಆಶಿರ್ವಾದಪಡೆಯ ಬೇಕು, ಜಂಗಮ ತೃಪ್ತಿ, ಬ್ರಾಹ್ಮಣರಿಗೆ ಭೋಜನ, ವಸ್ತ್ರ, ಬಂಗಾರ, ದಕ್ಷಿಣೆ ದಾನ ಮಾಡಬೇಕು. ಪತ್ನಿ ಶಾಪಕ್ಕೆ ಯೋಗ್ಯರಾದ ಸದ್ ವಂಶೀಯ (ಮಾಹೇಶ್ವರ) ದಂಪತಿಗಳನ್ನು ಪೂಜಿಸಿ ವಸ್ತ್ರ, ಆಭರಣ, ಶಯ್ಯಾ (ಹಾಸಿಗೆ) ದಾನ ಮಾಡಬೇಕು. ಪಿಶಾಚ ಶಾಪಕ್ಕೆ-ರುದ್ರಾಭಿಷೇಕ ಅಥವಾ ವಿಷ್ಣು ಶ್ರಾದ್ಧ ಮಾಡಿಸಬೇಕು ಬೆಳ್ಳಿಪಾತ್ರೆ, ನೀಲರತ್ನ, ಗೋದಾನ ಮಾಡಬೇಕು ಸರ್ಪಶಾಪಕ್ಕೆ ಬಂಗಾರ, ಅಥವಾ ಬೆಳ್ಳಿಯಿಂದ ನಾಗಮೂರ್ತಿ ಮಾಡಿಸಿ ಪ್ರತಿಷ್ಠೆ ಮಾಡಿಸಿ ಪೂಜಿಸಬೇಕು. ಎಳ್ಳು, ಬಂಗಾರ, ಗೋವು ದಾನ ಮಾಡ ಬೇಕು. ಸಣ್ಣ ಪುಟ್ಟ ದೇವತಾ ಶಾಪಕ್ಕೆ-ಶ್ರೀ ರುದ್ರ ಪರಾಯಣ ಮಾಡಿಸ ಬೇಕು. ಈ ಪ್ರಕಾರ ಶಾಂತಿ ಮಾಡಿಸುವದರಿಂದ ಸಂತಾನ ವೃದ್ಧಿಯಾಗು ವದು.

ಸಂತಾನಕ್ಕೆ ವಿಘ್ನಕಾರಿಗಳಾದ ಗ್ರಹಶಾಂತಿಯು – ದಂಪತಿಗಳ ಸಂತತಿಗೆ ರವಿಯು ಪ್ರತಿಬಂಧಕನಾಗಿದ್ದರೆ-ಶಿವಪುರಾಣವನ್ನು ಓದಬೇಕು. ಅಥವಾ ಹರಿವಂಶ ಪಾರಾಯಣ ಮಾಡಬೇಕು, ಚಂದ್ರನಾಗಿದ್ದರೆ-ಈಶ್ವರನ ಪೂಜೆ, ಲಿಂಗಪೂಜೆ ಮಾಡಬೇಕು. ಕುಜನಾಗಿದ್ದರೆ-ಏಕಾದಶ ರುದ್ರಾಭಿ ಷೇಕವನ್ನು ಮಾಡಿಸಬೇಕು. ಬುಧನಾಗಿದ್ದರೆ ಕಂಚಿನ ಪಾತ್ರೆಯಲ್ಲಿ ಹಾಲು ತುಂಬಿ ದಾನಮಾಡಬೇಕು. ಗುರುವಾಗಿದ್ದರೆ— ಪಿತೃದೇವತಾ ಪೂಜಾ, ಜಂಗಮ ತೃಪ್ತಿ ಮಾಡಿಸಬೇಕು. ಶುಕ್ರನಾದರೆ— ಆಕಳ ಪೂಜಾಮಾಡಬೇಕು ಆಕಳಿಗೆ ಹೊಟ್ಟು, ಮೇವು, ಹುಲ್ಲು ದಾನಮಾಬೇಕು. ಶನಿಯಾಗಿದ್ದರೆ-

ಮೃತ್ಯುಂಜಯ ಜಪವಮಾಡಿಸಬೇಕು. ರಾಹು ಆದರೆ ಕನ್ಯಾದಾನ (ಯೋಗ್ಯನಾದ ವರನಿಗೆ ಬಂಗಾರ, ದಕ್ಷಿಣೆ ಸಹಿತ ಮಗಳನ್ನು ಧಾರೆ ಎರೆದು ಕೊಡಬೇಕು) ಮಾಡಬೇಕು. ಕೇತುವಾದರೆ-ಕಪಿಲಾನಾಮಕ ಗೋದಾನ ಮಾಡಬೇಕು.

ದತ್ತಕ ಪುತ್ರ ಯೋಗ

೫ನೇ ಸ್ಥಾನವು ಮಿಥುನ, ಕನ್ಯಾ, ಮಕರ, ಅಥವಾ ಕುಂಭ ರಾಶಿಯಾಗಿ ಅಲ್ಲಿ ಶನಿಯು ಇದ್ದರೆ ಅಥವಾ ೫ನೇಸ್ಥಾನದಲ್ಲಿ ಪಾಪಗ್ರಹವಿದ್ದು ಅದನ್ನು ೫ನೇ ಸ್ಥಾನಾಧಿಪತಿಯು ನೋಡದಿದ್ದರೆ ದತ್ತಕ ಪುತ್ರಯೋಗವಿರುವದೆಂದು ತಿಳಿಯಬೇಕು.

ನಿಷ್ಪುತ್ರಿಕತ್ವ ಯೋಗ

೧ ೫-೭ ನೇ ಸ್ಥಾನಗಳ ಅಧಿಪತಿಗಳು ಬಲಹೀನರಿದ್ದು ಗುರುವೂ ಬಲಹೀನನಾಗಿದ್ದರೆ, ಅಥವಾ ೫ ನೇ ಸ್ಥಾನದಲ್ಲಿ ಪಾಪಗ್ರಹವಿದ್ದು ೫ನೇ ಸ್ಥಾನಾಧಿಪತಿಯು ನೀಚನಾಗಿದ್ದು ಅವನಿಗೆ ಶುಭಗ್ರಹ ದೃಷ್ಟಿ ಇರದಿದ್ದರೆ ಅಥವಾ ಲಗ್ನದಿಂದ ೫ನೇ ಸ್ಥಾನದಲ್ಲಿಯೂ-ಗುರು ಚಂದ್ರರಿಂದ ೫ನೇ ಸ್ಥಾನದಲ್ಲಿಯೂ ಪಾಪಗ್ರಹಗಳಿದ್ದು ಅದರ ಶುಭ ಗ್ರಹಗಳ ದೃಷ್ಟಿ ಇರದಿದ್ದರೆ ಆ ಸ್ತ್ರೀಯಳಿಗೆ ಮಕ್ಕಳಾಗುವದಿಲ್ಲವೆಂದು ಹೇಳಬೇಕು.

ಸ್ತ್ರೀಯಳ ಜನನ ಲಗ್ನ ಕುಂಡಲಿಯಲ್ಲಿ, ತುಲಾ, ವೃಷಭ ರಾಶಿಗಳಲ್ಲಿ ಶನಿಯು ಮಕರ ಕುಂಭ ರಾಶಿಗಳಲ್ಲಿ ಶುಕ್ರನು ಇದ್ದದ್ದಾದರೆ ಅಶುಭವು ಪ್ರಥಮ ಸಪ್ತಮ ಸ್ಥಾನಗಳ ಅಧಿಪತಿಗಳು ಪಾಪಗ್ರಹಗಳಿಂದ ಕೂಡಿಕೊಂಡಿದ್ದರೆ ಅಥವಾ ಪಾಪಗ್ರಹಗಳಿಂದ ನೋಡಿಕೊಳ್ಳುತ್ತಿದ್ದರೆ ಅವಳಿಗೆ ಪತಿಯ ಸುಖವು ದೊರೆಯದೆ ಕಷ್ಟ ಉಂಟಾಗುವದು. ೭ ನೆಯ ಸ್ಥಾನದಲ್ಲಿ ಮಂಗಳನಿದ್ದು ಅದು ಕರ್ಕರಾಶಿಯಾಗಿದ್ದರೂ ಆ ಸ್ತ್ರೀಯಳು ನೀಚಳಾಗುವಳು. ೭ನೆಯ ಸ್ಥಾನದಲ್ಲಿ ಚಂದ್ರ, ಮಂಗಳ ಶುಕ್ರರು ಕೂಡಿದ್ದರೆ ಅವಳು, ವ್ಯಭಿಚಾರಿಣಿಯಾಗುವಳು. ಜನನ ಲಗ್ನವು ಮೇಷ, ವೃಶ್ಚಿಕ, ಮಕರ ಕುಂಭ ರಾಶಿಗಳಾಗಿದ್ದು ಲಗ್ನದಲ್ಲಿ ಶುಕ್ರ ಚಂದ್ರರಿದ್ದು ಅವರು ಪಾಪಗ್ರಹಗಳಿಂದ ನಿರೀಕ್ಷಿಸಲ್ಪಟ್ಟರೆ ಅಶುಭ ಪ್ರದವು. ಜನನ ಲಗ್ನ ಕುಂಡಲಿಯಲ್ಲಿ ೧–೪-೭–೮–೧೨ ಸ್ಥಾನಗಳಲ್ಲಿ ಕುಜನಿದ್ದರೆ- ದೋಷಕರವು, ವೈಧವ್ಯ ಪ್ರಾಪ್ತಿಯಾಗುವದು. ಜನನ

ಲಗ್ನವನ್ನು ಮತ್ತು ಚಂದ್ರನನ್ನು ಪಾಪಗ್ರಹಗಳು ನೋಡಿದರೆ ಅಶುಭವು, ನವಾಂಶ ಲಗ್ನ ಕುಂಡಲಿಯಲ್ಲಿ ಶುಕ್ರ, ಕುಜರು ಕೂಡಿರುವರು ಅಶುಭಯೋಗವು ಮತ್ತು ಷಡ್ವರ್ಗ ಕುಂಡಲಿಯಲ್ಲಿ ಪಾಪ ಗ್ರಹಗಳು ಅಧಿಕವಾಗಿದ್ದರೆ ಅಶುಭವು. ಮೇಷ, ಕರ್ಕ, ತುಲಾ, ಮಕರ ಈ ರಾಶಿಯಲ್ಲಿ ಒಂದು ರಾಶಿಯು ಜನನ ಲಗ್ನವಾಗಿದ್ದು ಅಲ್ಲಿ ಚಂದ್ರ ಶನಿ ಕೂಡಿಕೊಂಡಿದ್ದರೆ ಮತ್ತು ಆ ಲಗ್ನವನ್ನು ಶುಕ್ರನು ನೋಡುತ್ತಿದ್ದರೆ ಆ ಸ್ತ್ರೀಯಳಿಗೆ ದುಷ್ಟವಾದ ಪತಿ ದೊರೆಯುವನು, ಜನನ ಲಗ್ನವು ವಿಷಮ ರಾಶಿಯಾಗಿದ್ದರೆ ಆ ಸ್ತ್ರೀಯಳು ಪುರುಷಸ್ವಭಾವದವ ಳಾಗುವಳು. ಜನನಲಗ್ನದಲ್ಲಿ ಪಾಪಗ್ರಹಗಳಿದ್ದರೆ ಅಥವಾ ಪಾಪ ಗ್ರಹಗಳ ದೃಷ್ಟಿಯನ್ನು ಹೊಂದಿದ್ದರೆ ಆ ಸ್ತ್ರೀಯಳ ಪತಿಯು ರೋಗಿಷ್ಟನು, ದುರ್ಗು ಣಿಯು ಆಗುವನು, ಜನನ ಲಗ್ನವು ಸಮರಾಶಿಯಾಗಿ ಆ ಲಗ್ನವನ್ನು ಶುಭ ಗ್ರಹಗಳು ನೋಡುತ್ತಿದ್ದರೆ ಅಥವಾ ಲಗ್ನದಲ್ಲಿ ಶುಭಗ್ರಹಗಳಿದ್ದರೆ ಆ ಸ್ತ್ರೀಯಳು ಪತಿವ್ರತೆಯು, ಭಕ್ತಿವಂತಳು ಆಗುವಳು ಜನನ ಲಗ್ನದಿಂದ ೬-೮-೧೨ ಸ್ಥಾನ ಗಳಲ್ಲಿ ನವಮ ಸ್ಥಾನಾಧಿಪತಿಯು ಗುರುವಿನಿಂದ ಕೂಡಿಕೊಂಡಿದ್ದರೆ ಆ ಸ್ತ್ರೀಯ ಳಿಗೆ ವಿವಾಹವಾದ ಸ್ವಲ್ಪದಿವಸಗಳಲ್ಲಿಯೇ ವೈಧವ್ಯ ಪ್ರಾಪ್ತಿಯಾಗುವದು ಆದರೆ ನವಮಾಧಿ ಪತಿಯು ಗುರುವಿನಿಂದ ಕೂಡಿಕೊಂಡು ೧-೪-೫-೭-೯-೧೦ ಈ ಸ್ಥಾನಗಳಲ್ಲಿದ್ದರೆ ಆ ಸ್ತ್ರೀಯಳು ದೀರ್ಘ ಸುಮಂಗಲೆಯು, ಸೌಭಾಗ್ಯ ವಂತಳು, ಸುಖಭೋಗಿಯು ಆಗುವಳು.

ಜನನ ಲಗ್ನ ಕುಂಡಲಿಯಲ್ಲಿ ಸಪ್ತಮಾಧಿಪತಿ ಅಷ್ಟಮಾಧಿಪತಿಗಳು ೬-೮-೧೨ ಸ್ಥಾನಗಳಲ್ಲಿದ್ದರೆ ವೈಧವ್ಯವು ಮತ್ತು ಆ ಸ್ಥಾನಗಳಲ್ಲಿ ಪಾಪ ಗ್ರಹಗಳ ದೃಷ್ಟಿ ಇದ್ದರೆ ಬಾಲವಿಧವೆಯಾಗುವಳು. ೧-೭-೮ ನೆಯ ಸ್ಥಾನಗಳಲ್ಲಿ ಪಾಪಗ್ರಹ ಗಳಿದ್ದರೆ ವೈಧವ್ಯವು. ಜನನಲಗ್ನದಿಂದ ೭-೮ನೆಯ ಸ್ಥಾನಗಳಲ್ಲಿ ರವಿ, ಕುಜ, ಶನಿ,ರಾಹು ಈ ಗ್ರಹಗಳಲ್ಲಿ ಒಂದು ಗ್ರಹವಿದ್ದರೆ ವೈಧವ್ಯ ಪ್ರಾಪ್ತಿಯು.ಅಷ್ಟಮ ಸ್ಥಾನದಲ್ಲಿ ರಾಹು ಇದ್ದರೆ ಪತಿಯು ಧರ್ಮಹೀನನಾಗುವನು. ಅಷ್ಟಮಸ್ಥಾನ ದಲ್ಲಿ ರವಿ ಇದ್ದರೆ ಪತಿಪತ್ನಿಯರಿಗೆ ದುಃಖವು. ೮ನೆಯ ಸ್ಥಾನದಲ್ಲಿ ಶನಿಯು ಇದ್ದರೆ ರೋಗಪೀಡೆಯು. ಅಷ್ಟಮಸ್ಥಾನದಲ್ಲಿ ಚಂದ್ರನಿದ್ದರೆ ಆ ಸ್ತ್ರೀಯಳಿಗೆ ಪತಿ ಸುಖ ಭಂಗವು ಕುಜನಿದ್ದರೆ ಪತಿಗೆ ಅಲ್ಪಾಯುಷ್ಯವು ಅಷ್ಟಮದಲ್ಲಿ ಗುರು ಶುಕ್ರ ಇದ್ದರೆ ಆ ಸ್ತ್ರೀಯಳ ಗರ್ಭಪಾತವಾಗುವದು. ಜನನ ಲಗ್ನವು ಮಿಥುನ.

ಕನ್ಯಾ ರಾಶಿಯಾಗಿದ್ದು ಅಲ್ಲಿ ಚಂದ್ರ ಶುಕ್ರರಿದ್ದರೆ ಆ ಸ್ತ್ರೀಯಳು ಸುಖಿಯು ಆಗುವಳು ಆದರೆ ಗಂಡನನ್ನೂ, ತಂದೆಯನ್ನೂ, ದೂಷಿಸುವವಳು ಆಗುವವಳು ಸಪ್ತಮ ಸ್ಥಾನದಲ್ಲಿರುವ ಶುಭಗ್ರಹಗಳು ಎಷ್ಟು ಬಲಿಷ್ಠರಾಗಿರುವರೋ ಅಷ್ಟು ಸುಖಪ್ರದವೆಂದು ತಿಳಿಯಬೇಕು.

ಒಂದೇ ಸಂತತಿಯಾಗುವ ಯೋಗವು— ಜನನಲಗ್ನವು, ಮೇಷ, ವೃಶ್ಚಿಕ, ಮಕರ, ಕುಂಭ ಈ ರಾಶಿಗಳಲ್ಲಿ ಒಂದಾಗಿದ್ದು ಬುಧ ಚಂದ್ರರು ಸ್ವಕ್ಷೇತ್ರಗಳಲ್ಲಿದ್ದರೆ ಆ ಸ್ತ್ರೀಯಳಿಗೆ ಒಂದೇ ಸಂತತಿಯಾಗುವದು. ಇದಕ್ಕೆ ಕಾಕ ವಂಧ್ಯಾಯೋಗವೆಂದು ಹೆಸರು.

ನಿಪುತ್ರಿಕಳಾಗುವಯೋಗ— ಮೇಷ, ವೃಶ್ಚಿಕ, ಮಕರ, ಕುಂಭ ರಾಶಿಗಳಲ್ಲೊಂದು ರಾಶಿಯು ಜನನ ಲಗ್ನವಾಗಿದ್ದು ಚಂದ್ರಶುಕ್ರರು ಕೂಡಿಕೊಂಡಿದ್ದರೆ ಮತ್ತು ಜನನಲಗ್ನವನ್ನು ಪಾಪಗ್ರಹಗಳು ನೋಡುತ್ತಿದ್ದರೆ. ಆ ಸ್ತ್ರೀಯಳು ಬಂಜೆಯಾಗುವಳು ಜನನಲಗ್ನದಲ್ಲಿ ಶನಿ, ಅಷ್ಟಮದಲ್ಲಿ ರವಿ, ಮತ್ತು ಪಂಚಮ ಸ್ಥಾನದಲ್ಲಿ ಬಲಿಷ್ಠರಾದ ಪಾಪಗ್ರಹಗಳಿದ್ದರೆ ಆ ಜಾತಕಳು ನಿಪುತ್ರಿಕ (ಮಕ್ಕಳಿಲ್ಲದವಳು) ಆಗುವಳು. ಸಪ್ತಮಸ್ಥಾನವು ಪಾಪ ಗ್ರಹಗಳ ಕ್ಷೇತ್ರವಾಗಿ ಆ ಸ್ಥಾನವನ್ನು ಪಾಪಗ್ರಹಗಳು ನೋಡುತ್ತಿದ್ದರೆ ಆ ಜಾತಕಳು ಬಂಜೆಯಾಗುವಳು.

ಗರ್ಭ ಸ್ರಾವವಾಗುವದನ್ನು ತಿಳಿಯುವದು— ಸಪ್ತಮಸ್ಥಾನದಲ್ಲಿ ಶನಿ, ಮಂಗಳರು ಕೂಡಿಕೊಂಡಿದ್ದರೆ ಅಥವಾ ಸಪ್ತಮಸ್ಥಾನದಲ್ಲಿರುವ ಮಂಗಳನನ್ನು ಶನಿಯು ಪೂರ್ಣ ದೃಷ್ಟಿಯಿಂದ ನೋಡುತ್ತಿದ್ದರೆ ಆ ಸ್ತ್ರೀಯಳಿಗೆ ಗರ್ಭಪಾತವಾಗುವದು. ಸಪ್ತಮ ಸ್ಥಾನದಲ್ಲಿ ಶನಿ ಇದ್ದರೆ ಆ ಸ್ತ್ರೀಯಳಿಗೆ ಕುಸುಮ ರೋಗವು. ೮ ನೆಯ ಸ್ಥಾನದಲ್ಲಿ ಕುಜ, ಗುರು, ಶುಕ್ರರು ಕೂಡಿದ್ದರೆ ಗರ್ಭ ಸ್ರಾವವು. ಮತ್ತು ಅಷ್ಟಮ ಸ್ಥಾನದಲ್ಲಿ ಗುರು, ಶುಕ್ರರಿದ್ದರೆ ನಷ್ಟ ಸಂತಾನವು. (ಮಕ್ಕಳು ಹುಟ್ಟಿದ ಕೂಡಲೇ ಸಾಯುವವು) ಜನನಲಗ್ನ ಕುಂಡಲಿಯಲ್ಲಿ ೫—೯ ನೆಯ ಸ್ಥಾನಗಳ ಅಧಿಪತಿಗಳು ೬-೮-೧೨ ಸ್ಥಾನಗಳಲ್ಲಿದ್ದರೆ ಆ ಸ್ತ್ರೀಯಳಿಗೆ ಆಗಾಗ ಗರ್ಭಸ್ರಾವವಾಗುವದು.

— ಇಬ್ಬರು ಗಂಡಂದಿರ (ಉಡಕಿ ವಿವಾಹ) ಯೋಗ —

ಜನನಲಗ್ನದಲ್ಲಿ ರವಿ, ಕುಜ, ರಾಹು ಶುಕ್ರ ಈ ನಾಲ್ಕು ಗ್ರಹಗಳು ಕೂಡಿದ್ದರೆ ಆ ಜಾತಕಳ ಮೊದಲನೆಯ ಗಂಡನು ಮರಣ ಹೊಂದಿದ ನಂತರ ಎರಡನೆಯ (ಉಡಕಿ ಅಥವಾ ರಜಿಷ್ಟರ ವಿವಾಹದ) ಗಂಡನನ್ನು ಮಾಡಿಕೊಳ್ಳುವಳು. ಜನನ ಲಗ್ನವು ಅಥವಾ ಜನ್ಮರಾಶಿಯು ಮೇಷ, ಕರ್ಕ, ತುಲಾ, ಮಕರ ಇವುಗಳಲ್ಲಿ ಒಂದಾಗಿದ್ದು ಜನನಲಗ್ನ ಕುಂಡಲಿಯಲ್ಲಿ ೧-೪-೭-೧೦ ಈ ಸ್ಥಾನಗಳಲ್ಲಿ ಬಲಿಷ್ಠ ಪಾಪಗ್ರಹಗಳಿದ್ದು ಜನನಲಗ್ನವನ್ನು ಅಥವಾ ಜನ್ಮರಾಶಿಯನ್ನು ಚಂದ್ರ, ಶುಕ್ರ, ರಾಹು ಈ ಸ್ತ್ರೀ ಗ್ರಹಗಳು ನೋಡುತ್ತಿದ್ದರೆ ಆ ಸ್ತ್ರೀಯಳು ಮೊದಲಿನ ಗಂಡನಿಂದ ಬಿಡುಗಡೆ ಹೊಂದಿ ಎರಡನೆಯ ವಿವಾಹ ಮಾಡಿಕೊಳ್ಳುವಳು ಮತ್ತು ಜನನ ಲಗ್ನ ಕುಂಡಲಿಯೊಳು ೧ನೆಯ ಸ್ಥಾನದಲ್ಲಿ ರವಿ, ಕುಜ, ರಾಹು ಈ ಗ್ರಹಗಳು ಕೂಡಿದ್ದರೂ ಪತಿಯ ಮರಣದ ನಂತರ ಎರಡನೆಯ ಲಗ್ನವಾಗುವದೆಂದು ತಿಳಿಯಬೇಕು.

ವಿಧವಾಯೋಗ —

ಜನನ ಲಗ್ನ ಕುಂಡಲಿಯಲ್ಲಿ ೮-೧೨ ನೆಯ ಸ್ಥಾನಗಳಲ್ಲಿರುವ ಮಂಗಳನು ಪಾಪಗ್ರಹಗಳಿಂದ ಕೂಡಿದ್ದರೆ-ಅಥವಾ ರಾಹುವು ಪಾಪಗ್ರಹಗಳನ್ನು ಕೂಡಿಕೊಂಡು ಜನನಲಗ್ನದಲ್ಲಿ ಇದ್ದರೆ-ಆ ಸ್ತ್ರೀಯಳು ವಿಧವೆಯಾಗುವಳು. ಜನನಲಗ್ನ ಕುಂಡಲಿಯಲ್ಲಿ ೭-೮ ನೆಯ ಸ್ಥಾನಗಳ ಅಧಿಪತಿಗಳು ಕೂಡಿಕೊಂಡು ೬ ಅಥವಾ ೧೨ ನೆಯ ಸ್ಥಾನಗಳಲ್ಲಿ ಇದ್ದುಕೊಂಡು ಪಾಪಗ್ರಹಗಳಿಂದ ಕೂಡಿದ್ದರೆ ಅಥವಾ ಪಾಪಗ್ರಹಗಳ ದೃಷ್ಟಿಯನ್ನು ಹೊಂದಿದ್ದರೆ ಆ ಸ್ತ್ರೀಯಳು ವಿಧವೆಯಾಗುವಳು. ಜನನಲಗ್ನ ಕುಂಡಲಿಯಲ್ಲಿ ೮-೧೨ ನೆಯ ಸ್ಥಾನಗಳು ಮೇಷ, ವೃಶ್ಚಿಕ, ರಾಶಿಗಳಾಗಿದ್ದು ಅಲ್ಲಿ ರಾಹುವು ಪಾಪಗ್ರಹಗಳಿಂದ ಕೂಡಿಕೊಂಡು ಇದ್ದರೆ ಆ ಸ್ತ್ರೀಯಳು ವಿಧವೆಯಾಗುವಳು. ಜನನ ಲಗ್ನದಿಂದ ೭ ೮ ನೆಯ ಸ್ಥಾನಗಳಲ್ಲಿ ಅಥವಾ ಜನ್ಮರಾಶಿಯಿಂದ ೭ನೆಯ ಸ್ಥಾನದಲ್ಲಿ ರವಿ ಕುಜ, ಶನಿ, ರಾಹು ಕೂಡಿಕೊಂಡಿದ್ದರೆ ಆ ಜಾತಕಳು ವಿಧವೆಯಾಗುವಳು. ೮ನೆಯ ಸ್ಥಾನವು ಪಾಪಗ್ರಹದ ಕ್ಷೇತ್ರವಾಗಿ ಅಲ್ಲಿ ಪಾಪಗ್ರಹಗಳಿದ್ದರೆ ಅಥವಾ ೮ ನೇ ಸ್ಥಾನದಲ್ಲಿ ಚಂದ್ರನಿದ್ದರೆ, ಅಷ್ಟಮಸ್ಥಾನಾಧಿಪತಿಯ ದಶಾಕಾಲದಲ್ಲಿ

ಅಥವಾ ಅಷ್ಟಮ ಸ್ಥಾನದಲ್ಲಿರುವ ಪಾಪಗ್ರಹದ ದಶಕಾಲದಲ್ಲಿ ವಿಧವೆಯಾಗುವಳು. ೮–೧೧ ನೆಯ ಸ್ಥಾನಗಳಲ್ಲಿ ಮಂಗಳನು ಪಾಪಗ್ರಹಗಳಿಂದ ಕೂಡಿದ್ದರೆ ಮತ್ತು ಲಗ್ನದಲ್ಲಿ ರಾಹು ಇದ್ದರೆ ಆ ಸ್ತ್ರೀಯಳು ಬಾಲ ವಿಧವೆಯಾಗುವಳು ೭ ನೆಯ ಸ್ಥಾನಾಧಿಪತಿಯು ೮ ನೆಯ ಸ್ಥಾನದಲ್ಲಿ ೮ ನೆಯಸ್ಥಾನಾಧಿಪತಿಯು ೭ ನೆಯ ಸ್ಥಾನದಲ್ಲಿ ಇದ್ದು ಪಾಪಗ್ರಹಗಳ ದೃಷ್ಟಿಯನ್ನು ಹೊಂದಿದ್ದರೆ ಅಥವಾ ಕುಂಡಲಿಯಲ್ಲಿ ೧-೭ ನೆಯ ಸ್ಥಾನಗಳಲ್ಲಿ ಪಾಪಗ್ರಹಗಳಿದ್ದರೆ ಆ ಸ್ತ್ರೀಯಳು ಬಾಲ್ಯದಲ್ಲಿಯೇ ವಿಧವೆಯಾಗುವಳು. ಒಂದನೆಯ ಸ್ಥಾನದಲ್ಲಿ ಪಾಪಗ್ರಹವಿದ್ದು ೭ ನೆಯ ಸ್ಥಾನದಲ್ಲಿ ಕ್ಷೀಣಚಂದ್ರನು ಕುಜನೊಡನೆ ಕೂಡಿದ್ದರೆ ಅಥವಾ ೧ ನೇ ಸ್ಥಾನದಲ್ಲಿ ದುಷ್ಟಗ್ರಹಗಳು ನೇ ಸ್ಥಾನದಲ್ಲಿ ಮಂಗಳ ಈ ಪ್ರಕಾರ ಗ್ರಹಗಳಿದ್ದರೆ ಚಿಕ್ಕ ಪ್ರಾಯದಲ್ಲಿಯೇ ವಿಧವೆಯಾಗುವಳು.

— ನಾನಾ ರೀತಿಯ ಮರಣ ಯೋಗ —

ಸ್ತ್ರೀಯಳ ಜನನಲಗ್ನ ಕುಂಡಲಿಯಲ್ಲಿ ೮ ನೆಯ ಸ್ಥಾನದಲ್ಲಿ ಶುಭಗ್ರಹಗಳಿದ್ದರೆ— ಅಥವಾ ೮ ನೆಯ ಸ್ಥಾನವು ಶುಭಗ್ರಹಗಳ ಕ್ಷೇತ್ರವಾಗಿದ್ದು ಅಲ್ಲಿ ಉಚ್ಚವಾದ ಶುಭಗ್ರಹವಿದ್ದರೆ— ಆಸ್ತ್ರೀಯಳು ಪತಿಗಿಂತ ಮೊದಲು ಮರಣ ಹೊಂದುವಳು. ಜನನ ಕುಂಡಲಿಯಲ್ಲಿ ೨ ನೇ ಸ್ಥಾನದೊಳಗೆ ಶುಭಗ್ರಹಗಳು ಬಲಿಷ್ಠರಾಗಿದ್ದು ೧ ನೆಯ ಸ್ಥಾನದಲ್ಲಿ ಶುಭಾಶುಭ ಮಿಶ್ರ ಗ್ರಹಗಳಿದ್ದರೂ ಆ ಜಾತಕಳು ಪತಿಗಿಂತಲೂ ಮೊದಲು ಮರಣ ಹೊಂದುವಳು. ಜನನ ಕುಂಡಲಿಯಲ್ಲಿ ೩ನೆಯಸ್ಥಾನದೊಳು ಮಂಗಳ ಏಳನೆಯ ಸ್ಥಾನದಲ್ಲಿ ಚಂದ್ರ ನಾಲ್ಕನೆಯ ಸ್ಥಾನದಲ್ಲಿಶನಿ ಈ ಪ್ರಕಾರ ಗ್ರಹಗಳಿದ್ದರೆ ಆ ಸ್ತ್ರೀಯಳುಕೆರೆ ಭಾವಿಗಳಲ್ಲಿಬಿದ್ದುಆತ್ಮಹತ್ಯೆ ಮಾಡಿಕೊಳ್ಳುವಳು ಜನನಲಗ್ನ ಅಥವಾ ಜನನ ರಾಶಿಯಿಂದ ೪ನೇಯ ಸ್ಥಾನದಲ್ಲಿ ಕುಜ೩೦ನೆಯ ಸ್ಥಾನದಲ್ಲಿ ರವಿ ಇದ್ದರೆ ಎತ್ತರವಾದ ಸ್ಥಳದಿಂದ ಬಿದ್ದು ಮರಣವನ್ನಪ್ಪುವಳು. ಜನನ ಲಗ್ನವು ಮಿಥುನ, ಕನ್ಯಾ, ಧನಸ್ಸು, ಮೀನ ಈ ದ್ವಿಸ್ವಭಾವ ರಾಶಿಗಳಲ್ಲಿ ಒಂದಾಗಿದ್ದು ಈ ರಾಶಿಗಳಲ್ಲಿ ರವಿ ಚಂದ್ರರು ಕೂಡಿ ಇದ್ದರೆ ಆ ಸ್ತ್ರೀಯಳು ಜಲಾಶಯದಲ್ಲಿ ಬಿದ್ದು ದುರ್ಮರಣ ಹೊಂದುವಳು. ಜನನ ಲಗ್ನ ಕುಂಡಲಿಯಲ್ಲಿ ಚಂದ್ರನು, ಮೇಷ ವೃಶ್ಚಿಕ ರಾಶಿಗಳಲ್ಲಿ ಇದ್ದು ಆ ಚಂದ್ರನಿಂದ ಎರಡನೆಯ ಸ್ಥಾನದಲ್ಲಿ ಪಾಪಗ್ರಹಗಳಿದ್ದರೆ - ಆ ಜಾತಕಳು ಶಸ್ತ್ರಾಸ್ತ್ರಗಳಿಂದಾಗಲಿ ಅಥವಾ ಅಗ್ನಿಯಿಂದಸುಟ್ಟುಕೊಂಡಾಗಲಿ ಸಾಯು

ವಳು. ಜನನ ಕುಂಡಲಿಯಲ್ಲಿ ರವಿ ಚಂದ್ರರುಪಾಪಗ್ರಹಗಳೊಡನೆ ಕೂಡಿ ಕೊಂಡು ಅಥವಾ ಪಾಪಗ್ರಹಗಳ ದೃಷ್ಟಿಯನ್ನು ಹೊಂದಿ ಕನ್ಯಾರಾಶಿಯಲ್ಲಿ ದ್ದರೆ— ಆ ಜಾತಕಳು ಸೆರೆಮನೆಯಲ್ಲಿ ಅಥವಾ ಯಾವುದೇ ಬಂಧನದಲ್ಲಿದ್ದು ಮೃತ್ಯು ಹೊಂದುವಳು.

— ಶುಭಯೋಗ —

ಜನನ ಲಗ್ನವು ಕರ್ಕವಾಗಿದ್ದು ೭ ನೇ ಸ್ಥಾನದಲ್ಲಿ ಗುರು, ಬುಧ, ಮಂಗ ಳರು ಕೂಡಿದ್ದರೆ ಮತ್ತು ಜನನರಾಶಿಯು ಸಹ ಕರ್ಕವಾಗಿದ್ದರೆ— ಆ ಜಾತ ಕಳು ರೂಪವತಿಯಾಗುವಳು. ಜನನ ಲಗ್ನವು ಯಾವದಾಗಿದ್ದರೂ ಮಕರ ರಾಶಿಯಲ್ಲಿ ಮಂಗಳನೂ, ಮೀನರಾಶಿಯಲ್ಲಿ ಗುರುವೂ ಇದ್ದರೆ ಅಥವಾ ಲಗ್ನ ದಿಂದ ೪ ನೇ ಸ್ಥಾನದಲ್ಲಿ ಶುಕ್ರನಿದ್ದರೆ ಅಥವಾ ಶನಿ ಶುಕ್ರರು ಕೂಡಿದ್ದರೆ ರತಿ ದೇವಿಯಂತೆ ಬಹು ಸುಂದರಳಾಗುವಳು.

ಜನನ ಲಗ್ನವು ಸಮರಾಶಿಯಾಗಿ ೧ ನೇ ಸ್ಥಾನದಲ್ಲಿ ಗುರು, ಶುಕ್ರ ಬುಧ, ಚಂದ್ರರಿದ್ದರೆ— ಆ ಜಾತಕಳು ಬ್ರಹ್ಮಜ್ಞಾನಿಯಾಗುವಳು, ಜನನಲಗ್ನ ದಿಂದ ೭ ಸ್ಥಾನವು ಸಮರಾಶಿಯಾಗಿ ಇಲ್ಲಿ ಶುಭಗ್ರಹಗಳಿದ್ದರೆ, ಅಥವಾ ಶುಭಗ್ರಹಗಳ ದೃಷ್ಟಿಇದ್ದರೆ ಜಾತಕಳು ರಾಜ ಪೂಜ್ಯಳು ಪುಣ್ಯಶಾಲಿಯೂ ಆಗುವಳು. ಜನನಲಗ್ನದಲ್ಲಿ ಬುಧನಿದ್ದರೆ— ಕಲಾ ನಿಪುಣಳು, ಸುಖ ಭೋಗಿಯು, ಗುಣವಂತಳು ಆಗುವಳು, ಜನನ ಲಗ್ನದಲ್ಲಿ ಶುಕ್ರ ಚಂದ್ರ ರಿದ್ದರೆ ಧನವಂತಳು, ಗುರು, ಶುಕ್ರರಿದ್ದರೆ ಐಶ್ವರ್ಯವಂತಳು ಆಗುವಳು, ಜನನಲಗ್ನವು ಕರ್ಕವಾಗಿ ಅಲ್ಲಿ ಗುರು, ಶುಕ್ರ, ಬುಧ, ಚಂದ್ರರು ಬಲಿಷ್ಠರಾ ಗಿದ್ದರೆ— ಆ ಜಾತಕಳು ಬ್ರಹ್ಮಜ್ಞಾನಿಯು ಅಥವಾ ಅನೇಕ ಶಾಸ್ತ್ರಗಳನ್ನು ಬಲ್ಲವಳು ಕುಶಲಳು ಆಗುವಳು. ಜನನಲಗ್ನವು ವಿಷಮರಾಶಿಯಾಗಿ ಬುಧ ಶುಕ್ರ ಚಂದ್ರರು ಬಲಹೀನರಿದ್ದಾಗ್ಯೂ ಉಳಿದ ಗ್ರಹಗಳು ಬಲಶಾಲಿಯಾಗಿ ದ್ದರೆ ಆ ಜಾತಕಳು ಸರ್ವಗುಣ ಸಂಪನ್ನಳೂ, ಪುರುಷರಂತೆ ಗುಣವುಳ್ಳವಳೂ ಆಗುವಳು. ಜನನಲಗ್ನವು ಸಮರಾಶಿಯಾಗಿ ರವಿ, ಮಂಗಳ, ಬುಧರು ಶುಭ ಸ್ಥಾನಗಳಲ್ಲಿ ಬಲಿಷ್ಠರಾಗಿದ್ದರೆ ಆ ಸ್ತ್ರೀಯು ತತ್ವಜ್ಞಾನಿಯು, ಚತುರಳು, ವೇದಾಂತ ಶಾಸ್ತ್ರ ಬಲ್ಲವಳು.

ಜನನ ಲಗ್ನಕುಂಡಲಿಯಲ್ಲಿ ಕೇಂದ್ರ ಅಥವಾ ತ್ರಿಕೋಣ ಸ್ಥಾನಗಳಲ್ಲಾಗಲಿ ಮೂಲ ತ್ರಿಕೋನ, ಅಥವಾ ಸ್ವಕ್ಷೇತ್ರದಲ್ಲಾಗಲಿ ಇದ್ದರೆ ಆ ಜಾತ

ಕಳು ಪುತ್ರವತಿಯು, ಸಾಧ್ವಿಯು, ಸುಖಿಯು, ಗುಣ ಸಂಪನ್ನಳು, ತವರುಮನೆ ಗಂಡನ ಮನೆಯ ಕೀರ್ತಿಯನ್ನು ಬೆಳೆಸುವತಕ್ಕವಳು ಆಗುವಳು, ಜನನಲಗ್ನ ದಿಂದ ೬ ನೇ ಸ್ಥಾನದಲ್ಲಿ ಪಾಪಗ್ರಹವಿದ್ದು ೯ ನೇ ಸ್ಥಾನದಲ್ಲಿ ಯಾವ ಗ್ರಹ ವಿರುವದೋ ಆ ಗ್ರಹದ ಗುಣದಂತೆ ಜ್ಞಾನಿಯಾಗುವಳು. ಜನನ ಲಗ್ನದಲ್ಲಿ ಚಂದ್ರ, ಬುಧ, ಶುಕ್ರರಾಗಲಿ ಅಥವಾ ಬುಧ, ಗುರು, ಶುಕ್ರರಾಗಲಿ ಇದ್ದರೆ ಆ ಸ್ತ್ರೀಯು ನಾನಾವಿಧ ಸುಖ ಭೋಗಿಯೂ, ಗುಣ ಸಂಪನ್ನಳು, ವಸ್ತ್ರಾಲಂಕಾರ ಭೂಷಿತಳೂ ಅನೇಕ ಜನ ದಾಸಿಯುಳ್ಳವಳೂ ಆಗುವಳು. ಜನನಲಗ್ನ ದಲ್ಲಿ ಬುಧ ಅಥವಾ ದ್ವಿತೀಯದಲ್ಲಿ ಶುಕ್ರ ದಶಮದಲ್ಲಿ ಚಂದ್ರ ಏಕಾದಶದಲ್ಲಿ ಗುರು ಈ ಪ್ರಕಾರ ಗ್ರಹಗಳಿದ್ದು ಕನ್ಯಾಲಗ್ನದಲ್ಲಿ ಜನಿಸಿದವಳು ಬಹು ಶುಭಯೋಗ ದವಳು, ಹಾಗು ರಾಣಿಯಾಗುವಳು. ಲಗ್ನ, ತೃತೀಯ, ಪಂಚಮ, ನವಮ ಈ ಸ್ಥಾನಗಳು ಅಸ್ತಗ್ರಹದ ಅಥವಾ ನೀಚ ಮತ್ತು ಶತ್ರುಗ್ರಹದ ಕ್ಷೇತ್ರವಾಗಿ ರದೆ ಬಲಿಷ್ಠ ಗ್ರಹದ ಬಲಿಷ್ಠ ರಾಶಿಯಾದರೆ ಸಕಲೈಶ್ವರ್ಯ ಸುಖ ಭೋಗಿಯಾಗು ವಳು. ಜನನಲಗ್ನದಿಂದ ೯ನೇ ಸ್ಥಾನದಲ್ಲಿ ಶುಭಗ್ರಹವಿದ್ದರೆ ೭.೮ ನೆಯ ಸ್ಥಾನಗ ಳಲ್ಲಿರುವ ಪಾಪಗ್ರಹಗಳು ದೋಷ ಭಂಗವಾಗುವದು. ಆ ಜಾತಕಳು ಪುತ್ರ ಪೌತ್ರರ ಸುಖ ಹೊಂದತಕ್ಕವಳಾಗುವಳು. ಸಿಂಹಲಗ್ನದಲ್ಲಿ ಜನಿಸಿದ ಸ್ತ್ರೀಯರು ಪುರುಷರಂತೆ ಪರಾಕ್ರಮ ಶಾಲಿಗಳಾಗುವರು.

ಗಂಡನ ಮೊದಲು ಸಾಯುವ ಯೋಗ– ಜನನ ಲಗ್ನದಲ್ಲಿ ಶುಭ ಮತ್ತು ಪಾಪಗ್ರಹಗಳಿದ್ದು ದ್ವಿತೀಯ ಸ್ಥಾನದಲ್ಲಿ ಬಲಿಷ್ಠರಾದ ಶುಭಗ್ರಹಗಳಿ ದ್ದರೆ ಗಂಡನಿಗಿಂತ ಮುಂಚೆ ಸಾಯುವಳು. ಮತ್ತು ಚಂದ್ರ ಲಗ್ನ ಕುಂಡಲಿ ಯಲ್ಲಿ ಚಂದ್ರನಿಂದ ಸಪ್ತಮಸ್ಥಾನದಲ್ಲಿ ಶುಭ ಮತ್ತು ಪಾಪಗ್ರಹಗಳು, ನೀಚ ರಾಗಿ ಮತ್ತು ಶತ್ರು ಕ್ಷೇತ್ರಗಳಲ್ಲಿದ್ದರೆ ಪತಿ ಸಾಯುವಾಗಲೇ ಸಾಯುವಳು.

ಮೃತ್ಯು ಯೋಗ— ಲಗ್ನಕ್ಕೆ ದ್ವಿತೀಯದಲ್ಲಿ ಕುಜನೂ, ಚತುರ್ಥದಲ್ಲಿ ಶನಿಯೂ, ಸಪ್ತಮದಲ್ಲಿ ಚಂದ್ರನೂ ಇರುವಾಗ ಜನಿಸಿದವಳು ನೀರಿನಲ್ಲಿ ಬಿದ್ದು ಸಾಯುವಳು ರವಿ, ಚಂದ್ರರು ಪಾಪಗ್ರಹಯುತರಾಗಲಿ, ದೃಷ್ಟರಾಗಿ ಯಾಗಲಿ ಆಗಿ ಕನ್ಯಾ ರಾಶಿಯಲ್ಲಿದ್ದರೆ–ಬಂಧನವಾಗಿ ಮೃತ್ಯುವಶವಾಗು ವಳು. ಅದೇ ರವಿ, ಚಂದ್ರರು ಮಿಕ್ಕ ದ್ವಿಸ್ವಭಾವರಾಶಿಗಳಲ್ಲಿದ್ದರೆ, ಆ ಸ್ತ್ರೀಯು

ಬುದ್ಧಿ ಪೂರ್ವಕವಾಗಿ ಅಂದರೆ ಬೇಕೆಂತಲೇ ನೀರಲ್ಲಿಬಿದ್ದು ಆತ್ಮಹತ್ಯೆ ಮಾಡಿಕೊಳ್ಳುವಳು. ಮತ್ತು ಕರ್ಕದಲ್ಲಿ ಶನಿಯೂ, ಮಕರದಲ್ಲಿ ಚಂದ್ರನೂ ಇದ್ದರೆ ಜಲೋದರವಾಗಿ ಮರಣ ಹೊಂದುವಳು. ಕುಜಕ್ಷೇತ್ರಗಳಾದ ಮೇಷ ವೃಶ್ಚಿಕಗಳಲ್ಲಿ ಚಂದ್ರನಿದ್ದು ದ್ವಿತೀಯ ದ್ವಾದಶಗಳಲ್ಲಿ ಪಾಪಗ್ರಹಗಳಿದ್ದರೆ ಶಸ್ತ್ರಪ್ರಯೋಗದಿಂದಾಗಲಿ ಅಗ್ನಿಯಿಂದಾಗಲಿ ಮರಣ ಹೊಂದುವಳು.

ಗಂಡನ ಅನುಮತಿಯಿಂದ ವ್ಯಭಿಚಾರ ಯೋಗ— ಶುಕ್ರ ಮತ್ತು ಕುಜರು ಸಪ್ತಮದಲ್ಲಿ ಚಂದ್ರನೊಡನಿದ್ದರೆ ಆ ಜಾತಕಳು ಗಂಡನ ಅನುಮತಿಯಿಂದ ಪರಪುರುಷರೊಡನೆ ರಮಿಸುವಳು.

ತಾಯಿಯ ಸಹಿತಳಾಗಿ ವ್ಯಭಿಚಾರಯೋಗ— ಶನಿ ಕುಜರ ಕ್ಷೇತ್ರಗಳಾದ ಮೇಷ ವೃಶ್ಚಿಕವಾಗಲಿ ಮಕರಕುಂಭವಾಗಲಿ ಲಗ್ನವಾಗಿ ಅಲ್ಲಿ ಶುಕ್ರ ಚಂದ್ರರಿದ್ದು ಪಾಪಗ್ರಹ ದೃಷ್ಟಿ ಇದ್ದರೆ, ತಾಯಿಯೊಡನೆ ಕೂಡಿಕೊಂಡು ವ್ಯಭಿಚಾರಿಯಾಗುವಳು. ಲಗ್ನದಲ್ಲಿ ಶುಕ್ರ ಚಂದ್ರರಿದ್ದು ಪಾಪಗ್ರಹಗಳಿಂದ ನೋಡಲ್ಪಟ್ಟರೆ ತನ್ನ ಜಾಮಾತ (ಅಳಿಯ) ನೊಡನೇ ರಮಿಸುವಳು.

ಶುಭಯೋಗಗಳು— ಜನ್ಮಕಾಲದಲ್ಲಿ ಪೃಷ್ಠೋದಯ ರಾಶಿಗಳು ಲಗ್ನ. ಚತುರ್ಥ ದಶಮಗಳಾಗಿ ಶುಭಗ್ರಹರಿದ್ದು ಸಪ್ತಮವು ದ್ವಿಪಾದರಾಶಿ (ಮನುಷ್ಯರಾಶಿ)ಯಾಗಿ ಅಲ್ಲಿ ಪಾಪಗ್ರಹವಿದ್ದರೆ ಆ ಸ್ತ್ರೀಯು ಗುಣವಂತೆಯೂ, ಅನೇಕ ತರದ ಸುಖಭೋಕ್ತಳೂ ಶ್ರೀಮಂತಳೂ ಆಗುವಳು.

ಷಡ್ವರ್ಗ ಶುದ್ಧನಾದ ಗುರುವು ಲಗ್ನಕೇಂದ್ರದಲ್ಲಾಗಲಿ ತ್ರಿಕೋನದಲ್ಲಾಗಲಿ, ಇದ್ದು, ಪೂರ್ಣ ಚಂದ್ರನ ಪೂರ್ಣ ದೃಷ್ಟಿಯುಕ್ತನಾಗಿದ್ದರೆ ಆ ಸ್ತ್ರೀಯು ಸಕಲೈಶ್ವರ್ಯ ಭೋಗಯುಕ್ತಳಾಗಿ ಸರ್ವ ಸುಖ ಭೋಗಗಳನ್ನು ಅನುಭವಿಸಿ ಪತಿಯ ಮುಂದೆಯೇ ಸಾಯುವಳು, ಮಿಥುನ ಲಗ್ನವಾಗಿ ಅಲ್ಲಿ ಶುಕ್ರನಿದ್ದು, ಚತುರ್ಥದಲ್ಲಿ ಬುಧನಿದ್ದು, ಸಪ್ತಮನಾದ ಧನು ರಾಶಿಯಲ್ಲಿ ಗುರುವು ಷಡ್ವರ್ಗ ಶುದ್ಧನಾಗಿದ್ದರೆ ಪತಿವ್ರತೆಯೂ, ವ್ರತನಿಷ್ಠೆಯೂ, ವಿದ್ಯಾವತಿಯೂ ಶ್ರೀಮಂತಳೂ, ಆಗಿ ಗೃಹವಾಹನಾದಿ ಭಾಗ್ಯವನ್ನನುಭವಿಸಿ ಪುತ್ರಪೌತ್ರಾದಿಗುಳ್ಳವಳಾಗಿ ಪತಿಗಿಂತ ಮುಂಚಿತವಾಗಿಯೇ ಸಾಯುವಳು.

ಕನ್ಯಾಲಗ್ನವಾಗಿ ಅಲ್ಲಿ ಬುಧನಿದ್ದು, ದ್ವಿತೀಯದಲ್ಲಿ ಶುಕ್ರನೂ, ದಶಮದಲ್ಲಿ ಚಂದ್ರನೂ, ಲಾಭಸ್ಥಾನದಲ್ಲಿ ಗುರುವೂ ಇದ್ದರೆ ಆಸ್ತ್ರೀಯು ರಾಣಿಯಾಗುವಳು. ಲಗ್ನ, ತೃತೀಯ, ಪಂಚಮ, ನವಮ ಈ ಯಾವ ಸ್ಥಾನಗಳಲ್ಲಾಗಲಿ ಅಸ್ತ ನೀಚ ಶತ್ರು ಕ್ಷೇತ್ರಗಳಲ್ಲದೆ ಬಲಿಷ್ಠ ಗ್ರಹಗಳಿದ್ದರೆ ಅನೇಕ ತರದ ಐಶ್ವರ್ಯಾದಿಗಳನ್ನೂ ಸುಖವನ್ನೂ ಭೋಗಿಸುವವಳಾಗುವಳು

ಸ್ತ್ರೀಯರ ಪ್ರಥಮ ಋತು (ಮೈನೆರೆ) ವಿಷಯ

ಸಮಸ್ತ ಸ್ತ್ರೀ ಪುರುಷರು ಜನನವಾದ ವಾರ, ತಿಥಿ, ನಕ್ಷತ್ರ, ಯೋಗ ಕರಣ. ಜನನ ಕಾಲದ ಲಗ್ನ ಕುಂಡಲಿಯಲ್ಲಿರುವ ಗ್ರಹಗಳ ಬಲಾಬಲಗಳಿಂದ ಅವರ ಸಂಪೂರ್ಣ ಜೀವನದ ಸುಖ, ದು:ಖ ಪತ್ನಿ ಪುತ್ರ, ಆಯುರಾರೋಗ್ಯಾದಿ ಸರ್ವ ವಿಷಯಗಳನ್ನು ತಿಳಿಯಲು ಸಾಧ್ಯವಾಗುವದು. ಅದರಂತೆ ಸ್ತ್ರೀಯರು ಪ್ರಥಮ ಋತು (ಮೈನೆರೆತ) ವಾದ ವಾರ, ತಿಥಿ, ನಕ್ಷತ್ರ, ಯೋಗ ಕರಣಗಳಿಂದಲೂ ಋತು ಲಗ್ನ ಕುಂಡಲಿಯಲ್ಲಿಯ ಗ್ರಹಗಳಿಂದಲೂ, ಉಟ್ಟ ಬಟ್ಟೆಗಳು, ರಜೋಬಿಂದುಗಳಿಂದಲೂ, ಆಕೆಯ ಸುಖ, ಭೋಗ, ಭಾಗ್ಯಾದಿಗಳನ್ನೂ ತಿಳಿದುಕೊಳ್ಳಲು ಶಕ್ಯವಾಗುವದರಿಂದ ಅವುಗಳ ಫಲವನ್ನು ಇಲ್ಲಿ ನಿರೂಪಿಸುತ್ತವೆ. (ಸ್ತ್ರೀಯರ ಪ್ರಥಮಋತು ಫಲವು ಅವಳು ವಿವಾಹವಾಗುವವರೆಗೆ ಮಾತ್ರ ಹೆಚ್ಚು ಫಲಪ್ರದವಾಗುವದು).

— ಮಾಸ ಫಲ —

ಚೈತ್ರಮಾಸದಲ್ಲಿ ಪ್ರಥಮ ಋತುವಾದರೆ ವಿಧವೆಯು. ವೈಶಾಖಮಾಸದಲ್ಲಿ ಧನಸಂಪದವು ಜ್ಯೇಷ್ಠ ಮಾಸದಲ್ಲಿ ರೋಗ ಪ್ರಾಪ್ತಿಯು, ಆಷಾಢಮಾಸದಲ್ಲಿ ಅಲ್ಪಾಯುಷಿಗಳಾದ ಮಕ್ಕಳನ್ನು ಪಡೆಯತಕ್ಕವಳು. ಶ್ರಾವಣಮಾಸದಲ್ಲಿ ಲಕ್ಷ್ಮಿಪ್ರಾಪ್ತಿಯು. ಭಾದ್ರಪದ ಮಾಸದಲ್ಲಿ ದರಿದ್ರಳು ಅಶ್ವಿನಿ ಮಾಸದಲ್ಲಿ ಧನ ಧಾನ್ಯ ಸಮೃದ್ಧಿಯು. ಕಾರ್ತಿಕ ಮಾಸದಲ್ಲಿ ಧನವಿಲ್ಲದವಳು ಮಾರ್ಗಶಿರ ಮಾಸದಲ್ಲಿ ಬಹು ಪುತ್ರವತಿಯು ಪುಷ್ಯ ಮಾಸದಲ್ಲಿ ವ್ಯಭಿಚಾರಿಣಿಯು, ಮಾಘಮಾಸದಲ್ಲಿ ಪುತ್ರ ಪೌತ್ರರುಳ್ಳವಳು ಫಾಲ್ಗುಣ ಮಾಸದಲ್ಲಿ ಪುತ್ರ ಸಂಪನ್ನಳು ಆಗುವಳು. ಅಂದರೆ ವೈಶಾಖ, ಶ್ರಾವಣ, ಆಶ್ವೀನ, ಮಾರ್ಗಶಿರ

ಪೌಷ, ಫಾಲ್ಗುಣ ಮಾಸಗಳಲ್ಲಿ ರಜಸ್ವಲೆಯಾದರೆ ಶುಭ ಪ್ರದವು. ಕಾರ್ತಿಕ ಮಾಸವು ಸಾಧಾರಣವು.

— ವಾರ ಫಲ —

ರೋಹಿಣೀ ರವಿವಾರೇಚ ಸೋಮವಾರೇ ಪತಿವ್ರತಾ। ದುಃಖಿತಾ ಭೌಮ ವಾರೇತು ಬುಧೇ ಸೌಭಾಗ್ಯ ಸಂಯುತಾ॥ ಶ್ರೀ ಸಂಯುತಾ ಗುರೋರ್ವಾರೇ ಸತಿಭಕ್ತಾ ಭೃಗೋರ್ದಿನೇ। ಮಲಿನಾಮಂದ ವಾರೇತು ರಾತ್ರಾವಪಿತ ಥೈವಚ॥

ಆದಿತ್ಯವಾರ ಪ್ರಥಮ ಪುಷ್ಪವತಿಯಾದ ಸ್ತ್ರೀಯಳು ನಾನಾ ಪ್ರಕಾರ ರೋಗಗಳಿಂದ ಉಂಟಾಗುವ ಅನುಭವವನ್ನು ಹೊಂದುವಳು. ಸೋಮವಾರ ರಜಸ್ವಲೆಯಾದರೆ ನಿರಂತರವಾಗಿ ಪತಿ ಸೇವೆಯೇ ಮುಖ್ಯ ಧರ್ಮವೆಂದು ತಿಳಿದು ಅಂತಃಕರಣ ಶುದ್ಧಿಯಿಂದ ಅನುಭವಿಸತಕ್ಕವಳು. ಮಂಗಳವಾರ ಪ್ರಥಮ ರಜೋದರ್ಶನವಾದವಳು ನಾನಾ ಪ್ರಕಾರದ ದುಃಖವನ್ನು ಅನು ಭೋಗಿಸುವವಳು ಬುಧವಾರ ಪುಷ್ಪವತಿಯಾದರೆ ಸತ್ಪುರುಷರು ಭೋಗಿಸುವ ಸೌಭಾಗ್ಯವುಳ್ಳವಳೂ, ಸತ್ಕಾರ್ಯಗಳನ್ನು ಮಾಡತಕ್ಕವಳೂ, ಆಗುವಳು. ಗುರುವಾರವಾದರೆ ಸುಶೀಲಳು, ಅತ್ಯಂತ ಸಂಪನ್ನಳು. ಶುಕ್ರವಾರವಾದರೆ ಸದಾಕಾಲ ಪತಿಯಲ್ಲಿ ಅಧಿಕ ಭಕ್ತಿಯುಳ್ಳವಳು ಶನಿವಾರವಾದರೆ ನಿರಂತರಕಲುಷಿತ ಸ್ವಭಾವಿಯೂ, ದುರ್ನಡತೆಯುಳ್ಳವಳೂ ಆಗುವಳು. ಅಂತು ಸೋಮ, ಬುಧ, ಗುರು, ಶುಕ್ರವಾರಗಳಲ್ಲಿ ಪ್ರಥಮ ರಜಸ್ವಲೆಯಾದರೆ ಶುಭ ಪ್ರದವು.

— ಗ್ರಂಥಾಂತರದಲ್ಲಿ ವಾರ ಫಲ —

ಆದಿತ್ಯವಾರ ಋತುವಾದರೆ ವಿಧವೆಯಾಗುವಳು. ಸೋಮವಾರ ವಾದರೆ ನಷ್ಟ ಸಂತತಿಯುಳ್ಳವಳು, ಮಂಗಳವಾರವಾದರೆ ಆತ್ಮ ಘಾತಕಿಯು ಹಾಗೂ ಯಾವಾಗಲೂ ಶೋಕವುಳ್ಳವಳು, ಬುಧವಾರವಾದರೆ ಹೆಣ್ಣು ಸಂತಾನ ಹೆಚ್ಚು ಉಳ್ಳವಳು. ಗುರುವಾರವಾದರೆ ಗಂಡು ಸಂತಾನ ಅಧಿಕವುಳ್ಳವಳು. ಶುಕ್ರವಾರ ವಾದರೆ ಸುಮಂಗಲೆಯು ಸೌಭಾಗ್ಯವಂತಳು, ಶನಿವಾರವಾದರೆ ವ್ಯಭಿಚಾರಣಿ ಯಾಗುವಳು.

— ತಿಥಿ ಫಲ —

ಸಂತಾಳ ಹೀನಾ ಪ್ರತಿಪದ್ಧಿ ನೇಚ ಭವೇದ್ವಿತೀಯೇಲ್ಪ ಸುಖಾತ್ಸೃತೀಯೇ| ಸಮಸ್ತ ಸೌಭಾಗ್ಯವತೀ ಚತುರ್ಥ್ಯಾಂ ಪಾಪಾಲಯಾ ಭೋಗ ವಿವರ್ಜಿತಾಚ|| ಪಂಚಮ್ಯಾಂ ಬಹುಪುತ್ರ ಭೋಗ ಸಹಿತಾ ಷಷ್ಠ್ಯಾಂತು ದುರ್ಭಾಷಿಣೀ| ಸಪ್ತಮ್ಯಾಂ ಧನಧಾನ್ಯ ಭೂಷಣ ಯುತಾ ಶೌರ್ಯಾನ್ವಿತಾಹ್ಯಷ್ಟಮೇ|| ದುಃಖಾರ್ತಾ ನವಮೇದಿನೇಹ್ನಿ ದಶಮೇ ಸೌಭಾಗ್ಯಯುಕ್ತ ಪರಾ| ಏಕಾದ್ಯಾರುದ್ರ ದಿನೇ ತಥಾರ್ಕ ದಿವಸೇ ಸ್ಯಾದ್ದೂಷಿಣೀ ಸರ್ವದಾ|| ತ್ರಯೋದಶ್ಯಾಂತು ಸಂತುಷ್ಟಾ ಭೂತಾಯಾಂ ಪಾಪಿನೀ ಭವೇತ್| ಪೂರ್ಣಿಮಾಯಾಂತು ಸಂಪುಷ್ಟಾ ಚಾಮಾಯಾ ಮಲ್ಪ ಭೋಗಿನೀ ||

ಪ್ರತಿಪದ ತಿಥಿಯಲ್ಲಿ ರಜಸ್ವಲೆಯಾದ ಕನ್ಯೆಯು ಪುತ್ರ; ಪುತ್ರಿಯರೇ ಆದಿಯಾಗಿ ಸಂತಾನ ರಹಿತಳು. ದ್ವಿತಿಯಾ ತಿಥಿಯಲ್ಲಿ ಋತುವಾದವಳು ನಾನಾ ಪ್ರಕಾರದ ಸುಖಭೋಗಗಳನ್ನ ಅನುಭವಿಸತಕ್ಕವಳು, ತೃತೀಯಾ ತಿಥಿಯಲ್ಲಿ ಪುಷ್ಪವತಿಯಾದವಳು ನಾನಾವಿಧ ಭೋಗ ಭಾಗ್ಯಗಳಿಂದ ಕೂಡಿದ ಸುಖಾನುಭವವುಳ್ಳವಳು. ಚತುರ್ಥಿ ತಿಥಿಯಲ್ಲಿ ರಜೋದರ್ಶನವಾದರೆ ಪಾಪ ಕಾರ್ಯಾಚರಣೆಯುಳ್ಳವಳು, ಸುಖಭೋಗ ಶೂನ್ಯಳು, ಪಂಚಮಿ ತಿಥಿಯಲ್ಲಿ ಆದರೆ ಬಹು ಪುತ್ರವತಿಯು. ಐಶ್ವರ್ಯವಂತಳು, ಷಷ್ಠಿ ತಿಥಿಯಲ್ಲಿ ಆದರೆ ಕ್ರೂರ ಸ್ವಭಾವದವಳು, ಅತ್ಯಂತ ಕಠೋರವಾಗಿ ಮಾತಾಡತಕ್ಕವಳು, ಸಪ್ತಮಿ ತಿಥಿಯಲ್ಲಿ ಆದರೆ ಧನಧಾನ್ಯ ಸಮೃದ್ಧಿಯುಳ್ಳವಳು. ನಾನಾವಿಧ ವಸ್ತ್ರಾಭರಣ ಯುಕ್ತಳು. ಅಷ್ಟಮಿ ತಿಥಿಯಲ್ಲಿ ಆದರೆ ಶೂರಳು, ಸರ್ವಜನ ಮಾನ್ಯಳು ನವಮಿ ತಿಥಿಯಲ್ಲಿ ಆದರೆ ಬಹು ವಿಧ ದುಃಖಪೀಡಿತಳು, ಚಿಂತಾಯುತಳು ವ್ಯಸನಿಯು ದಶಮಿ ತಿಥಿಯಲ್ಲಿ ಆದರೆ ಸಕಲ ಸೌಭಾಗ್ಯಗಳನ್ನು ಅನುಭವಿಸ ತಕ್ಕವಳು, ಪುಣ್ಯಶೀಲಳು, ಲೋಕಪೂಜ್ಯಳು, ಏಕಾದಶಿ ತಿಥಿಯಲ್ಲಿ ಆದರೆ ಶುಚಿರ್ಭೂತಳು, ವ್ರತನೇಮಾದಿ ಧರ್ಮಾಚರಣೆಯುಳ್ಳವಳು, ದ್ವಾದಶಿ ತಿಥಿಯಲ್ಲಿ ಋತುವಾದರೆ ಅನ್ಯರನ್ನು ದೂಷಿಸತಕ್ಕವಳು ತ್ರಯೋದಶಿ ತಿಥಿಯಲ್ಲಿ ರಜಸ್ವಲೆಯಾದವಳು ಧರ್ಮಿಷ್ಠಳು, ಸತ್ಕಾರ್ಯಗಳನ್ನು ಮಾಡತಕ್ಕವಳು, ಸಂತೋಷಚಿತ್ತಳು, ಚತುರ್ದಶಿ ತಿಥಿಯಲ್ಲಿ ಪುಷ್ಪವತಿಯಾದವಳು, ದುಷ್ಟಳು ಪಾಪ

ಕಾಮಾಸಕ್ತಳು, ಕ್ರೂರಳು, ಪೌರ್ಣಿಮೆ ತಿಥಿಯಲ್ಲಿ ಋತುವಾದವಳು ಸದ್ಗುಣಳು, ಆರೋಗ್ಯವಂತಳು ರೋಗ ರಹಿತಳು, ದಷ್ಟಪುಷ್ಟವಾದ ದೇಹವುಳ್ಳವಳು, ಅಮಾವಾಸ್ಯಾ ತಿಥಿಯಲ್ಲಿ ರಜಸ್ವಲೆಯಾದವಳು ಅಲ್ಪ ಭೋಗಿಯು ಆಗುವಳು. ಅರ್ಥಾತ್ ದ್ವಿತಿಯಾ, ತೃತೀಯಾ, ಪಂಚಮಿ ಸಪ್ತಮಿ, ಅಷ್ಟಮಿ, ದಶಮಿ, ಏಕಾದಶಿ, ತ್ರಯೋದಶಿ ಹುಣ್ಣಿವೆ ಈ ತಿಥಿಗಳಲ್ಲಿ ಪ್ರಥಮ ಋತುಮತಿಯಾದರೆ ಶುಭಪ್ರದವು.

— ನಕ್ಷತ್ರಗಳ ಫಲ —

ಶುಭ ನಕ್ಷತ್ರಗಳು

ಕರಾದಿ ಪಂಚೋತ್ತರೇ ಮೂಲ ಪೂಷ ವಿಷ್ಣು ತ್ರಯಾಶ್ವಿಜ್ಯ ವಿಧೀಂ ಶುಭೇಷು । ಆದ್ಯಂ ರಜಸ್ಸೌಖ್ಯ ಸುತಾಯುರರ್ಥಂ ಸೌಭಾಗ್ಯ ವೃದ್ಧಿಂ ಕುರುತೇಂಗನಾನಾಂ ॥

— ದುಷ್ಟ ನಕ್ಷತ್ರಗಳು —

ಪೂರ್ವತ್ರಯೇ ದರಿದ್ರಾಸ್ಸ್ಯಾತ್ಕೃತ್ತಿಕಾಯಾಂ ತು ದುರ್ಬಲಾ । ಆರಿದ್ರಾಯಾಂ ಪುತ್ರನಾಶಸ್ಯಾದ್ಭರಣ್ಯಾಂ ಸ್ವಮೃತಿರ್ಭವೇತ್ । ಮಘಾಯಾಂಭರ್ತೃನಾಶಸ್ಯಾತ್ಸಾರ್ಪೇ ಚಾಂಡಾಲಗಾಮಿನೀ । ದರಿದ್ರಿಣಿ ಚ ಜ್ಯೇಷ್ಠಾಯಾಂ ರತಿಹೀನಾಚ ಜಾಯತೇ ॥

ಅಶ್ವಿನಿ—ಈ ನಕ್ಷತ್ರದಲ್ಲಿ ಪ್ರಥಮ ಋತುವಾದ ಸ್ತ್ರೀಯಳು ಸುಮಂಗಲೆಯೂ, ಸೌಭಾಗ್ಯವತಿಯೂ, ಪುತ್ರವತಿಯೂ, ಬಂಧುಬಳಗದವರಲ್ಲಿ ಮಾನ್ಯಳೂ, ಸುಖಭೋಗಯುತಳೂ, ಸರ್ವಜನರಲ್ಲಿ ಶ್ರೇಷ್ಠಳೂ, ಧನಧಾನ್ಯ ಯುಕ್ತಳೂ, ಸುಶೀಲಳೂ, ಪತಿಭಕ್ತಿಯುಳ್ಳವಳೂ ಆಗುವಳು.

ಭರಣಿ – ಈ ನಕ್ಷತ್ರದ ಪ್ರಥಮ ಪಾದದಲ್ಲಿ ರಜಸ್ವಲೆಯಾದರೆ ಆ ಕನ್ಯೆಯು ತನ್ನ ಪತಿಗೆ ಕಂಟಕ ಪ್ರಾಯಳಾಗುವಳು. ೨ ನೆಯ ಪಾದದಲ್ಲಿ ಋತುವಾದರೆ ಹುಟ್ಟಿದ ಮಕ್ಕಳೆಲ್ಲ ಮರಣವನ್ನು ಹೊಂದುವವು. ೩ ನೆಯ ಪಾದದಲ್ಲಿ ಋತುವಾದರೆ ನಾನಾ ವಿಧವಾದ ಭೋಗಭಾಗ್ಯಹೀನಳಾಗುವಳು. ೪ ನೆಯ ಪಾದದಲ್ಲಿ ಋತುವಾದರೆ ನಿರಂತರ ಅಶುಭ ಫಲವನ್ನು ಹೊಂದತಕ್ಕವಳು, ಅಮಂಗಲಳು, ವಿಧವೆಯು, ತನ್ನ ಇಚ್ಛಾ ಪ್ರಕಾರ ನಡೆಯತಕ್ಕವಳು. ದುಷ್ಟಸ್ವಭಾವದವಳು, ಅನ್ಯರ ಮನೆಯ ಕೆಲಸಗಳಲ್ಲಿ ಆಸಕ್ತಳು ಆಗುವಳು.

ಕೃತ್ತಿಕಾ— ಈ ನಕ್ಷತ್ರದಲ್ಲಿ ಋತುವಾದ ಸ್ತ್ರೀಯಳು, ಪುತ್ರಹೀನಳು, ಬಂಜೆಯು, ಅನೇಕ ಕಷ್ಟಗಳನ್ನು ಅನುಭವಿಸತಕ್ಕವಳು, ದರಿದ್ರಳು, ಕಷ್ಟ ಜೀವಿಯು, ಅನ್ಯರಲ್ಲಿ ಉಪಜೀವನಕ್ಕಾಗಿ ಚಾಕರಿ ಮಾಡತಕ್ಕವಳು, ಗರ್ಭ ಸ್ರಾವ ಹೊಂದತಕ್ಕವಳು ಅಥವಾ ಜನಿಸಿದ ಪುತ್ರರು ಅಲ್ಪಾಯುಷಿಗಳಾಗುವಿಕೆಯು ಇತ್ಯಾದಿ ಫಲಗಳನ್ನು ಅನುಭವಿಸುವಳು. ಆದರೂ ಈ ನಕ್ಷತ್ರದ ೧ನೆಯ ಪಾದದಲ್ಲಿ ಋತುವಾದರೆ ಶುಭವು ಉಳಿದ ೨-೩-೪ ನೆಯ ಪಾದಗಳು ಅಶುಭವು.

ರೋಹಿಣಿ— ಈ ನಕ್ಷತ್ರದಲ್ಲಿ ರಜಸ್ವಲೆಯಾದವಳು ವಿನಯವಂತಳು, ಸರ್ವರೊಡನೆ ಪ್ರೀತಿಯಿಂದ ವರ್ತಿಸತಕ್ಕವಳು, ಮೃದು ಭಾಷಿಣಿಯು, ಬುದ್ಧಿವಂತಳು, ಸುಖಭೋಗಿಯು, ದೀರ್ಘಾಯುಷಿಯು, ಪುತ್ರ ಪೌತ್ರರುಳ್ಳವಳು, ಸೌಭಾಗ್ಯವಂತಳು ಸುಶೀಲಳು, ಪತಿವ್ರತೆಯು, ಧನಧಾನ್ಯ ಸಮೃದ್ಧಿಯುಳ್ಳವಳು, ಸಮಾಧಾನ ಮನಸ್ಸಿನವಳು, ಗೃಹಕೃತ್ಯದಲ್ಲಿ ಸುವಿಚಾರಿಯು, ಬಂಧು ಜನರಲ್ಲಿ ಮಾನಮನ್ನಣೆ ಹೊಂದತಕ್ಕವಳು ಆಗುವಳು.

ಮೃಗಶಿರ— ಈ ನಕ್ಷತ್ರದಲ್ಲಿ ಋತುಮತಿಯಾದ ಕನ್ಯೆಯು ಸದ್ಗುಣಿಯು, ಪತಿಯಲ್ಲಿ ಪ್ರೇಮವುಳ್ಳವಳು, ದಾನ, ಧರ್ಮ, ಪರೋಪಕಾರ ಮಾಡುವವಳು, ಪುತ್ರವತಿಯು, ಸುಶೀಲಳು, ಶಾಂತಳು, ಆಯುಷ್ಮಂತಳು, ಧಾರ್ಮಿಕ ಕಾರ್ಯಗಳಲ್ಲಿ ನಿಷ್ಠೆಯುಳ್ಳವಳು, ಗುರು-ಹಿರಿಯರ ಆಜ್ಞಾಪಾಲಕಳು, ದರಿದ್ರಳು, ಸೋಮಾರಿಯು ಸಹ ಆಗುವಳು.

ಆರಿದ್ರಾ - ಈ ನಕ್ಷತ್ರದಲ್ಲಿ ಋತುವತಿಯಾದವಳು ಕೋಪಿಷ್ಟಳು, ದುಃಖಿಯು, ಪಾಪಿಷ್ಠಳು, ಅನೇಕ ವಿಧವಾದ ಪಾಪ ಕರ್ಮಗಳಿಂದ ಉಂಟಾಗುವ ಕಷ್ಟಗಳನ್ನು ಅನುಭವಿಸತಕ್ಕವಳು, ದುರಾಚರಣೆಯು, ಸೋಮಾರಿತನದ ಸ್ವಭಾವದವಳು, ಪತಿಗೆ ವಿರೋಧಿಯು, ನಕ್ಷತ್ರದ ೧ ನೆಯ ಪಾದದಲ್ಲಿ ಋತುಮತಿಯಾದರೆ ಶುಭಕರ. ೨-೩-೪ ನೆಯ ಚರಣಗಳು ಅಶುಭವಾದವು.

ಪುನರ್ವಸು – ಈ ನಕ್ಷತ್ರದೊಳು ಋತುವಾದ ಸ್ತ್ರೀಯಳು ಪುತ್ರವತಿಯು, ಸುಶೀಲಳು, ಧರ್ಮಾಚರಣೆಯುಳ್ಳವಳು, ಸಂಪನ್ನಳು, ಪತಿಸೇವಾನಿರತಳು, ಮಕ್ಕಳಿಂದ ಸೌಖ್ಯವನ್ನು ಹೊಂದತಕ್ಕವಳು, ಗುರು–ಹಿರಿಯರ ಆಜ್ಞಾನುವರ್ತಿಯು ಆಗುವಳು.

ಪುಷ್ಯ—ಈ ನಕ್ಷತ್ರದಲ್ಲಿ ಪುಷ್ಪವತಿಯಾದವಳು ಧನಧಾನ್ಯ ಸಮೃದ್ಧಿಯಿಂದ ಕೂಡಿದವಳು ಸುಖಭೋಗಿಯು, ಸಕಲ ಸೌಭಾಗ್ಯವಂತಳು, ಪುತ್ರ ಪೌತ್ರರಿಂದ ಸಂತೋಷ ಹೊಂದತಕ್ಕವಳು, ಬಹುಪ್ರಕಾರದ ಭೋಗಭಾಗ್ಯಗಳನ್ನು ಅನುಭವಿಸುವಂತವಳು ದೀರ್ಘಕಾಲ ಆಯುಷ್ಮಂತಳು ಸುವಿಚಾರಿಯು ಆಗುವಳು.

ಆಶ್ಲೇಷ—ಈ ನಕ್ಷತ್ರದಲ್ಲಿ ಋತುಮತಿಯಾದ ಸ್ತ್ರೀಯಳು, ಪಾಪಿಷ್ಟಳು, ಅನೇಕ ವಿಧವಾದ ಪಾಪಕರ್ಮಗಳನ್ನು ಮಾಡಿ ದುಃಖವನ್ನು ಅನುಭವಿಸತಕ್ಕವಳು, ತನ್ನ ಪತಿಯನ್ನು ನಿಂದಿಸುವವಳು, ದುಷ್ಟರಾದ ಪುತ್ರ ಪುತ್ರಿಯರುಳ್ಳವಳು, ಪುರುಷರಲ್ಲಿ ಪ್ರೇಮವುಳ್ಳವಳು, ಮೋಸಗಾರಳು, ಕುಟಿಲಳು, ಆಗುವಳು.

ಮಘಾ—ಈ ನಕ್ಷತ್ರದಲ್ಲಿ ರಜಸ್ವಲೆಯಾದ ಕನ್ಯೆಯು ಕಷ್ಟದಿಂದ ಜೀವಿಸುವವಳು, ರೋಗಪೀಡೆಯುಳ್ಳವಳು, ಪರರೊಡನೆ ಪ್ರೀತಿಯಿಂದ ಇರತಕ್ಕವಳು, ಗೌರವಶೀಲಳು, ಅಭಿಮಾನಿಯು, ಧನಧಾನ್ಯವತಿಯು, ಸಂಗೀತದಲ್ಲಿ ಪ್ರೇಮವುಳ್ಳವಳು. ಈ ನಕ್ಷತ್ರದ ೧ ನೆಯ ಪಾದವು ಶುಭ ೨-೩-೪ ನೆಯ ಪಾದಗಳಲ್ಲಿ ಋತು ಆದರೆ ಅಶುಭವು, ಪತಿಗೆ ಕಂಟಕ ಪ್ರಾಯಳು ಆಗುವಳು.

ಪುಬ್ಬ—ಈ ನಕ್ಷತ್ರದಲ್ಲಿ ಪುಷ್ಪವತಿಯಾದರೆ ಕಷ್ಟ ಜೀವಿಯು ಬಡತನವನ್ನು ಅನುಭವಿಸತಕ್ಕವಳು, ಧನಹೀನಳು, ದುಷ್ಟರಾದ ಮಕ್ಕಳಿಂದ ದುಃಖವನ್ನು ಹೊಂದತಕ್ಕವಳು, ಮಲಿನ ಸ್ವಭಾವದವಳು, ಶೀಘ್ರಕೋಪಿಯು, ತೀಕ್ಷ್ಣ ಸ್ವಭಾವಿಯು ಆಗುವಳು ಈ ನಕ್ಷತ್ರದ ೧ನೆಯ ಪಾದದಲ್ಲಿ ರಜೋದರ್ಶನವಾದರೆ ಪತಿಗೆ ಭಯವು, ೨ನೆಯ ಪಾದದಲ್ಲಿ ಸಂತಾನಕ್ಕೆ ಕಂಟಕ ಪ್ರಾಯಳು, ೩ ನೆಯ ಪಾದದಲ್ಲಿ ಭೋಗಭಾಗ್ಯ ಶೂನ್ಯಳಾಗುವಳು, ೪ ನೆಯ ಪಾದದಲ್ಲಿ ಅಮಂಗಲಕರಳು.

ಉತ್ತರ-ಈ ನಕ್ಷತ್ರದಲ್ಲಿ ಋತುಮತಿಯಾದ ಸ್ತ್ರೀಯಳು ಪತಿವ್ರತೆಯು ಬಹುಜನ ಪುತ್ರರುಳ್ಳವಳು, ಬಹು ಪ್ರಕಾರದ ಭೋಗಭಾಗ್ಯಗಳಿಂದ ಕೂಡಿದವಳು, ದೀರ್ಘಾಯುಷಿಯು, ಶುದ್ಧಾಚರಣೆಯುಳ್ಳವಳು, ಆಪ್ತೇಷ್ಟರಲ್ಲಿ ಪ್ರೀತಿ ಗೌರವವನ್ನು ಹೊಂದತಕ್ಕವಳು, ಸರ್ವರಲ್ಲಿ ಪ್ರೀತಿಯುಳ್ಳವಳು, ಧರ್ಮವಂತಳು ಆಗುವಳು.

ಹಸ್ತ— ಈ ನಕ್ಷತ್ರದಲ್ಲಿ ಪುಷ್ಪವತಿಯಾದವಳು ಪುತ್ರಪೌತ್ರರಿಂದ ಕೂಡಿದವಳು ಧನವಂತಳು ಅಧಿಕ ಸುಖಭೋಗಿಯು ದಾನ ಧರ್ಮ ಪರೋಪ ಕಾರಗಳಲ್ಲಿ ಮನಸ್ಸುಳ್ಳವಳು, ಸಮಾಧಾನ ಚಿತ್ತಳು, ಕಾರ್ಯದಲ್ಲಿ ಕುಶಲಳು, ದೀರ್ಘಾಯುಷಿಯು ಸೌಭಾಗ್ಯವಂತಳು.

ಚಿತ್ತ— ಈ ನಕ್ಷತ್ರದಲ್ಲಿ ಋತುಮತಿಯಾದ ಅಂಗನೆಯು ಹಟವಾರಿ ಸ್ವಭಾವದಳು, ನಡತೆಯುಳ್ಳವಳು, ಪುತ್ರವಂತಳು, ಎಲ್ಲ ಕೆಲಸಗಳಲ್ಲಿ ಜಾಣಳು, ಸಾಧಾರಣ ಸುಖವುಳ್ಳವಳು, ಖರೀದಿ ವಿಕ್ರಿ ವ್ಯವಹಾರಗಳಲ್ಲಿ ಕುಶಲಳು, ದೀರ್ಘಾಯುಷಿಯು ಆಗುವಳು.

ಸ್ವಾತಿ— ಈ ನಕ್ಷತ್ರದಲ್ಲಿ ಋತುಮತಿಯಾದ ಕನ್ಯೆಯು ಪುತ್ರವತಿಯು, ದೀರ್ಘಾಯುಷಿಯು, ಧನವಂತಳು, ಸುಮಂಗಲೆಯು, ಸೌಭಾಗ್ಯವಂತಳು, ಜಾಣಳು, ವಿಲಾಸ ವಸ್ತ್ರಾಲಂಕಾರ ಪ್ರಿಯಳು, ಚತುರಳು ಸಿದ್ಧಳು ಆಗು ವಳು.

ವಿಶಾಖ— ಈ ನಕ್ಷತ್ರದಲ್ಲಿ ರಜಸ್ವಲೆಯಾದವಳು ಕ್ರೂರಳು, ಕಠೋರ ವಾಗಿ ಮಾತಾಡತಕ್ಕವಳು, ನಿಷ್ಠುರಳು, ಪರರ ಮನಸ್ಸು ನೋಯಿಸತಕ್ಕವಳು, ಪುತ್ರವಂತಳು, ಮದ್ಯ ಮಾಂಸ ಭಕ್ಷಿಸ ತಕ್ಕವಳು, ಮಲೀನ ಸ್ವಭಾವಿಯು ಉಗ್ರ ಸ್ವಭಾವಿಯು, ಅಯೋಗ್ಯವಾದ ಆಚರಣೆಯುಳ್ಳವಳು, ಹಿಂಸಾಚಾ ರಿಯು ಆಗುವಳು.

ಅನುರಾಧ— ಈ ನಕ್ಷತ್ರದಲ್ಲಿ ಪುಷ್ಪವತಿಯಾದ ಸ್ತ್ರೀಯಳು ಸುಖಭೋ ಗಿಯು, ಸುಂದರಳು, ಸುಶೀಲಳು, ಧನಧಾನ್ಯವಂತಳು, ಆಲಸಿಯು, ಸೋಮಾ ರಿಯು, ದರಿದ್ರ ಸ್ವಭಾವದವಳು, ಮನಃಪೂರ್ವಕವಾಗಿ ಪತಿ ಸೇವೆಯನ್ನು ಮಾಡತಕ್ಕವಳು, ಉತ್ತಮ ಗುಣಭೂಷಣಳು ಆಗುವಳು.

ಜ್ಯೇಷ್ಠ— ಈ ನಕ್ಷತ್ರದಲ್ಲಿ ಋತುವಾದ ಕನ್ಯೆಯು ಸರ್ವರಿಗೆ ದುಃಖ ವನ್ನುಂಟು ಮಾಡತಕ್ಕವಳು ಬಂಧುಗಳಲ್ಲಿ ವಿರೋಧಿಯು, ದುರಾಚಾರಿಯು, ಧನಹೀನಳು, ದುರ್ಭಾಗ್ಯವಂತಳು, ವಿಧವೆಯು, ಪತಿನಿಂದಕಳು, ಪರ ಪುರು ಷರಲ್ಲಿ ಅಪೇಕ್ಷೆಯುಳ್ಳವಳು, ಸುಖಹೀನಳು, ದರಿದ್ರನಾದ ಪತಿಯನ್ನು ಹೊಂದ ತಕ್ಕವಳು ದುಃಖಿಯು ಆಗುವಳು,

ಮೂಲ— ಈ ನಕ್ಷತ್ರದಲ್ಲಿ ರಜಸ್ವಲೆಯಾದರೆ ಅಂಗನೆಯು ಸುಗುಣ
ವಂತಳು, ಧನಧಾನ್ಯ ಪೂರ್ಣಳು, ಉತ್ತಮ ಸುಖಭೋಗಿಯು, ಸೌಭಾಗ್ಯ
ವುಳ್ಳವಳು, ಗೃಹಕೃತ್ಯದಲ್ಲಿ ಜಾಣಳು, ಪುತ್ರವತಿಯು, ಪತಿಯಲ್ಲಿ ಪ್ರೀತಿಯು
ಳ್ಳವಳು ಗುರು ಹಿರಿಯರಲ್ಲಿ ಭಕ್ತಿಯುಳ್ಳವಳು, ಸರ್ವ ಕಷ್ಟನಾಶಕಳು
ಆಗುವಳು.

ಪೂರ್ವಾಷಾಢ – ಈ ನಕ್ಷತ್ರದಲ್ಲಿ ಪುಷ್ಪವತಿಯಾದವಳು ದುಷ್ಟಳು,
ಕ್ರೂರಳು, ಪ್ರಾಣಿಹಿಂಸೆ ಮಾಡತಕ್ಕವಳು, ಪಾಪಿಷ್ಠಳು, ವ್ಯಸನಿಯು, ನಾನಾ
ರೀತಿಯಿಂದ ದುಃಖ ಹೊಂದತಕ್ಕವಳು, ದರಿದ್ರಳು, ಸಂತಾನಹೀನಳು, ವಿಧ
ವೆಯು, ಭಾಗ್ಯಹೀನಳು, ಅಮಂಗಲಕರಳು ಆಗುವಳು.

ಉತ್ತರಾಷಾಢ- ಈ ನಕ್ಷತ್ರದಲ್ಲಿ ಋತುಮತಿಯಾದರೆ ಸುಖ ಸಂಪತ್ತುಳ್ಳವಳು,
ಸಕಲ ಸೌಭಾಗ್ಯವಂತಳು, ಧನಧಾನ್ಯ ಐಶ್ವರ್ಯವಂತಳು, ಸುಖಭೋಗಿಯು,
ಪುತ್ರಪೌತ್ರರುಳ್ಳವಳು, ದೀರ್ಘವಾದ ಆಯುಷ್ಮಂತಳು, ಲಕ್ಷ್ಮೀಸಂಪನ್ನಳು,
ಸುಶೀಲಳು, ಧಾರ್ಮಿಕ ಕಾರ್ಯಗಳಲ್ಲಿ ಅಭಿರುಚಿಯುಳ್ಳವಳು, ಧರ್ಮ
ಅಧರ್ಮವನ್ನು ಅರಿತವಳು. ವಿವೇಕಿಯು, ವಿಚಾರವಂತಳು ಆಗುವಳು.

ಶ್ರವಣ— ಈ ನಕ್ಷತ್ರದಲ್ಲಿ ರಜಸ್ವಲೆಯಾದ ಸ್ತ್ರೀಯಳು ಸೌಭಾಗ್ಯವ
ತಿಯು, ಧನಧಾನ್ಯ ಸಂಪತ್ತುಗಳಿಂದ ಕೂಡಿದವಳು, ಪುತ್ರ ಪೌತ್ರರುಳ್ಳ
ವಳು, ಐಶ್ವರ್ಯವಂತಳು, ಸರ್ವಸುಖಭೋಗಿಯು ಆಯುಷ್ಮಂತಳು, ಪತಿ
ವ್ರತೆಯು, ದಾನಧರ್ಮ, ಪರೋಪಕಾರ ಮೊದಲಾದ ಸತ್ಕರ್ಮಾಸಕ್ತಳು,
ಧರ್ಮಿಷ್ಠಳು, ಬಂಧು ಜನರಲ್ಲಿ ಮನ್ನಣೆ ಹೊಂದತಕ್ಕವಳು, ಸುಶೀಲಳು
ಆಗುವಳು.

ಧನಿಷ್ಠ— ಈ ನಕ್ಷತ್ರದಲ್ಲಿ ಋತುಮತಿಯಾದ ಕನ್ಯೆಯು ಸುವಿಚಾ
ರಿಯು, ಬುದ್ಧಿವಂತಳು, ಪತಿ ಪುತ್ರರಿಂದ ಸಂತೋಷ ಹೊಂದತಕ್ಕವಳು.
ಸುಖಭೋಗಿಯು, ಧನ ಧಾನ್ಯಯುತಳು, ಗೃಹಕೃತ್ಯಗಳನ್ನು ಜಾಣತನದಿಂದ
ಮಾಡತಕ್ಕವಳು, ಹಸನ್ಮುಖಳು, ಸರ್ವರೊಡನೆ ಪ್ರೀತಿಯಿಂದ ಇರತಕ್ಕವಳು
ಧರ್ಮದ ರಹಸ್ಯವನ್ನು ಬಲ್ಲವಳು, ಸುಮಂಗಲೆಯು ಆಗುವಳು.

ಶತತಾರ— ಈ ನಕ್ಷತ್ರದಲ್ಲಿ ಪುಷ್ಪವತಿಯಾದ ಸ್ತ್ರೀಯಳು ಬಹು ಪ್ರಕಾ
ರದಿಂದ ಸುಖಭೋಗ ಹೊಂದತಕ್ಕವಳು, ಆಪ್ತೇಷ್ಟರಲ್ಲಿ ಶ್ರೇಷ್ಠಳು. ಕೀರ್ತಿ

ವಂತಳು, ದೊಡ್ಡ ಕುಟುಂಬಸ್ಥಳು. ಮಾನವಂತಳು, ಜ್ಞಾನವಂತಳು, ಸರ್ವ ಕಾರ್ಯಗಳನ್ನು ಮನಃಪೂರ್ವಕ ಮಾಡತಕ್ಕವಳು, ಗುರುಹಿರಿಯರಲ್ಲಿ ಭಕ್ತಿ ಯುಳ್ಳವಳು, ಪುರಾಣ ಪುಣ್ಯ ಕಥಾಶ್ರವಣ ಮಾಡುವದರಲ್ಲಿ ಆಸಕ್ತಿಯುಳ್ಳ ವಳು, ಸಂತೋಷ ಚಿತ್ತಳು ಆಗುವಳು.

ಪೂರ್ವಾಭಾದ್ರ— ಈ ನಕ್ಷತ್ರದಲ್ಲಿ ಋತುವಾದ ಕನ್ಯೆಯು ಅಮಂಗ ಲೆಯು, ಆಪ್ತ ಬಂಧುಗಳಲ್ಲಿ ವಿರೋಧಿಯಾಗುವಳು, ಪಾಪಾಚರಣೆಯುಳ್ಳವಳು, ಅಧರ್ಮಿಯು, ಪತಿಯನ್ನು ಗುರುಹಿರಿಯರನ್ನು ದೂಷಿಸತಕ್ಕವಳು, ಧೂರ್ತಳು ದುಷ್ಟಳು, ಕಷ್ಟಜೀವಿಯು, ಕೋಪಿಷ್ಠಳು, ಧನಹೀನಳು, ರೋಗಪೀಡಿತಳು, ದುರ್ಭಾಗ್ಯಳು, ವಿಧವೆಯಾಗುವಳು, ಕಠೋರವಾಗಿ ಮಾತಾಡತಕ್ಕವಳು ಆಗುವಳು.

ಉತ್ತರಾಭಾದ್ರ— ಈ ನಕ್ಷತ್ರದಲ್ಲಿ ಋತುವಾದ ಅಂಗನೆಯು ಐಶ್ವರ್ಯವಂತಳು, ಲಕ್ಷ್ಮೀ ಸಂಪನ್ನಳು, ಸುಶೀಲಳು, ಗಂಭೀರಳು, ಧರ್ಮಾ ಚರಣೆಯುಳ್ಳವಳು, ನಾನಾವಿಧ ಭೋಗ ಭಾಗ್ಯಗಳನ್ನು ಅನುಭವಿಸತಕ್ಕವಳು, ಆಪ್ತೇಷ್ಟರಲ್ಲಿ ಗೌರವ ಪಡೆಯತಕ್ಕವಳು, ಕೀರ್ತಿಶಾಲಿಯು, ಪುತ್ರವತಿಯು, ಸಮಸ್ತರ ಪ್ರೀತಿ ವಿಶ್ವಾಸಗಳನ್ನು ಗಳಿಸತಕ್ಕವಳು. ಪೂಜ್ಯಳು, ಪತಿವ್ರತಾ ಶಿರೋಮಣಿಯು, ದೀರ್ಘಾಯುಷಿಯು ಆಗುವಳು.

ರೇವತಿ—ಈ ನಕ್ಷತ್ರದಲ್ಲಿ ರಜಸ್ವಲೆಯಾದ ಸ್ತ್ರೀಯಳು ಸದ್ಗುಣಿಯು, ಪುತ್ರ ಪೌತ್ರರುಳ್ಳವಳು, ಸ್ಥಿರಮನಸ್ಸಿನವಳು, ವ್ರತನೇಮಾಚರಣೆಯುಳ್ಳವಳು, ಪತಿದೂಷಣೆ ಮಾಡತಕ್ಕವಳು, ಕಠೋರಳು, ದೀರ್ಘಾಯುಷಿಯು, ಧನಧಾನ್ಯ ಯುಕ್ತಳು ಆಗುವಳು.

ಅಶ್ವಿನಿ, ರೋಹಿಣಿ, ಮೃಗಶಿರ, ಪುನರ್ವಸು, ಪುಷ್ಯ, ಉತ್ತರ, ಹಸ್ತ, ಚಿತ್ತ, ಸ್ವಾತಿ, ಅನುರಾಧಾ, ಮೂಲ, ಉ. ಷಾ. ಶ್ರವಣ, ಧನಿಷ್ಠ, ಶತತಾರ, ಉಭಾ, ರೇವತಿ ಈ ನಕ್ಷತ್ರಗಳಲ್ಲಿ ಕನ್ಯೆಯು ಪ್ರಥಮ ಋತುಮತಿಯಾದರೆ ಶುಭಕರವು.

ಭರಣಿ, ಕೃತ್ತಿಕಾ, ಆರಿದ್ರ, ಆಶ್ಲೇಷ, ಮಘ, ಹುಬ್ಬ, ವಿಶಾಖ, ಜ್ಯೇಷ್ಠ, ಪೂ.ಷಾ ಪೂ.ಭಾ. ಈ ನಕ್ಷತ್ರಗಳಲ್ಲಿ ಪ್ರಥಮ ರಜಸ್ವಲೆಯಾದರೆ ಅಶುಭ

ಪ್ರದವು ಈ ದುಷ್ಟ ನಕ್ಷತ್ರಗಳಲ್ಲಿ ಪ್ರಥಮ ಪುಷ್ಪವತಿಯಾದ ಕನ್ಯೆಯು ನಕ್ಷತ್ರ ದೋಷದ ಅವಧಿ ಮುಗಿಯುವ ವರೆಗೆ ತೈಲಾಭ್ಯಂಗ ಸ್ನಾನವನ್ನು ತಾಂಬೂಲ ಚರ್ವಣವನ್ನು, ಮಂಗಲ ದ್ರವ್ಯಗಳ ಲೇಪನವನ್ನು, ನಾನಾವಿಧ ಸುಗಂಧ ಪುಷ್ಪಗಳ ಧಾರಣೆಯನ್ನು, ಪತಿಯ ಮುಖ ನೋಡುವದನ್ನು ವರ್ಜಿಸಬೇಕು. ಆದಾಗ್ಯೂ ದುಷ್ಟ ನಕ್ಷತ್ರದೋಷ ಶಾಂತಿ ಕರ್ಮಾಚರಣೆಯನ್ನು ಶಾಸ್ತ್ರೋಕ್ತವಾಗಿ ಮಾಡಿಸಿದ ನಂತರ ಮೇಲೆ ಸೂಚಿಸಿದವುಗಳನ್ನು ಮಾಡಲು ಅಡ್ಡಿಯಿಲ್ಲ. ಆದರೆ ಗರ್ಭಾದಾನವನ್ನು ಮಾತ್ರ ದುಷ್ಟನಕ್ಷತ್ರ ದೋಷದ ಅವಧಿ ಮುಗಿಯುವವರೆಗೆ ಸರ್ವಥಾ ಮಾಡಕೂಡದು.

ದುಷ್ಟ ನಕ್ಷತ್ರ ದೋಷದ ಅವಧಿ ಭರಣಿ, ಆಶ್ಲೇಷ, ಹುಬ್ಬ, ಪೂರ್ವಾಷಾಢ, ಪೂರ್ವಾಭಾದ್ರ ಈ ನಕ್ಷತ್ರಗಳಲ್ಲಿ ಋತುವಾದರೆ ೬ ತಿಂಗಳು, ಈ ನಕ್ಷತ್ರಗಳು ರವಿ, ಮಂಗಳ, ಶನಿವಾರಗಳಲ್ಲಿ ಕೂಡಿದ್ದಾದರೆ ೧ ವರ್ಷದ ವರೆಗೆ, ಕೃತ್ತಿಕ, ಆರಿದ್ರ, ಮಘ, ಜ್ಯೇಷ್ಠ ಈ ನಕ್ಷತ್ರಗಳಲ್ಲಿ ರಜಸ್ವಲೆಯಾದರೆ ೫ ತಿಂಗಳು ದೋಷವು ವಿಶಾಖ ನಕ್ಷತ್ರವೂ ಸಹ ದೋಷಕರವು.

ಗ್ರಂಥಾಂತರದಲ್ಲಿ– ಸ್ತ್ರೀಯಳು ಭರಣಿ ನಕ್ಷತ್ರದಲ್ಲಿ ಋತುವಾದರೆ ೧೦ ತಿಂಗಳು. ಕೃತ್ತಿಕ, ಆಶ್ಲೇಷ, ಜ್ಯೇಷ್ಠ ನಕ್ಷತ್ರಗಳಲ್ಲಾದರೆ ೪ ತಿಂಗಳು, ಹುಬ್ಬ, ಪೂರ್ವಾಷಾಢ, ಪೂರ್ವಾಭಾದ್ರ ನಕ್ಷತ್ರಗಳಲ್ಲಾದರೆ ೮ ತಿಂಗಳು, ಆರಿದ್ರಾ ನಕ್ಷತ್ರದಲ್ಲಾದರೆ ೬ ತಿಂಗಳು ಮಘ ನಕ್ಷತ್ರದಲ್ಲಾದರೆ ೧೨ ತಿಂಗಳು, ಪುನರ್ವಸು ನಕ್ಷತ್ರದಲ್ಲಾದರೆ ೫ ತಿಂಗಳು ಈ ಪ್ರಕಾರ ದುಷ್ಟ ನಕ್ಷತ್ರ ರಜೋದರ್ಶನ ಅವಧಿ ಇರುವದು. ಕೇವಲ ನಕ್ಷತ್ರ ದೋಷವನ್ನಷ್ಟೇ ನೋಡದೆ ಮಾಸ, ತಿಥಿ, ವಾರ, ಯೋಗ, ಕರಣ, ವೇಳೆ, ರಾಶಿ, ಲಗ್ನ, ಗ್ರಹಗಳ ಬಲಾಬಲ, ಹೋರಾ, ಉಟ್ಟ ವಸ್ತ್ರ, ಕಾಲ, ರಜೋಬಿಂದು, ವರ್ಣ, ಇತ್ಯಾದಿಗಳನ್ನು ಸಹ ನೋಡಿ ಇವು ಅಶುಭವಾಗಿದ್ದರೆ ದೋಷ ಶಾಂತಿಯನ್ನು ಮಾಡಿಸಿ ಪತಿಯ ಮುಖವನ್ನು ನೋಡಬೇಕು ಒಂದುವೇಳೆ ದೋಷ ಶಾಂತಿಯನ್ನು ಮಾಡಿಸದೆ ಪತಿಯ ಮುಖವನ್ನು ಆ ಸ್ತ್ರೀಯಳು ನೋಡಿದ್ದಾದರೆ ಪತಿಗೆ ಮಹಾ ಅರಿಷ್ಟವು ತನ್ಮೂಲಕ ದುಃಖವು, ಕಷ್ಟ ನಷ್ಟಗಳು ಧನಹಾನಿಯು, ದೇಹದಲ್ಲಿ ರೋಗಪೀಡೆಯು, ಅಪ ಮೃತ್ಯುಭಯವು.

— ಋತು ನಕ್ಷತ್ರ ಫಲವು —

ಕನ್ಯೆಯು ಶುಭ ನಕ್ಷತ್ರಗಳಲ್ಲಿ ಪ್ರಥಮ ಋತುಮತಿಯಾದರೆ— ಋತುವಾದ ದಿವಸದಿಂದ ೨-೬-೭-೧೨-೧೬ ನೆಯ ವರ್ಷಗಳಲ್ಲಿ ಅವಳ ಗಂಡನಿಗೆ ನಾನಾ ಮೂಲಕ ಲಾಭವು, ನೂತನ ಗೃಹನಿರ್ಮಾಣವು, ಕೆರೆ, ಭಾವಿ ಕಡಿಸುವಿಕೆಯು, ಭೂಮಿ, ಪಶು, ವಾಹನ ವಸ್ತ್ರಾಭರಣ ಸಂಗ್ರಹವು. ತೀರ್ಥ ಪುಣ್ಯಕ್ಷೇತ್ರ, ಪುಣ್ಯಪುರುಷರ ದರ್ಶನ ಲಾಭವು, ಮನೆಯಲ್ಲಿ ವಿವಾಹಾದಿ ಶುಭ ಶೋಭನ ಮಂಗಲ ಕಾರ್ಯ ಜರುಗುವಿಕೆಯು, ವ್ಯಾಪಾರ ಉದ್ಯೋಗಗಳಲ್ಲಿ ಅಧಿಕ ಧನಲಾಭವು, ಅಧಿಕಾರ, ಸತ್ತೆ, ಕೀರ್ತಿ, ಸ್ಫೂರ್ತಿ ಇತ್ಯಾದಿ ಶುಭಫಲಗಳುಂಟಾಗವವು.

ಕನ್ಯೆಯು ಅಶುಭ ನಕ್ಷತ್ರಗಳಲ್ಲಿ ರಜಸ್ವಲೆಯಾದರೆ ಅವಳಿಗೂ ಅವಳ ಪತಿಗೂ ಕೆಳಗಿನ ಅರಿಷ್ಟ ಫಲಗಳುಂಟಾಗುವವು.

ಋತುಮತಿಯಾದ ಸ್ತ್ರೀಯಳಿಗೆ ೨ ೪ ನೆಯ ವರ್ಷಗಳಲ್ಲಿ ಹೊಟ್ಟೆಶೂಲೆ ಗರ್ಭಪೀಡೆ, ನಾನಾರೀತಿಯ ವ್ಯಾಧಿಗಳು, ದುಃಸ್ವಪ್ನಭಯವು ಸಂತಾನನಷ್ಟವು ಮುಂದೆ ೬ ೮-೧೨-೧೬ ನೆಯ ವರ್ಷಗಳಲ್ಲಿ ರೋಗಪೀಡೆಯು ದುಃಖವು, ನಾನಾರೀತಿಚಿಂತೆಯು ಕ್ಲೇಶವು ಪುತ್ರವ್ಯಸನವು ಇತ್ಯಾದಿ ಅನಿಷ್ಟ ಫಲಗಳುಂಟಾಗುವವು.

ಋತುಮತಿಯಾದ ಸ್ತ್ರೀಯಳ ಪತಿಗೆ ೨-೪ನೆಯ ವರ್ಷಗಳಲ್ಲಿ ಧನಹಾನಿಯು ಸರಕಾರದವರಿಂದ ಉಪದ್ರವವು. ಭೂಮಿಯಿಂದಾಗಲಿ, ಸ್ತ್ರೀಯಳಿಂದಾಗಲಿ ಕಲಹವು, ವಿರೋಧವು ವ್ಯಾಪಾರ ಉದ್ಯೋಗಗಳಲ್ಲಿ ಕಷ್ಟ-ನಷ್ಟಗಳು, ವ್ರಣ, ಜಾಡ್ಯ, ಶಸ್ತ್ರ, ಅಗ್ನಿ, ವಾಹನ ಭಯವು. ಮುಂದೆ ೬-೮ ೧೨ ೧೬ ನೆಯ ವರ್ಷಗಳಲ್ಲಿ ಚೋರಭಯವು, ದುಷ್ಟಕಾರ್ಯಗಳಲ್ಲಿ ಧನವ್ಯಯ ಬಹುಚಿಂತೆ, ರೋಗಬಾಧೆ ನಾನಾರೀತಿಯ ಪೀಡೆಗಳು, ದುಃಖ ದುವ್ಯಾಸನಗಳು ಇತ್ಯಾದಿ ಅರಿಷ್ಟ ಫಲಗಳು ಜರುಗುವವು.

— ಯೋಗ ಫಲ —

ಸ್ತ್ರೀಯಳು ವಿಷ್ಕಂಭಯೋಗದಲ್ಲಿ ಪ್ರಥಮ ಋತುಮತಿಯಾದರೆ, ನಾನಾ ಪ್ರಕಾರದ ದುಃಖವು, ವ್ಯಸನವು ಭಾಗ್ಯಹೀನಳು, ಪ್ರೀತಿಯೋಗವಾದರೆ- ಅಪ

ರಿಮಿತ ಸುಖಭೋಗಿಯು,ಸಂತೋಷಚಿತ್ತಳು, ಪತಿ ಪ್ರಿಯಳು, ಸುಸ್ನೇಹ ವತಿಯು. **ಆಯುಷ್ಮಾನ್** ಯೋಗವಾದರೆ ದೀರ್ಘಾಯುಷ್ಯವುಳ್ಳವಳು, ಧನ ಧಾನ್ಯ ಸಂಪದ್ಭರಿತಳು **ಸೌಭಾಗ್ಯ**ಯೋಗವ ದರೆ– ಅಧಿಕ ಭೋಗ ಭಾಗ್ಯಗ ಳಿಂದೊಡಗೂಡಿದವಳು, ಪುತ್ರ ಪೌತ್ರರುಳ್ಳವಳು, ಐಶ್ವರ್ಯವಂತಳು **ಶೋ ಭನ**ಯೋಗವಾದರೆ– ಶುಭಕರಳು ನಿರಂತರ ಸುಮಂಗಲೆಯು, ಪತಿವ್ರತೆಯು **ಅತಿಗಂಡ**ಯೋಗವಾದರೆ–ಪಾಪಿಷ್ಠಳು, ದುರಾಚರಣೆಯುಳ್ಳವಳು, ಪಾಪ ಕೃತ್ಯ ಗಳನ್ನು ಎಸಗತಕ್ಕವಳು ವಿಧವೆಯು ದುರ್ಭಾಗ್ಯಳು ಪುತ್ರಹೀನಳು **ಸುಕರ್ಮ** ಯೋಗವಾದರೆ– ಸರ್ವಕಾಲಗಳಲ್ಲಿ ಸುಖವನ್ನು ಅನುಭವಿಸತಕ್ಕವಳು, ಶುಭ ವತಿಯು, ಸತ್ಕರ್ಮಗಳಲ್ಲಿ ಆಸಕ್ತಳು, **ಧೃತಿ**ಯೋಗವಾದರೆ– ಧೈರ್ಯಶಾ ಲಿಯು, ಸ್ಥಿರಮನಸ್ಸಿನವಳು ಶೂರಳು, ಸಂಪತ್ತುಳ್ಳವಳು. **ಶೂಲ**ಯೋಗ ವಾದರೆ ರೋಗಪೀಡಿತಳು, ಆತ್ಮಹತ್ಯೆ, ಕೆರೆ, ಬಾವಿಗಳಲ್ಲಿ ಬೀಳುವಿಕೆ ಇತ್ಯಾದಿ ದುರ್ಮರಣ ಹೊಂದತಕ್ಕವಳು. **ಗಂಡ**ಯೋಗವಾದರೆ– ಪಾಪಕರ್ಮಗಳನ್ನು ಮಾಡತಕ್ಕವಳು, ನೀಚಳು, ದುಃಖಿಯು, ದುಷ್ಟಮನಸ್ಸಿನವಳು. **ವೃದ್ಧಿ** ಯೋಗ ವಾದರೆ– ಸಂತುಷ್ಟಚಿತ್ತಳು, ಸುಖಭೋಗಿಯು, ಪುತ್ರವತಿಯು, **ಧ್ರುವ**ಯೋ ಗವಾದರೆ– ಪತಿಸೇವೆಯನ್ನು ಪ್ರೀತಿಯಿಂದಲೂ ಭಕ್ತಿಯಿಂದಲೂ ಮಾಡ ತಕ್ಕವಳು, ಶುಭಕರಳು, ಸುಮಂಗಲೆಯು ಸದಾಸುಖವಂತಳು. **ವ್ಯಾಘಾತ** ಯೋಗವಾದರೆ– ಪತಿದ್ರೋಹಿಯು, ಪತಿಘಾತಕಿಯು, ಪತಿ ದೂಷಣೆ ಮಾಡತಕ್ಕವಳು, ಘಾತಕ ಸ್ವಭಾವಿಯು, ವಂಚಕಳು, ದುರಾಚಾರಿಯು, ವಿಧ ವೆಯು, ದುಃಖಿಯು. **ಹರ್ಷಣ**ಯೋಗವಾದರೆ– ಸಂತೋಷಚಿತ್ತಳು, ಸಮಾ ಧಾನ ಮನಸ್ಸಿನವಳು, ನಾನಾವಿಧ ಭೋಗಭಾಗ್ಯವುಳ್ಳವಳು ಸುಖ ಸಂಪ ನ್ನಳು. **ವಜ್ರ**ಯೋಗವಾದರೆ–ಪುತ್ರಹೀನಳು (ಬಂಜೆಯು), ತನ್ನ ಇಚ್ಛಾ ಪ್ರಕಾರ ನಡೆಯುತಕ್ಕವಳು, ಎಲ್ಲರೊಡನೆ ಅವಿಧೇಯಳಾಗಿ (ಭಯಪಡದೆ) ವರ್ತಿಸತಕ್ಕವಳು. **ಸಿದ್ಧಿ**ಯೋಗವಾದರೆ–ಸಮಸ್ತ ಸುಖವಂತಳು, ಐಶ್ವರ್ಯ ಶಾಲಿಯು, ಪುತ್ರಪೌತ್ರರುಳ್ಳವಳು. **ವ್ಯತಿಪಾತ**ಯೋಗವಾದರೆ– ಅತ್ಯಂತ ದುಃಖಿಯು ಪತಿ ನಿಂದಕಳು, ಪತಿಯನ್ನು ತ್ಯಜಿಸತಕ್ಕವಳು ನಿರ್ಭೀತಳು, **ವರಿಯಾನ್** ಯೋಗವಾದರೆ–ನಷ್ಟಸಂತತಿಯುಳ್ಳವಳು, ಅಲ್ಪಾಯುಷ್ಯವುಳ್ಳ ವರಾದ ಮಕ್ಕಳುಳ್ಳವಳು, **ಪರಿಘ**ಯೋಗವಾದರೆ– ಆಯುಷ್ಯ ಕ್ಷೀಣವುಳ್ಳ

ವಳು, ಅಲ್ಪಜೀವಿಯು ಮಕ್ಕಳಿಲ್ಲದವಳು. ಶಿವಯೋಗವಾದರೆ— ನಿರಂತರವೂ ಪ್ರಶಾಂತವಾದ ಮನಸ್ಸುಳ್ಳವಳು, ಸಂತಾನ ವೃದ್ಧಿಯುಳ್ಳವಳು, ದೊಡ್ಡ ಕುಟುಂಬಸ್ಥಳು. ಸಿದ್ಧಯೋಗವಾದರೆ— ಸರ್ವಕಾಲದೊಳು ಅಧಿಕ ಸಂಪತ್ತಿನಿಂದ ಕೂಡಿದವಳು, ಸರ್ವಾನುಕೂಲಳು, ಅಧಿಕ ಸಂತಾನವುಳ್ಳವಳು, ಸಾಧ್ಯಯೋಗವಾದರೆ— ಧರ್ಮಿಷ್ಠಳು, ದಾನಧರ್ಮ ಪರೋಪಕಾರ ಇತ್ಯಾದಿ ಪುಣ್ಯಕಾರ್ಯಾಸಕ್ತಳು ನಾನಾಪ್ರಕಾರದ ಭೋಗಗಳನ್ನು ಅನುಭವಿಸತಕ್ಕವಳು. ಶುಭಯೋಗವಾದರೆ—ಸಂತುಷ್ಟಮನಸ್ಸಿನವಳು, ಸದ್ಗುಣಿಯು, ಸುಶೀಲಳು, ಸುಮಂಗಲೆಯು. ಶುಕ್ಲಯೋಗವಾದರೆ – ಕೀರ್ತಿವಂತಳು, ಮಂಗಲಕರಳು, ಸತ್ಕಾರ್ಯಗಳನ್ನು ಮಾಡತಕ್ಕವಳು. ಬ್ರಹ್ಮಯೋಗವಾದರೆ— ಪತಿವ್ರತೆಯು. ಐಂದ್ರಯೋಗವಾದರೆ— ಕೀರ್ತಿಶಾಲಿಯು, ಸುಶೀಲಳು, ಶುಭಕರಳು, ವೈಧೃತಿಯೋಗವಾದರೆ— ಪ್ರಾಣಘಾತಕಿಯು, ದುಷ್ಟಸ್ವಭಾವಿಯು, ಪತಿನಾಶಕಳು ಆಗುವಳು.

ಶುಭಯೋಗಗಳು – ಪ್ರೀತಿ, ಆಯುಷ್ಮಾನ್, ಸೌಭಾಗ್ಯ, ಶೋಭನ ಸುಕರ್ಮ, ಧೃತಿ, ವೃದ್ಧಿ, ಧ್ರುವ, ಹರ್ಷಣ, ಸಿದ್ಧಿ, ಶಿವ, ಸಿದ್ಧ, ಸಾಧ್ಯ, ಶುಭ, ಶುಕ್ಲ, ಬ್ರಹ್ಮಾವು ೧೬ ಯೋಗಗಳು ಶುಭವು.

ದುಷ್ಟಯೋಗಗಳು-ವಿಷ್ಕಂಬ, ಅತಿಗಂಡ, ಶೂಲ, ಗಂಡ, ವ್ಯಾಘಾತ, ವಜ್ರ, ವ್ಯತಿಪಾತ, ಪರಿಯಾನ್, ಪರೀಘ, ಐಂದ್ರ, ವೈಧೃತಿ. ಇವು ೧೧ ದುಷ್ಟಯೋಗಗಳು.

— ಕರಣ ಫಲ —

ಬವಕರಣದಲ್ಲಿ ಪ್ರಥಮ ಪುಷ್ಪವತಿಯಾದ ಅಂಗನೆಯು ಪುತ್ರಹೀನಳು, ಬಂಜೆಯು; ಅಥವಾ ವಿಧವೆಯಾಗುವಳು. ಬಾಲವಕರಣದಲ್ಲಿ ಋತುವಾದರೆ— ಸೌಭಾಗ್ಯವತಿಯು, ಪುತ್ರವಂತಳು, ನಾನಾವಿಧ ಸೌಖ್ಯ ಭೋಗಗಳನ್ನು ಅನುಭವಿಸತಕ್ಕವಳು. ಕೌಲವ ಕರಣದಲ್ಲಿ ಋತುವಾದರೆ— ಸತ್ಕಾರ್ಯಗಳಲ್ಲಿ ಮನಸ್ಸುಳ್ಳವಳು, ರೂಪ, ರೇಖೆ, ಲಾವಣ್ಯಗಳಿಂದ ಯುಕ್ತಳಾದ ಸೌಂದರ್ಯವುಳ್ಳವಳು, ಧರ್ಮಿಷ್ಠಳು, ತೈತುಲ ಕರಣದಲ್ಲಾದರೆ— ಮೃದುವಾಗಿ ಮಾತಾಡತಕ್ಕವಳು, ದಯಾದಾಕ್ಷಿಣ್ಯವುಳ್ಳವಳು, ಬುದ್ಧಿವಂತಳು ಸುವಿಚಾರಿಯು. ಗರಜ ಕರಣದಲ್ಲಾದರೆ— ಶೀಘ್ರವಾಗಿ ವೈಧವ್ಯವನ್ನು ಹೊಂದತಕ್ಕವಳು.

ವಂಶವನ್ನು ನಾಶಮಾಡತಕ್ಕವಳು. ವಣಜ ಕರಣದಲ್ಲಾದರೆ— ಅಲ್ಪಾಯುಷಿಗಳಾದ ಪುತ್ರರುಳ್ಳವಳು, ಭದ್ರಕರಣದಲ್ಲಾದರೆ— ರೋಗಪೀಡಿತಳು, ದರಿದ್ರಳು, ಧನಹೀನಳು, ಕಷ್ಟಜೀವಿಯು. ಶಕುನಿ ಕರಣದಲ್ಲಾದರೆ— ಕಾಮಾತುರಳು, ಪತಿಗೆ ಮರಣ ಭಯಕಾರಕಳು, ಕುಲನಾಶಕಳು. ಚತುಷ್ಪಾದ ಕರಣದಲ್ಲಾದರೆ— ಸುಖಭೋಗರಹಿತಳು, ದುಃಖಿಯು, ಅಸಂತುಷ್ಟಿಯುಳ್ಳವಳು, ಶೀಘ್ರದಲ್ಲಿಯೇ ವೈಧವ್ಯವನ್ನು ಹೊಂದತಕ್ಕವಳು, ನಾಗವಾನ್ ಕರಣದಲ್ಲಾದರೆ— ಸರ್ವರೊಡನೆ ವಿರೋಧಿಯು ಕಲಹವತಿಯು, ದೀರ್ಘಾಯುಷಿಯು ಪುತ್ರವತಿಯು. ಕಿಂಸ್ತುಘ್ನಕರಣದಲ್ಲಾದರೆ – ನಾನಾವಿಧ ಕಷ್ಟವನ್ನು ಅನುಭವಿಸತಕ್ಕವಳು ದರಿದ್ರಳು, ಜಾರಿಣಿಯು, ವಿಧವೆಯು ಆಗುವಳು.

ಹೋರಾಫಲ

ಕನ್ಯೆಯು ರವಿ ಹೋರೆಯಲ್ಲಿ ಪ್ರಥಮ ರಜಸ್ವಲೆಯಾದರೆ ರೋಗಪೀಡಿತಳು, ವ್ಯಾಧಿಯಿಂದ ಬಳಲತಕ್ಕವಳು, ಚಂದ್ರಹೋರೆಯಲ್ಲಾದರೆ— ಪತಿವ್ರತೆಯು ಸದಾಚಾರಸಂಪನ್ನಳು, ಮಂಗಳಹೋರೆಯಲ್ಲಾದರೆ—ದರಿದ್ರಳು, ಕಷ್ಟಜೀವಿತಳು, ದುರ್ಭಾಗ್ಯವುಳ್ಳವಳು, ಕಡುಬಡವಳು, ಬುಧಹೋರೆಯಾದರೆ— ಪುತ್ರವತಿಯು, ವಂಶೋದ್ಧಾರಕಳು, ಗುರುಹೋರೆಯಾದರೆ— ಸರ್ವಾನುಕೂಲಳು, ಧನಧಾನ್ಯ ಸುಖಿಸಮೃದ್ಧಿಯುಳ್ಳವಳು, ಐಶ್ವರ್ಯವಂತಳು, ಶುಕ್ರ ಹೋರೆಯಾದರೆ— ಸೌಭಾಗ್ಯವತಿಯು, ಸುಮಂಗಲೆಯು, ಸುಖಭೋಗಿಯು, ಶನಿಹೋರೆಯಾದರೆ— ಸರ್ವನಾಶಕಳು ದುಃಖಿಯು ಪತಿದೂಷಕಳು, ರಾಹು— ಅಥವಾ ಕೇತು ಹೋರೆಯಲ್ಲಿ ಋತುಮತಿಯಾದರೆ ಅರಿಷ್ಟವು.

ಪ್ರತಿ ದಿನಸ ತಾಸಿಗೆ ಒಂದೊಂದರಂತೆ ೧ ಹೋರೆ ಇರುವದು. ರವಿವಾರ ಸೂರ್ಯೋದಯಕ್ಕೆ ರವಿ ಹೋರೆಯೂ, ಸೋಮವಾರ ಸೂರ್ಯೋದಯಕ್ಕೆ ಚಂದ್ರಹೋರೆಯೂ, ಮಂಗಳವಾರ ಸೂರ್ಯೋದಯಕ್ಕೆ ಮಂಗಳ ಹೋರೆಯೂ ಬುಧವಾರ ಸೂರ್ಯೋದಯಕ್ಕೆ ಬುಧ ಹೋರೆಯೂ, ಗುರ ವಾರ ಸೂರ್ಯೋದಯಕ್ಕೆ ಗುರು ಹೋರೆಯೂ, ಶುಕ್ರವಾರ ಸೂರ್ಯೋದಕ್ಕೆ ಶುಕ್ರ ಹೋರೆಯೂ, ಶನಿವಾರ ಸೂರ್ಯೋದಯಕ್ಕೆ ಶನಿ ಹೋರೆಯೂ ಇರುವವು. ಮುಂದೆ ರವಿ, ಶುಕ್ರ, ಬುಧ, ಚಂದ್ರ, ಶನಿ, ಗುರು, ಮಂಗಳ ಈ ಪ್ರಕಾರ

ಕ್ರಮವಾಗಿ ಒಂದೊಂದು ತಾಸಿಗೆ ಒಂದೊಂದು ಹೋರೆ ಬರುವವು ಮತ್ತು ಪ್ರತಿ ದಿವಸ ಮಧ್ಯಾಹ್ನ ೧೨ ಗಂಟೆಯ ನಂತರ ೧೪ ಮಿನಿಟು ರಾತ್ರಿ ೧೨ ಗಂಟೆಯ ನಂತರ ೧೫ ಮಿನಿಟು ರಾಹುಕೇತುಗಳ ಕಾರಸ್ಥಾನವಿರುವದರಿಂದ ಆ ವೇಳೆಯಲ್ಲಿ ಪ್ರಥಮ ರಜಸ್ವಲೆಯಾದರೆ ಅನಿಷ್ಟವು.

— ರಾಶಿ ಫಲ —

ಸ್ತ್ರೀಯಳು ಮೇಷರಾಶಿಯಲ್ಲಿ ಪ್ರಥಮ ಋತುಮತಿಯಾದರೆ ಜಾರಿಣಿಯಾಗುವಳು. ವೃಷಭರಾಶಿಯಲ್ಲಾದರೆ-ಸುಖಭೋಗವುಳ್ಳವಳು. ಮಿಥುನ ರಾಶಿಯಲ್ಲಾದರೆ-ಧನವಂತಳು, ಕರ್ಕರಾಶಿಯಲ್ಲಾದರೆ-ದುಃಖಿತಳು, ಸಿಂಹ ರಾಶಿಯಲ್ಲಾದರೆ-ಪುತ್ರವತಿಯು, ಕನ್ಯಾರಾಶಿಯಲ್ಲಾದರೆ—ಅಭಿಮಾನಿಯು. ಮಾನವಂತಳು, ತುಲಾರಾಶಿಯಲ್ಲಾದರೆ– ಸೂಕ್ಷ್ಮಬುದ್ಧಿಯುಳ್ಳವಳು, ವಿಚಾರ ಶೀಲಳು, ವೃಶ್ಚಿಕರಾಶಿಯಲ್ಲಾದರೆ— ಅಮಂಗಲೆಯು, ಪಾಪಿಷ್ಠಳು, ಜಾರಿಣಿಯು, ಧನಸ್ಸುರಾಶಿಯಲ್ಲಾದರೆ-ಪತಿವ್ರತೆಯು, ಸದಾಚಾರ ಸಂಪನ್ನಳು, ಮಕರರಾಶಿಯಲ್ಲಾದರೆ - ಕಷ್ಟಜೀವಿಯು, ಧನಹೀನಳು, ಕೃಶವಾದ ಶರೀರವುಳ್ಳವಳು, ಕುಂಭರಾಶಿಯಲ್ಲಾದರೆ—ಧನವಂತಳು, ಮೀನರಾಶಿಯಲ್ಲಾದರೆ—ಚಪಲಳು, ಮಾತಾಡುವದರಲ್ಲಿ ಚತುರಳು ಬುದ್ಧಿವಂತಳು ಆಗುವಳು.

— ಲಗ್ನಫಲ —

ಶ್ಲೋಕ :–ಮೇಷೇತು ವ್ಯಭಿಚಾರಿಸ್ಯಾ ದ್ವೃಷಭೇ ಸೌಖ್ಯವರ್ಧನಂ ।
ಮಿಥುನೇ ಸ್ಯಾತ್ಪುತ್ರವತೀ ಕರ್ಕಟೇ ಚಾತಿ ಜಾರಿಣೀ ॥
ಸಿಂಹೇ ಪುತ್ರವತೀ ನಾರೀ ಕನ್ಯಾಯಾಂ ಶ್ರೀಮತೀ ಭವೇತ್ ॥
ಭಾಗ್ಯಯುಕ್ತಾತುಲಾಯಾಂಚ ವೃಶ್ಚಿಕೇ ವ್ಯಭಿಚಾರಿಣೀ
ದುಶ್ಚಾರೀ ಧನು ಪೂರ್ವೇಸ್ಯಾ ದಪರೇತು ಪತಿವ್ರತಾ ।
ಮಕರೇ ಮಾನಹೀನಸ್ಯಾತ್ಕುಂಭೇ ಧನವತೀ ಭವೇತ್ ।
ಮೀನೇ ಪುತ್ರವತೀ ಚೈವ ಪ್ರಥಮಾರ್ತಾ ವಿದಂ ಫಲಂ ॥

ಕನ್ಯೆಯು ಮೇಷಲಗ್ನದಲ್ಲಿ ಪ್ರಥಮ ಪುಷ್ಪವತಿಯಾದರೆ– ದರಿದ್ರಳು, ವ್ಯಭಿಚಾರವನ್ನಾಶ್ರಯಿಸುವವಳು, ವೃಷಭ ಲಗ್ನವಾದರೆ– ಅಪರಿಮಿತವಾದ ಸೌಖ್ಯಾಭಿವೃದ್ಧಿಯನ್ನು ಹೊಂದತಕ್ಕವಳು, ಐಶ್ವರ್ಯವಂತಳು, ಮಿಥುನಲಗ್ನ

ವಾದರೆ– ಪುತ್ರ ಪೌತ್ರರುಳ್ಳವಳು, ಕರ್ಕಲಗ್ನವಾದರೆ– ಘಾತುಕ ಸ್ವಭಾವದವಳು, ಜಾರತ್ವ ಸಂಬಂಧವುಳ್ಳವಳು. ಸಿಂಹಲಗ್ನವಾದರೆ – ಸದ್ಗುಣವಂತಳು, ಪುತ್ರವತಿಯು, ಕನ್ಯಾಲಗ್ನವಾದರೆ-ಪತಿಪ್ರಿಯಳು, ನಾನಾವಿಧ ಭೋಗಭಾಗ್ಯವುಳ್ಳವಳು, ಸಂಪದಭಿವೃದ್ಧಿಯುಳ್ಳವಳು, ತುಲಾಲಗ್ನವಾದರೆ-ಭಾಗ್ಯವಂತಳು, ಮಂದ ಬುದ್ಧಿಯುಳ್ಳವಳು, ವೃಶ್ಚಿಕ ಲಗ್ನವಾದರೆ-ಅಮಂಗಲೆಯು, ಪಾಪಿಷ್ಠಳು ಹೃದ್ರೋಗಿಯು ವ್ಯಭಿಚಾರವಂತಳು, ಧನಸ್ಸು ಲಗ್ನವಾದರೆ-ಐಶ್ವರ್ಯವಂತಳು, ಪತಿಭಕ್ತಿ ಪಾರಾಯಣಳು, ಮಕರ ಲಗ್ನವಾದರೆ-ಕಠಿಣ ಹೃದಯಿಯು, ಅಭಿಮಾನರಹಿತಳು, ಕುಂಭಲಗ್ನವಾದರೆ– ಧನಧಾನ್ಯ ಸಂಪತ್ ಸಮೃದ್ಧಿಯುಳ್ಳವಳು, ಉಭಯ ವಂಶೋದ್ಧಾರಕಳು, ಮೀನ ಲಗ್ನವಾದರೆ– ಸದ್ಗುಣೆಯು ಸುಶೀಲಳು, ಪುತ್ರರಿಂದ ಸುಖ ಪಡೆಯತಕ್ಕವಳು ಆಗುವಳು.

ಸಮಯ ಫಲ

ಶ್ಲೋಕ :-ಪುಷ್ಪವತ್ಯಾಶ್ಯುಭಂ ಪ್ರಾತಃ ಪೂರ್ವಾಹ್ಣೇ ತೀರ್ಥಗಾಮಿನೀ |
ಮಧ್ಯಾಹ್ನೇ ಸುತಸೌಭಾಗ್ಯಾ ಚಾ ಪರಾಹ್ಣೇತ, ಜಾರಿಣೀ ||
ಸಾಯಾಹ್ನೇ ಬಹುಪತ್ನಿ ಸ್ಯಾತ್ಸಂಧ್ಯಯೋರ್ವೇಶ್ಯತಾಂ ವ್ರಜೇತ್
ಪೂರ್ವರಾತ್ರೇಚಿ ರಾಯುಷ್ಯಾನ್ನಿ ಶೀಥೇ ವಿಧವಾ ಭವೇತ್ |
ನಿಶಾಂತ್ಯೇ ಸುಖಹೀನಸ್ಯಾದ್ದುರ್ಭಗಾ ಸರ್ವಸಂಧಿಸು ||

ಸ್ತ್ರೀಯಳು ಪ್ರಾತಃಕಾಲದಲ್ಲಿ ಪ್ರಥಮ ಋತುಮತಿಯಾದರೆ ನಿರಂತರ ಮಂಗಲಕರಳು ಸೌಭಾಗ್ಯವತಿಯು, ಪೂರ್ವಾಹ್ಣ ಸಮಯದಲ್ಲಾದರೆ– ಪುತ್ರವತಿಯು ಪುಣ್ಯಕ್ಷೇತ್ರ ದರ್ಶನಾಪೇಕ್ಷಿಯಾಗುವಳು. ಮಧ್ಯಾಹ್ನ ಸಮಯದಲ್ಲಾದರೆ– ಸಕಲರಿಗೂ, ಶುಭಕರಳು, ಭಾಗ್ಯವಂತಳು, ಪುತ್ರವಂತಳು, ಅಪರಾಹ್ಣ ಸಮಯದಲ್ಲಾದರೆ– ತನ್ನ ಇಚ್ಛೆಯಂತೆ ವರ್ತಿಸತಕ್ಕವಳು, ವ್ಯಭಿಚಾರಮಾರ್ಗಾಸಕ್ತಳು. ಸಾಯಂಕಾಲವಾದರೆ– ಜಾರಿಣಿಯು ಹಗಲು ರಾತ್ರಿ, ಈ ಎರಡೂ ಸಂಧಿಕಾಲಗಳಲ್ಲಾದರೆ– ದುರಾಚಾರಿಯು, ದುರ್ಭಾಗ್ಯವಂತಳು, ವೇಶ್ಯಾವೃತ್ತಿ ಹೊಂದತಕ್ಕವಳು, ನಾನಾವಿಧ ಕಷ್ಟಗಳನ್ನು ಅನುಭವಿಸತಕ್ಕವಳು, ಪೂರ್ವ ರಾತ್ರಿಯಲ್ಲಿ ರಜೋದರ್ಶನವಾದರೆ– ಆಯುಷ್ಯಾಭಿವೃದ್ಧಿಯುಳ್ಳವಳು, ಮಧ್ಯರಾತ್ರಿಯ ಸಮಯದಲ್ಲಾದರೆ– ಶೀಘ್ರವಾಗಿ ವೈಧವ್ಯ

ವನ್ನು ಹೊಂದತಕ್ಕವಳು ಆಗುವಳು. ಉತ್ತರ ರಾಶಿಯಲ್ಲಾದರೆ- ನಿರಂತರ ಸೌಖ್ಯರಹಿತಳು, ಕಷ್ಟಜೀವಿಯು ಆಗುವಳು.

ಹಗಲಿನ ೩೦ ಗಳಿಗೆ (೧೨ ತಾಸು)ಗಳನ್ನು ಮೂರು ಭಾಗ ಮಾಡಬೇಕು ೧ನೆಯ ಭಾಗವು ಪೂರ್ವಾಹ್ಣವು (ರವಿ ಉದಯದಿಂದ ೪ ತಾಸಿನವರೆಗೆ)೨ನೆಯ ಭಾಗವು ಮಧ್ಯಾಹ್ನವು (ಉದಯ ೪ ತಾಸಿನಿಂದ ೮ ತಾಸಿನವರೆಗೆ) ೩ ನೆಯ ಭಾಗವು ಅಪರಾಹ್ಣವು (ಮಧ್ಯಾಹ್ನ ೮ ತಾಸಿನಿಂದ ರವಿ ಅಸ್ತನಾಗುವವರೆಗೆ) ಹಗಲು ಮುಗಿದು ರಾತ್ರಿ ಬರುವ ವೇಳೆಯು ಸಾಯಂಸಂಧಿ ವೇಳೆಯು. ರಾತ್ರಿ ಮುಗಿದು ಹಗಲು ಆರಂಭವಾಗುವ ವೇಳೆಯು ಪ್ರಾತಃ ಸಂಧಿವೇಳೆಯು. ಈ ಪ್ರಕಾರ ಎರಡು ಸಂಧಿಕಾಲಗಳು ಸೂರ್ಯಾಸ್ತಕಾಲದಿಂದ ೪ ತಾಸಿನವರೆಗೆ ರಾತ್ರಿಯ ಪೂರ್ವಭಾಗವು ೪ ತಾಸು ರಾತ್ರಿಯಿಂದ ೮ ತಾಸು ರಾತ್ರಿಯವರೆಗೆ ಮಧ್ಯರಾತ್ರಿಯು. ರಾತ್ರಿ ೮ ತಾಸುಗಳಿಂದ ೧೧ ತಾಸುಗಳವರೆಗೆ ಉತ್ತರ ರಾತ್ರಿಯು ಸೂರ್ಯೋದಯದ ಮೊದಲು ೨ ಗಳಿಗೆ (ನಸುಕಿನಲ್ಲಿ) ಪ್ರಾತಃಕಾಲವು. ಈ ಪ್ರಕಾರ ಸಮಯಭೇದವನ್ನು ತಿಳಿದುಕೊಂಡು ಶುಭಾಶುಭ ಫಲಗಳನ್ನು ನಿಶ್ಚಯಿಸಬೇಕು. ಸೂರ್ಯ ಚಂದ್ರ ಗ್ರಹಣಗಳು, ಸಿಡಿಲು ಬೀಳುವದು, ಭೂಕಂಪ, ಜ್ವಾಲಾಮುಖಿ ಮೊದಲಾದವುಗಳು ಉಂಟಾಗತಕ್ಕ ಉತ್ಪಾತ ಕಾಲಗಳು ಸಹ ಅನಿಷ್ಟಕರವೆಂದು ತಿಳಿಯಬೇಕು.

— ಸ್ಥಾನಫಲ —

ಶ್ಲೋಕ :-ಗ್ರಾಮ ಬಾಹ್ಯೇ ಪರ ಗ್ರಾಮೇ ಸಾಸ್ತ್ರೀ ಸ್ಯಾದ್ವ್ಯಭಿಚಾರಿಣೀ ।
ಪತಿವ್ರತಾ ಪಶುಸ್ಥಾನೇ ಸುಜೀವಾಗೃಹ ಮಧ್ಯಮೇ ॥
ಗ್ರಾಮಮಧ್ಯೇ ಸ ವೃದ್ಧಿಸ್ಯಾದ್ವಿಧವಾಸ್ಯಾದ್ದಿಗಂಬರಾ ।
ಅನ್ಯಸ್ಯಗೇಹೇದುಶ್ಶೀಲಾ ದೀರ್ಘಾಯುರ್ಜಲ ಸನ್ನಿಧೌ ।
ವನಮಧ್ಯೇತು ಸೌಭಾಗ್ಯಂ ಧನ ಧಾನ್ಯ ಸಮನ್ವಿತಾ ॥

ಕನ್ಯೆಯು ವಾಸಮಾಡುವಂಥ ಗ್ರಾಮದ ಹೊರಗಿನ ಪ್ರದೇಶದಲ್ಲಾಗಲಿ, ಪರ ಊರಲ್ಲಾಗಲಿ, ಎರಡನೆಯವರ ಮನೆಯಲ್ಲಾಗಲಿ, ಪ್ರಥಮ ರಜೋದರ್ಶನವಾದರೆ ದುರಾಚಾರಿಣಿಯು, ದುರ್ಮಾರ್ಗಾವಲಂಬಿಯು, ಜಾರಿಣಿಯು

ಆಕಳು, ಎತ್ತುಗಳನ್ನು ಕಟ್ಟತಕ್ಕ ದೊಡ್ಡಿ (ದನದ ಮನೆ) ಯಲ್ಲಿ ಪುಷ್ಪವತಿ ಯಾದರೆ— ಪತಿವ್ರತೆಯು, ಧರ್ಮಾಚರಣೆಯುಳ್ಳವಳು, ಪುತ್ರವತಿಯು, ವಾಸಿ ಸತಕ್ಕ ಸ್ವಂತ ಮನೆಯಲ್ಲಿ ಋತುವಾದರೆ— ಸಮೀಚೀನವಾದ ಸುಖ ಜೀವನ ವುಳ್ಳವಳು, ಭೋಗವಂತಳು, ಗ್ರಾಮದ ಮಧ್ಯದಲ್ಲಿ ಋತುವಾದರೆ— ಸುಖ ಭೋಗ ಸಮೃದ್ಧಿಯುಳ್ಳವಳು. ದಿಗಂಬರ (ಬತ್ತಲೆ) ಯಾಗಿದ್ದಾಗ ಋತು ವಾದರೆ-ಶೀಘ್ರ ಕಾಲದಲ್ಲಿ ವಿಧವೆಯಾಗುವಳು. ಎರಡನೆಯವರ ಮನೆಯಲ್ಲಿರು ವಾಗ ಋತುವಾದರೆ- ಕ್ರೂರ ಸ್ವಭಾವಿಯು ದುಷ್ಟ ಗುಣದವಳು, ನದಿ, ಹಳ್ಳ, ಕೆರೆ, ಬಾವಿ, ಹೊಂಡ, ಕಾಲುವೆ ಇತ್ಯಾದಿ ಜಲಾಶಯಗಳ ಸಮೀಪದಲ್ಲಿರು ವಾಗ ಋತುವಾದರೆ— ದೀರ್ಘಾಯುಷ್ಯವಂತಳು. ಅರಣ್ಯ ಮಧ್ಯದಲ್ಲಿ ಋತು ವಾದರೆ— ನಾನಾಪ್ರಕಾರದ ಭೋಗ ಭಾಗ್ಯಗಳು, ಐಶ್ವರ್ಯಾಭಿವೃದ್ಧಿಯು, ಮತ್ತು ಅತ್ಯಂತ ಸುಖಭೋಗಿಯು ಮನೆಯ ಹಿತ್ತಲದಲ್ಲಿ ಋತುವಾದರೆ— ಸಂತಾನವೃದ್ಧಿಯು. ಬಚ್ಚಲದಲ್ಲಿ ಸ್ನಾನ ಮಾಡುತ್ತಿರುವಾಗ ಋತುವಾದರೆ- ವಿಧವೆಯು. ತಂದೆ, ಗಂಡ, ಗುರುಗಳು, ಪೂಜ್ಯರು, ತನ್ನ ಅಪ್ತೇಷ್ಟರ ಮನೆ ಯಲ್ಲಿಯೂ, ಮಠ, ದೇವಾಲಯ, ಪುಣ್ಯ ತೀರ್ಥಕ್ಷೇತ್ರಗಳಲ್ಲಿಯೂ ಋತು ವಾದರೆ ಶುಭಕರವು. ನೀಚಸ್ಥಳ, ಸ್ಮಶಾನ, ಕುಲಹೀನರ ಮನೆ ಇವು ದೋಷಕರ ವಾದವುಗಳು.

ವಸ್ತ್ರ ಫಲವು

ಸುಭಗಾ ಶ್ವೇತ ವಸ್ತ್ರ ಸ್ಯಾದ್ದೃಢ ವಸ್ತ್ರಾ ಪತಿವ್ರತಾ ||
ಕ್ಷೌಮವಸ್ತ್ರಾ ಕ್ಷಿತೀಸ್ಯಾ ಸ್ಯಾನ್ನವವಸ್ತ್ರಾ ಶುಭಾನ್ವಿತಾ ||
ದುರ್ಭಗಾ ಜೀರ್ಣ ವಸ್ತ್ರ ಸ್ಯಾ ದ್ರೋಗಿಣೀ ರಕ್ತಧಾರಿಣೀ |
ನೀಲಾಂಬ ಧರಾನಾರೀ ವಿಧವಾ ಪುಷ್ಪಿಣೀಭವೇತ್ |
ಮಲಿನಾಂಬರ ಸಂವೀತಾ ದರಿದ್ರಾಸ್ಯಾದ್ರಜಸ್ವಲಾ ||
ದೃಢವಸ್ತ್ರ ಫಲಂ ಸಮ್ಯಕ್ಕಥಿತಂ ಮುನಿ ಪುಂಗವೈಃ ||

ಕನ್ಯೆಯು ಪ್ರಥಮ ರಜೋದರ್ಶನ ಸಮಯದಲ್ಲಿ ರೇಶಿಮೆ ಬಟ್ಟೆ (ಪೀತಾಂಬರ) ಧರಿಸಿದ್ದರೆ— ರಾಣಿಯಾಗುವಳು. ಹೊಸ ಬಟ್ಟೆ ಧರಿಸಿದ್ದರೆ— ಅನೇಕ ಶುಭ ಸಂಲಗ್ನಗಳು, ಹರಿಯದ ಗಟ್ಟಿಯಾದ ಬಟ್ಟೆಯನ್ನು ಧರಿಸಿದ್ದರೆ—

ನಿರಂತರ ಪತಿ ಸೇವಾ ಸಕ್ತಳು, ಶಿಥಿಲವಾದ (ಹರಿದ) ಶೀರೆಯಾಗಿದ್ದರೆ– ದುರ್ಭಾಗ್ಯವಂತಳು. ಮಲಿನವಾದ ಹೊಲಸು ಸೀರೆಯಾಗಿದ್ದರೆ– ರೋಗ ಪೀಡಿತಳು. ಸ್ವಚ್ಛವಾದ, ಒಗೆದ ಒಟ್ಟೆಯಾಗಿದ್ದರೆ ಸೌಭಾಗ್ಯವು. ಬಿಳಿಯ ಬಣ್ಣದ ಸೀರೆ (ಬಟ್ಟೆ) ಯನ್ನು ಧರಿಸಿದ್ದರೆ– ಸೌಭಾಗ್ಯವತಿಯು, ಸಕಲರಿಗೆ ಶುಭಕರಳು. ಕೆಂಪು ಬಣ್ಣದ ಸೀರೆ ಧರಿಸಿದ್ದರೆ– ರೋಗಪೀಡಿತಳು. ನೀಲಿ ಬಣ್ಣದ ಸೀರೆ ಉಟ್ಟಿದ್ದರೆ– ವೈಧವ್ಯವನ್ನು ಹೊಂದತಕ್ಕವಳು. ಹಳದಿ ಬಣ್ಣದ ಸೀರೆ ಉಟ್ಟಿದ್ದರೆ– ಸುಖಭೋಗಿಯು. ಕಪ್ಪು ಬಣ್ಣದ ಸೀರೆ ಉಟ್ಟಿದ್ದರೆ– ಮೃತ್ಯು ಭಯವು. ಹಲವು ಬಣ್ಣ ಕೂಡಿದ ಸೀರೆ ಉಟ್ಟುಕೊಂಡಿದ್ದರೆ ಪತಿ ಪ್ರಿಯಳು ಆಗುವಳು. (ಉಟ್ಟುಕೊಂಡದ್ದು ಸೀರೆ ಆಗಿರದೆ ಲಂಗ, ಅಂಗಿ, ಆಗಿದ್ದರೂ ಸಹ ಆಯಾ ಬಣ್ಣದ ಫಲವೇ ಆಗುವದು)

— ರಜೋಬಿಂದು ಫಲ —

ಶ್ಲೋಕ :– ಪ್ರಾಪ್ನೋತಿ ಬಿಂದು ನೈಕೇನ ಸೌಭಾಗ್ಯಂಚ ದ್ವಿಬಿಂದು ನಾ ।
ರೋಗ ಸ್ತ್ರೀ ಬಿಂದು ನಾ ಭೋಗೋ ದಾರಿದ್ರ್ಯಂಬಹು ಬಿಂದುನಾ ॥

ಪ್ರಥಮ ಪುಷ್ಪವತಿಯಾದ ನಾರಿಗೆ ರಜಸ್ಸು ೧ ಬಿಂದುವಾಗಿದ್ದರೆ-ನಾನಾ ವಿಧ ಭೋಗಗಳನ್ನು ಅನುಭವಿಸುವವಳು, ಸೌಭಾಗ್ಯವಂತಳು, ೨ ಬಿಂದುಗಳಾಗಿದ್ದರೆ– ಅನೇಕ ವ್ಯಾಧಿ ಪೀಡಿತಳು, ದುಃಖಿಯು ೩ ಬಿಂದುಗಳಾಗಿದ್ದರೆ- ವಿಶೇಷ ಭೋಗ ಪ್ರಾಪ್ತಿಯು ೪ ಬಿಂದುಗಳಾಗಿದ್ದರೆ– ಬಹು ಪ್ರಕಾರದ ದುಃಖಾನುಭವವು. ದರಿದ್ರತ್ವವು ಈ ಪ್ರಕಾರ ಫಲ ಹೊಂದುವಳು.

ರಜೋಬಿಂದುವಿನ ವರ್ಣಫಲ

ಪ್ರಥಮ ಋತುಮತಿಯಾದ ಸ್ತ್ರೀಯಳು ರಜಸ್ಸಿನ ರಕ್ತವು ಸ್ವಲ್ಪ ಕೆಂಪು ಇದ್ದರೆ–ಜಾರಿಣಿಯು ಬಹಳ ಕೆಂಪಾಗಿದ್ದರೆ ಪುತ್ರವತಿಯು, ಬಿಳಿದಾಗಿದ್ದರೆ– ಬಂಜೆಯಾಗುವಳು. (ಬಹುಶಃ ಒಂದು ಮಗುವನ್ನು ಮಾತ್ರ ಹಡೆಯುವಳು) ಹಳದಿ ಬಣ್ಣವಾಗಿದ್ದರೆ–ದುರಾಚಾರಿಣಿಯು, ಗುಲಗಂಜಿಯ ಬಣ್ಣವಾಗಿದ್ದರೆ- ಸೌಭಾಗ್ಯವತಿಯು ಚಂದ್ರನ ಬಣ್ಣವಾಗಿದ್ದರೆ– ಸ್ತ್ರೀ ಸಂತಾನವುಳ್ಳವಳು. ಕಪ್ಪು ಬಣ್ಣದ್ದಾಗಿದ್ದರೆ– ರೋಗಿಷ್ಟಳು, ಅಲ್ಪಾಯುಷಿಗಳಾದ ಮಕ್ಕಳುಳ್ಳವಳು, ಗರ್ಭಸ್ರಾವ, ನಷ್ಟ ಸಂತಾನವುಳ್ಳವಳು, ಜಿಡ್ಡಾಗಿದ್ದರೆ- ಬಂಜೆಯು ಆಗುವಳು.

ಮಕ್ಕಳ ಫಲ ವಿಚಾರ

ಶ್ರವಣ, ಧನಿಷ್ಠ, ಮೂಲಾ ನಕ್ಷತ್ರಗಳಲ್ಲಿ ಪ್ರಥಮ ರಜ ಸ್ವಲೆಯಾದರೆ ಆ ಸ್ತ್ರೀಯಳಿಗೆ ೫ ಮಕ್ಕಳು, ಮೃಗಶಿರ, ಉತ್ತರ, ಉತ್ತರಾಷಾಢ, ಉತ್ತರಾಭಾದ್ರ, ಹಸ್ತ, ಚಿತ್ತ, ಶತತಾರ ಈ ನಕ್ಷತ್ರಗಳಲ್ಲಿ ಪುಷ್ಪವತಿಯಾದ ಸ್ತ್ರೀಯಳಿಗೆ ೧೦ ಜನ ಮಕ್ಕಳು ವಿಶಾಖ, ಸ್ವಾತಿ, ಅಶ್ವಿನಿ, ಅನುರಾಧ ನಕ್ಷತ್ರಗಳಲ್ಲಿ ಋತುಮತಿಯಾದರೆ ೮ಜನ ಮಕ್ಕಳು, ರೋಹಿಣಿ ನಕ್ಷತ್ರದಲ್ಲಿ ಋತುವಾದರೆ ೭ ಜನ ಪುತ್ರರು ರೇವತಿಯಲ್ಲಿ ಋತುವಾದವಳಿಗೆ ೯ಜನ ಮಕ್ಕಳು. ಇದು ಕೇವಲ ನಕ್ಷತ್ರ ಫಲವಾಯಿತು. ಇನ್ನು ಗ್ರಹಗಳ ಬಲಾಬಲದಿಂದ ಈ ಸಂಖ್ಯೆಯಲ್ಲಿ ಹೆಚ್ಚು ಕಡಿಮೆಯೂ ಆಗುವದುಂಟು.

ಋತು ನಕ್ಷತ್ರಗಳಲ್ಲಿ ಇರುವ ಗ್ರಹಗಳ ಫಲ

ಶ್ಲೋಕ :–ಪ್ರಥಮಾರ್ತವ ನಕ್ಷತ್ರೇ ಸಮೂಹೀಜೇಮೃತ ಪ್ರಜಾ ।
ಜ್ಞಶುಕ್ರ ಸಹಿತೇ ವಂಧ್ಯಾಸಗುರೌ ಸ್ಯಾತ್ತಪಸ್ವಿನೀ॥
ಸಾದಿತ್ಯೇತು ಪತಿಘ್ನೀಸ್ಯಾ ದ್ರಾಹುಯುಕ್ತಕೇತು ಜಾರಿಣೀ ।
ಶನೌತಿಷ್ಠತಿ ಚೇದ್ದಾಸೀ ಗ್ರಹಹೀನೇ ಸುವಾಸಿನೀ ॥

ಸ್ತ್ರೀಯಳು ಋತುಮತಿಯಾದ ನಕ್ಷತ್ರದಲ್ಲಿ ರವಿ ಇದ್ದರೆ– ಅವಳ ಪತಿ ನಾಶ ಹೊಂದುವನು. ಚಂದ್ರನಿದ್ದರೆ–ಗಂಡನಿಗೆ ಕಂಟಕವು, ಮಂಗಳನಿದ್ದರೆ– ಹುಟ್ಟಿದ ಮಕ್ಕಳು ಶೀಘ್ರವಾಗಿ ಸಾಯುವವು ಬುಧನಿದ್ದರೆ–ಬಂಜೆಯಾಗುವಳು ಗುರು ಇದ್ದರೆ– ಸುಖವಂತಳು, ವ್ರತನೇಮಾದಿ ಪೂಜಾನಿಷ್ಠಳು. ಜ್ಞಾನಿಯು ಶುಕ್ರನಿದ್ದರೆ–ಪುತ್ರ, ಪುತ್ರಿಯರಿಲ್ಲದವಳು, ಶನಿ ಇದ್ದರೆ, ಅನ್ಯರ ದಾಸಿಯಾಗಿ ಉಪಜೀವನ ಹೊಂದುವವಳು. ರಾಹು–ಕೇತುಗಳಿದ್ದರೆ-ವ್ಯಭಿಚಾರಿಣಿಯಾಗುವಳು, ಋತು ನಕ್ಷತ್ರದಲ್ಲಿ ಯಾವಗ್ರಹವೂ ಇಲ್ಲದಿದ್ದರೆ-ಆಕೆಯು ದೀರ್ಘಕಾಲ ಸುಮಂಗಲೆ ಯಾಗಳುವಳು.

ಕನ್ಯೆಯು ಪ್ರಥಮ ರಜಸ್ವಲೆಯಾಗುವಾಗ ಕಸಗೂಡಿಸುತ್ತಿದ್ದರೆ– ಕೈಯಲ್ಲಿ ಕಟ್ಟಿಗೆ, ಕಲ್ಲು, ಹುಲ್ಲು, ಬೆಂಕಿ, ಹಿಡಿದಾಗ ಮೈನೆರೆತರೆ ಬಹು ದೋಷವು. ಮಕ್ಕಳೊಡನೆ ಆಟವಾಡುವಾಗ, ದೇವತಾ ಪೂಜೆ ಮಾಡುತ್ತಿರುವಾಗ ಋತುಮತಿಯಾದರೆ ಶುಭಕರವು.

— ಆರ್ತವಲಗ್ನ ಗ್ರಹಫಲ —

ಶ್ಲೋಕ :-ಕೇಂದ್ರ ತ್ರಿಕೋಣಾಯ ಧನ ಸ್ಥಿತಾಶ್ಚ ಶುಭಾಸ್ತ್ರಿ ಷಷ್ಠಾಯ
ಗತಾಶ್ಚ ಪಾಪಾಃ|
ಶುಭಪ್ರದಾಶ್ಯುಃ ಪ್ರತಮಾರ್ತ ಕಾಲೇ ತಥಾ ವಿಧಿಜ್ಞಾಜ
ಗುರಾರ್ಯವರ್ಯಾ ಃ||

ಕನ್ಯೆಯ ಪ್ರಥಮ ರಜೋದರ್ಶನ ಲಗ್ನದಲ್ಲಿ ೧-೨-೪-೭ ೯-೧೦-೧೧ ಈ ಸ್ಥಾನದಲ್ಲಿ ಶುಭಗ್ರಹಗಳು ೩-೬-೧೧ ಈ ಸ್ಥಾನಗಳಲ್ಲಿ ಪಾಪಗ್ರಹಗಳು ಇದ್ದರೆ ಶುಭ ಪ್ರದವು. ಮತ್ತು ಋತುವಾದ ಲಗ್ನಕ್ಕೆ ೮ನೇ ಸ್ಥಾನದಲ್ಲಿ ಚಂದ್ರನಿದ್ದರೆ ಪತಿಗೆ ಅರಿಷ್ಟವು. ಆದರೆ ಆ ಕಾಲದಲ್ಲಿ ಚಂದ್ರಬಲ, ತಾರಾಬಲ ಯುಕ್ತವಾಗಿದ್ದರೆ ಪೌತ್ರಧನ, ಕನಕಾಭಿವೃದ್ಧಿಯುಂಟಾಗುವದು. ಋತು ಲಗ್ನಕ್ಕೆ ೩-೬-೧೧ನೇ ಸ್ಥಾನಗಳಲ್ಲಿ ಕುಜನಾಗಲಿ, ಚಂದ್ರನಾಗಲಿ ಇದ್ದರೆ ಸತ್ಪುತ್ರ ಸಂತಾನವಾಗುವದು. ಋತು ಲಗ್ನಕ್ಕೆ ೭ನೆಯ ಸ್ಥಾನದಲ್ಲಿ ರವಿ ಇದ್ದರೆ ಶೀಘ್ರದಲ್ಲಿಯೇ ಪತಿಗೆ ಕಂಟಕವು. ಚಂದ್ರನಿದ್ದರೆ ಪುತ್ರಪೌತ್ರರ ಅಭಿವೃದ್ಧಿಯು ಸಂಪತ್ತಿಯು ಕುಜನಿದ್ದರೆ - ವ್ಯಭಿಚಾರ ಮಾರ್ಗಾವಲಂಬನವು. ಬುಧನಿದ್ದರೆ—ಬಂಜೆತನವು ಗುರು ಇದ್ದರೆ—ಸೌಭಾಗ್ಯವು. ಶುಕ್ರನಿದ್ದರೆ—ತೀರ್ಥಕ್ಷೇತ್ರ ದರ್ಶನವು, ದೇಶ ಸಂಚಾರವು ಶನಿಯಿದ್ದರೆ—ರೋಗಪೀಡೆಯು ರಾಹು ಇದ್ದರೆ-ಜಾರತ್ವವು, ಕೇತು ಇದ್ದರೆ-ಆಪ್ತೇಷ್ಟರೊಡನೆ ವಿರೋಧವು, ಕಲಹವು.

— ರಜಸ್ವಲಾಚಕ್ರ —

ರಜಸ್ವಲಾ ಯಾಂ ಕನ್ಯಾಯಾಂದಿಕ್ಚಕ್ರೇಭಾನಿ ವಿನ್ಯಸೇತ್|
ಪ್ರಾಚ್ಯಾದಿ ದಿಕ್ಷುಚತ್ವಾರಿ ತ್ರೀಣಿ ತ್ರೀಣಿ ವಿದಿಕ್ಷುಚ||

ಕನ್ಯೆಯು ಪ್ರಥಮ ಋತುಮತಿಯಾದ ಸಮಯದಲ್ಲಿ ಪೂರ್ವ ಆಗ್ನೇಯ, ದಕ್ಷಿಣ, ನೈರುತ್ಯ, ಪಶ್ಚಿಮ, ವಾಯುವ್ಯ, ಉತ್ತರ, ಈಶಾನ್ಯ, ಈ ಪ್ರಕಾರ ೮ ದಿಕ್ಕುಗಳನ್ನು ಬರೆದು ಆ ದಿವಸ ಸೂರ್ಯನಿರುವ (ಮಹಾ) ನಕ್ಷತ್ರದಿಂದ ಪೂರ್ವ ದಿಕ್ಕಿನಲ್ಲಿ ೪ ನಕ್ಷತ್ರಗಳು ಆಗ್ನೇಯದಲ್ಲಿ ೩ ದಕ್ಷಿಣದಲ್ಲಿ ೪ ನೈಋತ್ಯದಲ್ಲಿ ೩ ಪಶ್ಚಿಮದಲ್ಲಿ ೪ ವಾಯುವ್ಯದಲ್ಲಿ ೩ ಉತ್ತರದಲ್ಲಿ ೪ ಈಶಾನ್ಯದಲ್ಲಿ ೩ ಈ ಪ್ರಕಾರ ನಕ್ಷತ್ರಗಳನ್ನು ಬರೆಯಬೇಕು ಮತ್ತು ಋತು ನಕ್ಷತ್ರವು ಯಾವ ದಿಕ್ಕಿನಲ್ಲಿ ಬರುವದೆಂಬುದನ್ನು ತಿಳಿಯಬೇಕು. ಋತು ನಕ್ಷತ್ರವು ಪೂರ್ವ,

ದಕ್ಷಿಣ, ಪಶ್ಚಿಮ, ಉತ್ತರ ದಿಕ್ಕುಗಳಲ್ಲಿ ಬಂದರೆ ಹಾಗೂ ಋತು ನಕ್ಷತ್ರವು ಈ ದಿಕ್ಕುಗಳಲ್ಲಿ ೧ನೆಯ ನಕ್ಷತ್ರವಾದರೆ ಆಯುಷ್ಯವು. ೨ನೆಯ ನಕ್ಷತ್ರವಾದರೆ ಸಂಪತ್ತು ೩ನೆಯ ನಕ್ಷತ್ರವಾದರೆ ವೈಧವ್ಯವು ೪ನೆಯ ನಕ್ಷತ್ರವಾದರೆ ಪುತ್ರವತಿಯು ಈ ಪ್ರಕಾರ ಫಲವು ಮತ್ತು ಋತು ನಕ್ಷತ್ರವು ಆಗ್ನೇಯ, ನೈರುತ್ಯ ವಾಯುವ್ಯ, ಈಶಾನ್ಯ ಈ ದಿಕ್ಕುಗಳಲ್ಲಿ ಬಂದರೆ ಹಾಗೂ ಋತು ನಕ್ಷತ್ರವು ಈ ದಿಕ್ಕುಗಳಲ್ಲಿ ೧ ನೆಯ ನಕ್ಷತ್ರವಾದರೆ ಘಾತಯವು ೨ ನೆಯ ನಕ್ಷತ್ರವಾದರೆ ರೋಗ ಪೀಡೆಯು, ೩ ನೆಯ ನಕ್ಷತ್ರವಾದರೆ ಮರಣವು ಎಂದು ತಿಳಿಯಬೇಕು ಅಂದರೆ ಋತುವಾದ ನಕ್ಷತ್ರವು ಸೂರ್ಯನಿರುವ ನಕ್ಷತ್ರದಿಂದ ೧-೨-೪-೮-೯-೧೧-೧೫-೧೬-೧೮.೨೨-೨೩-೨೫ನೆಯ ನಕ್ಷತ್ರವಾದರೆ ಶುಭ ಫಲವು-೩-೫-೬-೭-೧೦-೧೨-೧೩-೧೪-೧೭-೧೯-೨೦-೨೧-೨೪-೨೬-೨೭-೨೮ ನೆಯದಾದರೆ ಅಶುಭ ಫಲವೆಂದು ತಿಳಿಯಬೇಕು. ಈ ನಕ್ಷತ್ರಗಳನ್ನು ಎಣಿಸುವಾಗ ಅಭಿಜಿತ್ ನಕ್ಷತ್ರವನ್ನು ಸಹಿತ ಕೂಡಿಸಿ ಅಶ್ವಿನಿಯಿಂದ ರೇವತಿ ವರೆಗೆ ೨೮ ನಕ್ಷತ್ರಗಳನ್ನು ಗಣನೆ ಮಾಡಬೇಕು.

ಉದಾಹರಣೆ— ಶಕೆ ೧೮೮೦ ಮಾಘ ಶು. ೭ ರವಿವಾರ ತಾರೀಖು ೨೫ ೧-೧೯೫೯ ನೆಯ ದಿವಸ ರೇವತಿ ನಕ್ಷತ್ರದಲ್ಲಿ ಪ್ರಥಮ ಋತುಮತಿಯಾಗಿದ್ದಾಳೆ ಇದರ ಫಲ ನೋಡಿರಿ.

ಈ ದಿವಸ ರವಿಯು ಉತ್ತರಾಷಾಢ ನಕ್ಷತ್ರದಲ್ಲಿ ಇದ್ದಾನೆ. ಈ ನಕ್ಷತ್ರದಿಂದ ೮ ದಿಕ್ಕುಗಳಲ್ಲಿ ನಕ್ಷತ್ರಗಳನ್ನು ಕೆಳಗೆ ತೋರಿಸಿದಂತೆ ಸ್ಥಾಪಿಸಬೇಕು.

ರಜಸ್ವಲಾ ನಕ್ಷತ್ರ ಚಕ್ರ

ದಿಕ್ಕುಗಳು	ಪೂರ್ವ	ಆಗ್ನೇಯ	ದಕ್ಷಿಣ	ನೈಋತ್ಯ	ಪಶ್ಚಿಮ	ವಾಯವ್ಯ	ಉತ್ತರ	ಈಶಾನ್ಯ
೧	ಉಷಾ	ಶತ	ರೇವತಿ	ರೋಹಿಣಿ	ಪುನ	ಹುಬ್ಬ	ಚಿತ್ತ	ಜ್ಯೇಷ್ಠ
೨	ಅಭಿ	ಪೂಭಾ	ಅಶ್ವಿನಿ	ಮೃಗ	ಪುಷ್ಯ	ಉತ್ತರ	ಸ್ವಾತಿ	ಮೂಲ
೩	ಶ್ರವಣ	ಉಭಾ	ಭರಣಿ	ಆರಿದ್ರ	ಆಶ್ಲೇಷ	ಹಸ್ತ	ವಿಶಾಖ	ಪೂಷಾ
೪	ಧನಿಷ್ಠ		ಕೃತ್ತಿಕ		ಮಘೆ		ಅನುರಾಧ	

ಈಗ ಋತುವಾದ ನಕ್ಷತ್ರ ರೇವತಿ ಇದ್ದು ದಕ್ಷಿಣ ದಿಕ್ಕಿನಲ್ಲಿ ಬಂದಿದೆ ಮತ್ತು ೧ ನೆಯ ನಕ್ಷತ್ರವಾಗಿದೆ. ಆದ್ದರಿಂದ ಇದರ ಫಲವು ಆಯುಷ್ಯವು. ಅಂದರೆ ಶುಭವು. ಮತ್ತು ಉತ್ತರಾಷಾಢದಿಂದ ರೇವತಿ ನಕ್ಷತ್ರವು ೮ ನೆಯ ದಾಗುವದರಿಂದ ಅದರ ಫಲವು ಸಹಶುಭವಿದೆ. ಈ ಪ್ರಕಾರ ಬೇಕಾದ ನಕ್ಷತ್ರದ ಫಲ ತಿಳಿಯಬೇಕು.

ಪ್ರಶ್ನಕರ್ತನ ದಿಕ್ಕಿನಿಂದ ವಸ್ತ್ರ, ಬಿಂದು, ಮಕ್ಕಳ ಸಂಖ್ಯೆ ತಿಳಿಯುವದು

ಪ್ರಥಮ ರಜೋದರ್ಶನ ಕಾಲದೊಳು ಈ ವಿಷಯವನ್ನು ಕುರಿತು ಪ್ರಶ್ನೆ ಮಾಡುವವನು ಪೂರ್ವಕ್ಕೆ ಮುಖಮಾಡಿ ನಿಂತು ಕೇಳಿದರೆ— ಆಸ್ತ್ರೀಯಳು ಹಳಿಯದಾದ ಹರಿದಂಥ ಬಟ್ಟೆಯನ್ನು ಧರಿಸಿದವಳೆಂದೂ, ಅವಳಿಗೆ ಮೂರು ರಜೋ ಬಿಂದುಗಳಾಗಿವೆಯೆಂದೂ, ಆಕೆಗೆ ಏಳುಜನ ಮಕ್ಕಳಾಗುವರೆಂದೂ ಹೇಳಬೇಕು.

ಆಗ್ನೇಯ ದಿಕ್ಕಿಗೆ ಮುಖಮಾಡಿ ಪ್ರಶ್ನೆ ಮಾಡಿದರೆ-ಆ ಸ್ತ್ರೀಯಳು ಕಪ್ಪು ಬಣ್ಣದ ಬಟ್ಟೆ ಧರಿಸಿರುವಳೆಂದೂ, ಅವಳಿಗೆ ಮೂರು ರಜೋಬಿಂದುಗಳು ಕಾಣಿಸಿಕೊಂಡಿವೆಯೆಂದೂ, ಆಕೆಗೆ ಒಬ್ಬ ಮಗನಾಗುವನೆಂದೂ ತಿಳಿಸಬೇಕು.

ದಕ್ಷಿಣ ದಿಕ್ಕಿಗೆ ಮುಖಮಾಡಿ ಪ್ರಶ್ನೆ ಮಾಡಿದರೆ— ಆಸ್ತ್ರೀಯಳು ಕೆಂಪು ಬಣ್ಣದ ಬಟ್ಟೆಯನ್ನು ಧರಿಸಿರುವಳೆಂದೂ, ಅವಳಿಗೆ ನಾಲ್ಕು ರಜೋಬಿಂದುಗಳುಂಟಾಗಿವೆಯೆಂದೂ, ಆಕೆಗೆ ಎಂಟುಜನ ಮಕ್ಕಳಾಗುವರೆಂದೂ ತಿಳಿಸಬೇಕು.

ನೈರುತ್ಯ ದಿಕ್ಕಿಗೆ ಮುಖಮಾಡಿ ಪ್ರಶ್ನೆ ಕೇಳಿದರೆ–ಆಸ್ತ್ರೀಯಳು ಬಿಳಿಯ ಬಣ್ಣದ ಬಟ್ಟೆಯನ್ನು ಧರಿಸಿರುವಳೆಂದೂ. ಅವಳಿಗೆ ನಾಲ್ಕು ರಜೋ ಬಿಂದುಗಳಾಗಿವೆಯೆಂದೂ, ಆಕೆಗೆ ನಾಲ್ಕು ಜನ ಮಕ್ಕಳಾಗುವರೆಂದೂ ಹೇಳಬೇಕು.

ಪಶ್ಚಿಮದಿಕ್ಕಿಗೆ ಮುಖಮಾಡಿ ಪ್ರಶ್ನೆ ಮಾಡಿದರೆ – ಆಸ್ತ್ರೀಯಳು ಮಲಿನವಾದ ಬಟ್ಟೆಯನ್ನು ಧರಿಸಿರುವಳೆಂದೂ. ಆಕೆಗೆ ಎರಡು ರಜೋ ಬಿಂದುಗಳು ಕಾಣಿಸಿಕೊಂಡಿವೆಯೆಂದೂ ಮತ್ತು ಆರುಜನ ಮಕ್ಕಳಾಗುವರೆಂದೂ ಹೇಳಬೇಕು.

ವಾಯುವ್ಯ ದಿಕ್ಕಿಗೆ ಮುಖಮಾಡಿ ನಿಂತು ಪ್ರಶ್ನೆ ಕೇಳಿದರೆ— ಆಸ್ತ್ರೀಯಳು ಕೇಸರಿ ಬಣ್ಣ ಕಾವಿ ಬಣ್ಣದ ಬಟ್ಟೆ ಧರಿಸಿರುವಳೆಂದೂ, ಆಕೆಗೆ ಎರಡು

ರಜೋಬಿಂದುಗಳು ಕಂಡಿವೆಯೆಂದೂ ಮತ್ತು ಅವಳಿಗೆ ಇಬ್ಬರು ಮಕ್ಕಳಾಗುವರೆಂದೂ ತಿಳಿಸಬೇಕು.

ಉತ್ತರ ದಿಕ್ಕಿಗೆ ಮುಖಮಾಡಿ ನಿಂತು ಪ್ರಶ್ನೆಮಾಡಿದರೆ–ಆ ಸ್ತ್ರೀಯಳು ಅನೇಕ ಬಣ್ಣಗಳಿಂದ ಕೂಡಿದ ಚಿತ್ರ ವಿಚಿತ್ರವಾದ ಬಟ್ಟೆಯನ್ನು ಧರಿಸಿರುವಳೆಂದೂ ಆಕೆಗೆ ಒಂದೇ ಬಿಂದುವು ಕಾಣಿಸಿಕೊಂಡಿದೆಯೆಂದೂ ಮತ್ತು ಅವಳಿಗೆ ಒಂಭತ್ತು ಜನ ಮಕ್ಕಳಾಗುವರೆಂದೂ ಹೇಳಬೇಕು.

ಈಶಾನ್ಯದಿಕ್ಕಿಗೆ ಮುಖ ಮಾಡಿ ನಿಂತು ಪ್ರಶ್ನ ಮಾಡಿದರೆ-ಆಸ್ತ್ರೀಯಳು ಗೈರಿಕ (ಕಾವಿ)ವರ್ಣದ ಮಡಿ, ಪೀತಾಂಬರಗಳನ್ನು ಧರಿಸಿರುವಳೆಂದೂ ಆಕೆಗೆ ಒಂದು ರಜೋಬಿಂದು ಕಾಣಿಸಿಕೊಂಡಿದೆಯೆಂದೂ ಮತ್ತು ಆ ಸ್ತ್ರೀಯಳಿಗೆ ಹತ್ತು ಜನ ಮಕ್ಕಳಾಗುವರೆಂದೂ ತಿಳಿಸಬೇಕು.

ರಜಸ್ವಲಾದೋಷ ಶಾಂತಿ ಪರಿಹಾರಕ್ಕಾಗಿ ನಮ್ಮ ಪುರೋಹಿತ ಚಿಂತಾಮಣಿ ಅಥವಾ ಶಾಂತಿ ಪ್ರಯೋಗರತ್ನ ಗ್ರಂಥವನ್ನು ತರಿಸಿ ನೋಡಿರಿ.

ಬೆಲೆ. ೧೦-೦೦

— ರಜಸ್ವಲೆಯಾದ ಪತ್ರಿಕೆ ಬರೆಯುವ ನಮೂನೆ —

ಶ್ರೀ

ಜನನೀ ಜನ್ಮ ಸೌಖ್ಯಾನಾಂ ವರ್ಧಿನೀ ಕುಲಸಂಪದಾಂ ।
ಪದವೀ ಪೂರ್ವ ಪುಣ್ಯಾನಾಂ ಲಿಖ್ಯತೇ ಋತು ಪತ್ರಿಕಾ ॥

ಸ್ವಸ್ತಿ ಶ್ರೀವಿಜಯಾಭ್ಯುದಯ ಶ್ರೀ ಮನ್ನೃಪ ಶಾಲಿವಾಹನ ಶಕೆ೧೮೯೦ಕೀಲಕ ನಾಮ ಸಂವತ್ಸರ ಉತ್ತರಾಣ ಶಿಶಿರಋತು ಮಾಘಮಾಸ ಶುಕ್ಲಪಕ್ಷ ಸಪ್ತಮಿ ಶುಕ್ರವಾರ ರೇವತಿ ನಕ್ಷತ್ರಗಳಿಗೆ ೨೯ ಫಳ ೩೫ ಸಿದ್ಧಯೋಗ ಗಳಿಗೆ ೨೫ ಫಳ ೪೧ಗರಜಕರಣಗಳಿಗೆ ೨೪ಫಳ ೮ಅಹಃ ಪ್ರಮಾಣಗಳಿಗೆ ೨೭ಫಳ ೫೮ ಉದಯ ಲಗ್ನ ಭುಕ್ತಿ ಕಾಲಗಳಿಗೆ ೧ ಫಳ ೪೮ ಸೂರ್ಯೋದಯಕಾಲ ಗಂಟೆ, ೭ ಮಿನಿಟು ಸೂರ್ಯಾಸ್ತಕಾಲ ಗಂಟೆ ೬ ಮಿನಿಟು ೧೫ ತಾರೀಖು ೨೪ ಜನೇವರಿ ೧೯೬೯ ಈ ದಿವಸ ಸೂರ್ಯೋದಯಾದಿ ಋತು ಕಾಲಗಳಿಗೆ ೬ ಫಳ ೧೧ ಸ್ಟ್ಯಾಂಡರ್ಡ ಟಾಯಮ್ ಉದಯ ೯-೩೦ (A.M) ಈ ಸಮಯದೊಳು ಕುಂಭಲಗ್ನದಲ್ಲಿ ಶ್ರೀ ಮದುಮಾರಮಣ ಚರಣ ಸೇವಕ, ಶಿವಭಕ್ತ ಪ್ರೇಮಿ ಗದಗ ಗ್ರಾಮ ನಿವಾಸಿಗಳಾದ ಶ್ರೀಯುತ ಶಿವಾನಂದಪ್ಪ ಬೆಟಗೇರಿ ಇವರ ಧರ್ಮ

ಪತ್ನಿ ಶ್ರೀಮತಿ ಪಾರ್ವತೆಮ್ಮ ಈ ದಂಪತಿಗಳ ಪುತ್ರಿ ಶ್ರೀಮತಿ ಶಶಿಕಲಾ ಇವಳು ಪ್ರಥಮ ಪುಷ್ಪವತಿಯಾದವಳು.

ವಾರ— ಶುಕ್ರ
ತಿಥಿ— ಸಪ್ತಮಿ
ನಕ್ಷತ್ರ— ರೇವತಿ
ಯೋಗ— ಸಿದ್ಧ
ಕರಣ— ಗರಜ
ಸಮಯ— ಪೂರ್ವಾಹ್ಣ
ಸ್ಥಾನ— ದೇವರಮನೆ

ಲಗ್ನ— ಕುಂಭ
ರಾಶಿ— ಮೀನ
ಹೋರಾ— ಶನಿ
ಉಟ್ಟವಸ್ತ್ರ— ಬಿಳಿದು
ಬಿಂದು— ಎರಡು
ಫಲ— ಶುಭಪ್ರದ

— ಋತುಲಗ್ನ ಕುಂಡಲಿ —

೧೨ ಚಂ ಶರಾ	೧	೨	೩
೧೧ ಶ: ಲಗ್ನ	ಕುಂಭಲಗ್ನ		೪
೧೦ ರ ಬು			೫
೯	೮	೭ ಕು	೬ ಗು ಕೇ

(ನಂತರ ವಾರ, ತಿಥಿ, ನಕ್ಷತ್ರ, ಯೋಗ, ಕರಣಾದಿಗಳ ಸಂಪೂರ್ಣ ಫಲಗಳನ್ನು ಬರೆಯಬೇಕು. ಕೊನೆಯಲ್ಲಿ)

ಬ್ರಹ್ಮಾಕರೋತು ದೀರ್ಘಾಯುಃ ವಿಷ್ಣುಃ ಕುರ್ಯಾಶ್ಚಸಂಪದಾಂ |
ಹರೋರಕ್ಷತು ಗಾತ್ರಾಣಿ ಯಸ್ಯೈಷಾಂ ಋತು ಪತ್ರಿಕಾ ||

ಶುಭಂ ಭವತು

ಈ ಪ್ರಕಾರ ರಜಸ್ವಲಾ ಪತ್ರಿಕೆಯನ್ನು ಬರೆದು ಮು‍ಸಬೇಕು.

ಭದ್ರಂ— ಶುಭಂ— ಮಂಗಲಂ

[ಬೆಲೆ : 5-00]